ಸಂಪುಟ ೧೫ ಸಂಚಿಕೆ ೪

ಡಿಸೆಂಬರ್ 1994

ಬ್ಯಾಂಕಿಂಗ್ ಪ್ರಪಂಚ

ವಾರ್ಷಿಕ ಚಂದಾ : ರೂ. 20
ಆಜೀವ ಚಂದಾ : ರೂ. 200

ಈ ಸಂಚಿಕೆಯಲ್ಲಿ

ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್, ನಂ. ೨೨ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೫೬೦೦೦೨

ಹಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

ಬೆಳ್ಳಿ ಕಮ್ಮಟ

ಬಿ. ಎಸ್. ಚಂದ್ರಶೇಖರ್
ಕಾರ್ಯಾಧ್ಯಕ್ಷರು

ಜಯಂತಿ ಮನೋಹರ್
ಕಮ್ಮಟ ಕಾರ್ಯದರ್ಶಿ, ಸಮನ್ವಯ ಸಮಿತಿ

ಮೈಸೂರಿನಲ್ಲಿ ನಡೆದ ವೈಶಿಷ್ಟ್ಯಪೂರ್ಣವಾದ ಇಪ್ಪತ್ತೈದನೆಯ ಬ್ಯಾಂಕಿಂಗ್ ಕಮ್ಮಟದ ವರದಿ

ಸಾರ್ವಜನಿಕ ಸಂಪರ್ಕವಿರುವ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲೂ ಕನ್ನಡದ ಬಳಕೆ ಅನಿವಾರ್ಯವಾಗಿ ಆಗಬೇಕೆಂಬುದು ಎಲ್ಲೆಡೆ ಕೇಳಿ ಬರುತ್ತಿದ್ದರೂ ಇನ್ನೂ ಅದರ ಸಾಧನೆಯಾಗದಿರುವುದಕ್ಕೆ ಪ್ರಮುಖವಾಗಿ ಎರಡು ಕಾರಣಗಳನ್ನು ಕೊಡಬಹುದು. ಮೊದಲನೆಯದು, ಆಯಾ ಕಾರ್ಯಕ್ಷೇತ್ರಕ್ಕೆ ಬೇಕಾದ ವಿಶಿಷ್ಟ ಆಕರ ಗ್ರಂಥಗಳ ಕೊರತೆ ; ಎರಡನೆಯದು ಕನ್ನಡದ ಬಳಕೆಗೆ ಸಜ್ಜಾಗಿರುವ ಹುರಿಯಾಳುಗಳ ಕೊರತೆ. ಇವೆರಡೂ ಕಾರ್ಯಗಳನ್ನು ಸವಾಲಿನಂತೆ ಸ್ವೀಕರಿಸಿ, ಈಗ್ಗೆ 15 ವರುಷಗಳ ಹಿಂದೆ ಭಾರತೀಯ ಸ್ಟೇಟ್ ಬ್ಯಾಂಕಿನ ಬೆರಳೆಣಿಕೆಯಷ್ಟು ಉದ್ಯೋಗಿಗಳು ತಮ್ಮ ಹೆಬ್ಬಯಕೆಯನ್ನು ಸಾಧಿಸಲು 'ಎಚ್ಚೆಸ್ಕೆ'ಯವರನ್ನು ಅರಸುತ್ತಾ ಬಂದದ್ದು ಕನ್ನಡಿಗರ ಹೆಮ್ಮೆಯ ಚಾರಿತ್ರಿಕ ನಗರ ಮೈಸೂರಿಗೆ. 1982ರ ಏಪ್ರಿಲ್ ಮಾಹೆಯಲ್ಲಿ ಪ್ರಾಚಾರ್ಯ 'ಎಚ್ಚೆಸ್ಕೆ' ಯವರ ನಿರ್ದೇಶನದಲ್ಲಿ ಪ್ರಾರಂಭವಾದ ಒಂದು ವಿಶಿಷ್ಟ ಪ್ರಯೋಗವಾದ 'ಬ್ಯಾಂಕಿಂಗ್ ಕಮ್ಮಟ' ಈಗ ಸಂಭ್ರಮದ 'ಬೆಳ್ಳಿ ಕಮ್ಮಟ'ವನ್ನು ಆಚರಿಸಿದೆ.

ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳನ್ನು ಪ್ರತಿನಿಧಿಸುವ ಸಮನ್ವಯ ಸಮಿತಿಯ ಕಾರ್ಯಕರ್ತರ ಹಾಗೂ ಪ್ರಾಚಾರ್ಯ 'ಎಚ್ಚೆಸ್ಕೆ'ಯವರ ನಡುವೆ ಏರ್ಪಟ್ಟಿರುವ ಒಂದು ಮಧುರ ಬಾಂಧವ್ಯವೇ 25 ಕಮ್ಮಟಗಳ ಹಿಂದಿರುವ ಶಕ್ತಿ. ಏಪ್ರಿಲ್ 1982 ರಿಂದ ಮೊದಲ್ಗೊಂಡು ವರ್ಷಕ್ಕೆ ಎರಡರಂತೆ, ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಕಮ್ಮಟಗಳನ್ನು ನಡೆಸಿ, ಕರ್ನಾಟಕದ ಹೊರಗಡೆಯೂ ಎರಡು ಕಮ್ಮಟಗಳನ್ನು (ಸೋಲ್ಲಾಪುರ ಹಾಗೂ ಕಾಸರಗೋಡು) ನಡೆಸಿ, 25ನೆಯ 'ಬೆಳ್ಳಿ ಕಮ್ಮಟ'ಕ್ಕೆ ಮತ್ತೆ ಮೈಸೂರಿಗೆ ಮರಳಿರುವ ಸಫಲತೆಯ ಹೆಜ್ಜೆಗಳನ್ನು ಗುರುತಿಸುತ್ತಾ ಹೋದಾಗ ಪ್ರಮುಖವಾಗಿ ಮೂರು ಅಂಶಗಳು ಕಾಣುತ್ತವೆ. ಮೊದಲನೆಯದಾಗಿ, 'ಬ್ಯಾಂಕಿಂಗ್ ನಿಘಂಟು' ಮುಂತಾದ ಆಕರ ಗ್ರಂಥಗಳ ಪ್ರಕಟಣೆ, ಹಾಗೂ 'ಬ್ಯಾಂಕಿಂಗ್ ಪ್ರಪಂಚ'ದಂತಹ ತ್ರೈಮಾಸಿಕ ಪತ್ರಿಕೆಯ ಪ್ರಕಟಣೆಗಳು ; ಎರಡನೆಯದಾಗಿ, 25 ಕಮ್ಮಟಗಳಲ್ಲಿ ಭಾಗವಹಿಸಿರುವ ನೂರಾರು ಕಮ್ಮಟಿಗರು ಕನ್ನಡದ ಬಳಕೆಗಾಗಿ ಪಣತೊಟ್ಟು ಇತರರನ್ನೂ ಹುರಿದುಂಬಿಸುವಲ್ಲಿ ಸಮರ್ಥರಾಗಿ. ಭಾರತೀಯ ಸ್ಟೇಟ್ ಬ್ಯಾಂಕು ಹಾಗೂ ಮೈಸೂರು ಬ್ಯಾಂಕುಗಳಲ್ಲಿ ಯಶಸ್ವಿ ಕಮ್ಮಟಗಳ ಸಂಘಟನೆಯಾಗಿರುವುದು. ಮೂರನೆಯದಾಗಿ, ಬ್ಯಾಂಕಿಂಗ್ ವ್ಯವಸ್ಥೆಯ ಅಂಗವಾಗಿರುವ ತರಪೇತಿ ಕೇಂದ್ರಗಳಲ್ಲಿ ನಿರ್ವಹಿಸಬೇಕಾಗಿರುವ ಕಾರ್ಯವನ್ನು ಅತ್ಯಂತ ಸಫಲ ರೀತಿಯಲ್ಲಿ ಮಾಡುತ್ತಿರುವ 'ಬ್ಯಾಂಕಿಂಗ್ ಕಮ್ಮಟ'ಗಳಲ್ಲಿ ಬ್ಯಾಂಕಿನ ಆಡಳಿತ ವರ್ಗಕ್ಕೆ ಒಲವು ಮೂಡಿರುವುದು. ಈ ಎಲ್ಲಾ ಸಾಧನೆಗಳ ಹಿಂದೆ ಭಾರತೀಯ ಸ್ಟೇಟ್ ಬ್ಯಾಂಕ್ ಸಮನ್ವಯ ಸಮಿತಿ, ಮೈಸೂರು ಬ್ಯಾಂಕ್ ಕನ್ನಡ ಬಳಗ ಹಾಗೂ ಇತರ ಕಾರ್ಯಕರ್ತರ ನಿರಂತರ ಶ್ರಮ ಮತ್ತು ಪ್ರಾಚಾರ್ಯ ಎಚ್ಚೆಸ್ಕೆಯವರ ಅಮಿತ ಉತ್ಸಾಹ ಹಾಗೂ ಅವಿರತ ಕಾರ್ಯಗಳನ್ನು ಗುರುತಿಸಬಹುದು. 12 ವರುಷಗಳ ಕಠಿಣ ಹಾದಿಯನ್ನು ಕ್ರಮಿಸಿ, ಮತ್ತಷ್ಟು ಕನಸುಗಳನ್ನು ಹೊತ್ತು, ಬೆಳ್ಳಿಕಮ್ಮಟದ ಸಂಭ್ರಮವನ್ನು ಸವಿಯಲು ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದ ಕನ್ನಡ ಕಾರ್ಯಕರ್ತರು ಮೈಸೂರಿನಲ್ಲಿ ಸೇರಿದ್ದರು.

23.10.94ರಂದು ಬೆಳಗ್ಗೆ 10.30ಕ್ಕೆ ಕಮ್ಮಟದ ಉದ್ಘಾಟನೆ ಭಾರತೀಯ ಸ್ಟೇಟ್ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ (ಆಯೋಜನೆ) ಶ್ರೀ ಕೆ. ನಂದನ್ ಅವರಿಂದ ನೆರವೇರಿತು. ಕನ್ನಡದಲ್ಲಿದ್ದ ಅವರ ಭಾಷಣ ಶ್ರೋತೃಗಳ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಸಮಿತಿಯ ಚಟುವಟಿಕೆಯನ್ನು ಶ್ಲಾಘಿಸಿದ ಶ್ರೀಯುತರು ಇಂಥ ರಚನಾತ್ಮಕ ಕಾರ್ಯಕ್ರಮಗಳಿಗೆ ಬ್ಯಾಂಕು ಸದಾ ಪ್ರೋತ್ಸಾಹಿಸುವುದು ಎಂದರು. ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ॥ ಎಂ. ಮಾದಯ್ಯನವರು 'ಬೆಳ್ಳಿ ಕಮ್ಮಟ ಸವಿಸಂಚಿಕೆ' ಬಿಡುಗಡೆ ಮಾಡಿದರು. ಕಮ್ಮಟ ಚಳವಳಿಗೆ ಬೆಂಬಲ ನೀಡಿದ ವ್ಯಕ್ತಿ ಸಂಸ್ಥೆಗಳಿಗೆ ನೆನಪಿನ ಕಾಣಿಕೆಗಳನ್ನು ಎಚ್ಚೆಸ್ಕೆಯವರು ವಿತರಿಸಿದರು,

ಅದೇ ದಿನ ಮಧ್ಯಾಹ್ನ 'ಪ್ರಚಲಿತ ಬ್ಯಾಂಕಿಂಗ್' ಕುರಿತ ವಿಚಾರ ಸಂಕಿರಣ ನಡೆಯಿತು. ಶಿವಮೊಗ್ಗದ ಡಿ.ವಿ.ಎಸ್. ಕಾಲೇಜಿನ ಉಪನ್ಯಾಸಕ ಶ್ರೀ ಬಿ. ಎಂ. ಕುಮಾರಸ್ವಾಮಿ, ಮೈಸೂರು ಮಹಾ

ರಾಜಾ ಕಾಲೇಜಿನ ಶ್ರೀ ಕೇಶವ, ವಿಜಯಾ ಬ್ಯಾಂಕಿನ ಮುಖ್ಯ ವ್ಯವಸ್ಥಾಪಕ ಶ್ರೀ ಭಾಸ್ಕರ ಭಂಡಾರಿ ಹಾಗೂ ಪ್ರಾ॥ ಎಚ್ಚೆಸ್ಕೆ ಬ್ಯಾಂಕಿಂಗ್ ವ್ಯವಸ್ಥೆಯು ಎದುರಿಸುತ್ತಿರುವ ಸವಾಲುಗಳನ್ನು ವಿಶ್ಲೇಷಿಸಿದರು. ಶ್ರೀ ಬಿ. ಎಸ್. ಚಂದ್ರಶೇಖರ್ ವಿಚಾರ ಸಂಕಿರಣವನ್ನು ನಿರ್ವಹಿಸಿದರು.

ಸಂಜೆ 6.30ಕ್ಕೆ ಪ್ರಾ॥ ಎಚ್ಚೆಸ್ಕೆಯವರಿಗೆ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಇಪ್ಪತ್ತೈದು ಬ್ಯಾಂಕಿಂಗ್ ಕಮ್ಮಟಗಳನ್ನು ನಿರ್ದೇಶಿಸಿ, 'ಬ್ಯಾಂಕಿಂಗ್ ಪ್ರಪಂಚ' ಪತ್ರಿಕೆಗೆ 15 ವರ್ಷಗಳು ಸಂಪಾದಕತ್ವ ವಹಿಸಿರುವ ಪ್ರಾ॥ ಎಚ್ಚೆಸ್ಕೆಯವರು 'ಬ್ಯಾಂಕಿಂಗ್ ನಿಘಂಟು' ಮುಂತಾದ ಕೃತಿಗಳಿಂದ ಬ್ಯಾಂಕಿಂಗ್ ಸಾಹಿತ್ಯವನ್ನು ಸಮೃದ್ಧಗೊಳಿಸಿರುವುದನ್ನು ಪ್ರಸ್ತಾವಿಸಿದ ಪ್ರೊ॥ ಜಿ. ವೆಂಕಟಸುಬ್ಬಯ್ಯನವರು 'ಕಮ್ಮಟ', 'ಕಮ್ಮಟಿಗ' ಮುಂತಾದ ಅಚ್ಚ ಕನ್ನಡ ಶಬ್ದಗಳ ಬಳಕೆಯನ್ನು ಮೆಚ್ಚಿ ಪಾರಿಭಾಷಿಕ ಶಬ್ದಗಳ ಸೃಷ್ಟಿಯಲ್ಲಿ ಪ್ರಾಚಾರ್ಯ ಎಚ್ಚೆಸ್ಕೆಯವರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದರು. ಸಮನ್ವಯ ಸಮಿತಿಯ ಪರವಾಗಿ ಜೀವಿಯವರು ಎಚ್ಚೆಸ್ಕೆಯವರನ್ನು ಶಾಲು ಹೊದಿಸಿ ಸನ್ಮಾನಿಸಿದರು. ಎಚ್ಚೆಸ್ಕೆಯವರ ಶ್ರೀಮತಿಯವರನ್ನೂ ಯಥೋಚಿತವಾಗಿ ಆದರಿಸಿದ ಈ ಸಮಾರಂಭದಲ್ಲಿ ಅಪರೂಪದ ಸಂಭ್ರಮ ಬೆರೆತಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ॥ ಸಿ.ಪಿ.ಕೆ.ಯವರಿಂದ ಪ್ರೊ॥ ಜಿ. ವೆಂಕಟಸುಬ್ಬಯ್ಯನವರಿಗೆ ಗೌರವಾರ್ಪಣೆ ಸಂದಿತು. ಸನ್ಮಾನಕ್ಕೆ ಉತ್ತರಿಸಿದ ಎಚ್ಚೆಸ್ಕೆಯವರು "ಸಾಮಾನ್ಯವಾಗಿ ಲೆಕ್ಕಾಚಾರದವರಾದ ಬ್ಯಾಂಕಿನವರು ನನಗೆ ನೀಡಿರುವ ಈ ಮರ್ಯಾದೆಯಿಂದ ಎಲ್ಲೋ ಅವರ ಲೆಕ್ಕ ತಪ್ಪಿದೆ ಎನ್ನಿಸುತ್ತಿದೆ ; ನನ್ನ ಕಾಣಿಕೆ ಅಷ್ಟೇನೂ ದೊಡ್ಡದಲ್ಲ" ಎಂದು ವಿನಯ ತೋರಿ ಕಮ್ಮಟ ಚಳವಳಿ ಮುಂದುವರಿಯಬೇಕೆಂದು ಕರೆ ನೀಡಿದರು.

ಸನ್ಮಾನ ಸಮಾರಂಭದ ಅನಂತರ ನಮ್ಮ ಬ್ಯಾಂಕಿನ ಗಾಯಕಿಯರಾದ ಶ್ರೀಮತಿ ಇಂದುಮತಿ ವೆಂಕಟ್ ಮತ್ತು ಶ್ರೀವಳ್ಳಿಯವರ ಅಮೋಘವಾದ ಕನ್ನಡ ಗೀತೆಗಳ ಕಾರ್ಯಕ್ರಮ ಶ್ರೋತೃಗಳನ್ನು ಮೈಮರೆಸಿತು. ಮೊದಲ ದಿನದ ಎಲ್ಲ ಕಾರ್ಯಕ್ರಮಗಳೂ ಮೈಸೂರಿನ ಮಹಾರಾಜಾ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ನಡೆದುವು.

ಬುಧವಾರ (26–10–94) ಸಂಜೆ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಡಾ॥ ಎಚ್. ಎಂ. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ಮೈಸೂರಿನ ಪ್ರತಿಷ್ಠಿತ ಕವಿಗಳು ಹಾಗೂ ಕಮ್ಮಟದ ಕವಿಗಳು ಪಾಲ್ಗೊಂಡಿದ್ದರು.

ಉದ್ಘಾಟನಾ ಸಮಾರಂಭದ ಸಂಭ್ರಮವು ಕಮ್ಮಟದ ಆರು ದಿನಗಳಿಗೂ ಹರಡಿ, ಇತರ ಕಾರ್ಯಕಲಾಪಗಳಿಗೂ ಹಲವು ಬಗೆಯಲ್ಲಿ ವಿಶಿಷ್ಟ ಛವಿಯನ್ನು ತಂದಿತ್ತು. 24ರ ಬೆಳಗಿನಿಂದಲೇ ಪ್ರಬಂಧ ಮಂಡನಾ ಕಾರ್ಯ ಪ್ರಾರಂಭವಾಯಿತು. ಹೊಸಪೇಟೆ, ಸಾಗರ, ಬಳ್ಳಾರಿ, ಶಿವಪುರ, ಗುಲ್ಬರ್ಗ, ಬೆಂಗಳೂರು—ಹೀಗೆ ಕರ್ನಾಟಕದ ವಿವಿಧ ಪ್ರದೇಶಗಳಿಂದ ಬಂದಿದ್ದ ಕಮ್ಮಟಿಗರು ಹಾಗೂ ಮೈಸೂರಿನ ಕಮ್ಮಟಿಗರೂ ಸೇರಿ ನಿರ್ದೇಶಕ ಪ್ರಾ. ಎಚ್ಚೆಸ್ಕೆಯವರ ನೇತೃತ್ವದಲ್ಲಿ ಕಮ್ಮಟದ ಗರಡಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಮೈಸೂರು ಬ್ಯಾಂಕುಗಳಿಂದ ಅಧಿಕೃತವಾಗಿ ಬಂದವರು ಮತ್ತು ಸ್ವಂತ ಏರ್ಪಾಡಿನಿಂದ ಪೂರ್ಣಾವಧಿಗೆ ಮತ್ತು 2–3 ದಿನಗಳಿಗಾಗಿ ಬಂದವರು—ಎಲ್ಲಾ ಸೇರಿ ಒಟ್ಟು 36 ಕಮ್ಮಟಿಗರು ಬೆಳ್ಳಿ ಕಮ್ಮಟದ ಸವಿಯನ್ನು ನೇರವಾಗಿ ಪಡೆದರು. ಬೆಂಗಳೂರಿನ ಆಚಾರ್ಯ ಪಾಠಶಾಲಾ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಸಿ. ಗೋವಿಂದಾಚಾರ್ ಮತ್ತು ಮೈಸೂರಿನ ಬನುಮಯ್ಯ ಕಾಲೇಜಿನ ರೀಡರ್ ಆದ ಶ್ರೀ ಸಿಂಧುವಳ್ಳಿ ಬಾಲಸುಬ್ರಹ್ಮಣ್ಯಂರವರು ಕಮ್ಮಟದಲ್ಲಿ ಭಾಗವಹಿಸಿದರು.

ಪ್ರಬಂಧ ಮಂಡನೆಯಾದ ಮೇಲೆ ಪ್ರಧಾನ ವಿಮರ್ಶಕರೇ ಅಲ್ಲದೆ ಇತರ ಕಮ್ಮಟಿಗರ ವಿಮರ್ಶೆಯೂ ನಡೆದು ಪ್ರಬಂಧ ಮಂಡಕರು ತಮ್ಮ ಉತ್ತರವನ್ನು ಕೊಟ್ಟ ಅನಂತರ ನಿರ್ದೇಶಕರು ತಮ್ಮ ಪರಿಣತ ಅಭಿಪ್ರಾಯವನ್ನು ಕೊಡುವವರೆಗಿನ ಪ್ರಕ್ರಿಯೆಯಲ್ಲಿ ಎಂದಿನಂತೆಯೇ ಉತ್ಸಾಹದ ವಾತಾವರಣ ಹರಡಿತ್ತು. ಪ್ರಬಂಧದ ವಿಷಯ, ಭಾಷೆ, ಪಾರಿಭಾಷಿಕ ಪದ, ಪ್ರತಿಪಾದನೆಯ ವಿಧಾನ ಹಾಗೂ ಪ್ರಬಂಧ ಮೂಡಿಸಿದ ಒಟ್ಟಾರೆ ಪರಿಣಾಮಗಳ ಬಗ್ಗೆ ತಮ್ಮ ಖಚಿತವಾದ ಅಭಿಪ್ರಾಯಗಳನ್ನು ಮೆಲು ಮಾತುಗಳಲ್ಲಿ ಸೂಚಿಸುವ ಪ್ರಾಚಾರ್ಯರ ಮಾತಿನ ಮೋಡಿಗೆ ಒಳಗಾಗದವರಿಲ್ಲ. ತಮ್ಮ ಪ್ರಬಂಧದಲ್ಲಿನ ಅಥವಾ ವಿಮರ್ಶೆಯಲ್ಲಿನ ಜಳ್ಳುಗಳನ್ನೆಲ್ಲಾ ಬಿಟ್ಟು, ಸಮತೋಲನಾತ್ಮಕವಾದ ವೈಚಾರಿಕ ಮಜಲನ್ನು ಮುಟ್ಟುವುದಕ್ಕೆ ಪ್ರತಿಯೊಬ್ಬ ಕಮ್ಮಟಿಗರೂ 6 ದಿನಗಳೂ ಶ್ರಮಿಸಿದರು. ಬೆಳ್ಳಿ ಕಮ್ಮಟದಲ್ಲಿ ಮಂಡಿತವಾದ ಅನೇಕ ಪ್ರಬಂಧಗಳು, ಬ್ಯಾಂಕ್ ಉದ್ಯೋಗಿಗಳು ತಮ್ಮ ಬಗ್ಗೆ ತಾವೇ ನಡೆಸಿಕೊಂಡ ಸ್ವ-ವಿಮರ್ಶಾತ್ಮಕ ವಿಶ್ಲೇಷಣೆ ಎಂದರೆ ತಪ್ಪಾಗಲಾರದು. ಉದಾಹರಣೆಗಾಗಿ, ಇಂದಿನ ಬ್ಯಾಂಕ್ ಉದ್ಯೋಗಿ ಸಂತುಷ್ಟನೇ ? ಗ್ರಾಹಕ ಸೇವೆ, ಗ್ರಾಹಕರ ದೂರುಗಳು, ಬ್ಯಾಂಕುಗಳಲ್ಲಿ ವೃತ್ತಿಪರತೆ, ಬ್ಯಾಂಕ್ ರಾಷ್ಟ್ರೀಕರಣದ ಬೆಳ್ಳಿ ಹಬ್ಬ ಸಂಭ್ರಮವೋ ವಿಷಾದವೋ ? ಇಂತಹ ವಸ್ತುಗಳ ಬಗ್ಗೆ ಕಮ್ಮಟಿಗರೆಲ್ಲರೂ ಮುಕ್ತಮನಸ್ಸಿನಿಂದ ನಡೆಸಿದ ಚರ್ಚೆ, ವಿಮರ್ಶೆಗಳು ವಿಚಾರವಿನಿಮಯಕ್ಕೆ ಹಾದಿ ಮಾಡಿಕೊಟ್ಟು, ಪರಸ್ಪರ ಸೌಹಾರ್ದವನ್ನು ಹೆಚ್ಚಿಸಿ, ಬ್ಯಾಂಕಿಂಗ್ ಉದ್ಯಮದಲ್ಲಿ ನಡೆಯುವ ದೈನಂದಿನ ಕಾರ್ಯಗಳಲ್ಲಿ ಧನಾತ್ಮಕವಾದ ಧೋರಣೆಗಳನ್ನು ಬೆಳೆಸಿಕೊಳ್ಳುವಲ್ಲಿ ಸಹಾಯಕವಾದುವು. ಬೆಳ್ಳಿಕಮ್ಮಟದಲ್ಲಿ ಮಂಡಿತವಾದ ಶಾಸ್ತ್ರೀಯ ಪ್ರಬಂಧಗಳು ವೈವಿಧ್ಯಮಯವಾಗಿ, ಇಂದಿನ ಬದಲಾಗುತ್ತಿರುವ ಬ್ಯಾಂಕಿಂಗ್ ವಲಯದ ಕಾರ್ಯವೈಖರಿಗೆ ಹಿಡಿದ ಕನ್ನಡಿಯಂತಿದ್ದುವು. 'ಬ್ಯಾಕಿಂಗ್‌ಪ್ರಪಂಚ' ಸಂಚಿಕೆಗಳನ್ನು ಅತ್ಯಂತ ಶ್ರದ್ಧೆಯಿಂದಲೂ ಪ್ರೀತಿಯಿಂದಲೂ ಮುದ್ರಿಸಿಕೊಡುತ್ತ ಬರುತ್ತಿರುವ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ

ಶ್ರೀ ಜಿ. ಎಚ್. ಕೃಷ್ಣಮೂರ್ತಿ ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ಸನ್ಮಾನಿಸಲಾಯಿತು.

ಪ್ರತಿದಿನ ಬೆಳಗ್ಗೆ 9ರಿಂದ ಊಟದ ಸಮಯದವರೆಗೆ ಪ್ರಬಂಧ ಮಂಡನೆಗಳು ನಡೆದು, ಊಟಕ್ಕಾಗಿ ಅರ್ಧ ಗಂಟೆಯ ವಿರಾಮವಾದ ಮೇಲೆ ಮಧ್ಯಾಹ್ನ ಭಾಷಾಂತರ ಕಾರ್ಯವನ್ನು ಸಂಜೆ 5 ಅಥವಾ 6 ಗಂಟೆಯವರೆಗೆ ನಡೆಸಿ ಮತ್ತಾವುದಾದರೂ ಸಾಹಿತ್ಯಿಕ/ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕಮ್ಮಟಿಗರು ಸಜ್ಜಾಗುತ್ತಿದ್ದರು. ಹಲವಾರು ಬಾರಿ ಈ ಕಾರ್ಯಕ್ರಮಗಳು ರಾತ್ರಿ 11 ಗಂಟೆಯ ವರೆಗೂ ನಡೆದದ್ದುಂಟು. ಸಾಮಾನ್ಯವಾಗಿ ಅಂಕಿ-ಅಂಶಗಳ ಜಂಜಡದಲ್ಲಿ ಮುಳುಗಿ ಏಕತಾನದ ಬದುಕಿನಿಂದ ಬೇಸತ್ತಿರುವ ಬ್ಯಾಂಕ್ ಉದ್ಯೋಗಿಗಳು ಕಮ್ಮಟದ ಅವಧಿಯಲ್ಲಿ ಇಮ್ಮಡಿ-ಮುಮ್ಮಡಿ ಉತ್ಸಾಹವನ್ನು ಮೈಗೂಡಿಸಿಕೊಂಡು ಪುನರುಜ್ಜೀವಿತ ಶಕ್ತಿಯನ್ನು ಪಡೆಯುವುದನ್ನು ಕಾಣಬಹುದು. ಈ ಸಲದ ಬೆಳ್ಳಿ ಕಮ್ಮಟದಲ್ಲಂತೂ ಹಲವಾರು ಹೊಸ ಹೊಸ ಕಾರ್ಯಕ್ರಮಗಳು ನಡೆದು ಕಮ್ಮಟಕ್ಕೆ ಸುವರ್ಣ ಪ್ರಭಾವಳಿಯನ್ನು ನಿರ್ಮಿಸಿ, ಬರುವ ಹತ್ತಾರು ವರುಷಗಳಲ್ಲಿ ಚಿರಂತನವಾಗಿಸಿತು, ಇಲ್ಲಿ ಒಂದೆರಡನ್ನಾದರೂ ಹೇಳಬೇಕು. ಎಂದಿನ 'ಆಶುಭಾಷಣ'ದ ಬದಲು 'ಅಂತರಂಗ' ಎನ್ನುವ ಹೊಸ ಪ್ರಯೋಗ ಮೊದಲಾಯಿತು. ತಮ್ಮ ತಮ್ಮ ಅಂತರಂಗವನ್ನು ಬಿಚ್ಚಿಡಬಯಸುವ, ಮುಚ್ಚಿಡಬಯಸುವ, ಹಲವು-ಹತ್ತು ಬಗೆಯ ಒಳತೋಟಿಗಳನ್ನು ಕಾವ್ಯಮಯವಾಗಿ ಹೊರಹೊಮ್ಮಿಸುವ ಮಾತಿನ ಮೋಡಿಗೆ ಕಮ್ಮಟಿಗರೆಲ್ಲರೂ ತಮಗೇ ಅರಿಯದಂತೆ ಒಳಗಾದರು. ಈ ಸಲದ ರಸಪ್ರಶ್ನೆಯ ಸಂಯೋಜನೆಯೂ ವೈಶಿಷ್ಟ್ಯಪೂರ್ಣವಾಗಿತ್ತು. ಕಮ್ಮಟಗಳು ಇಂದಿನವರೆಗೂ ನಡೆದುಬಂದ ಹಾದಿಯನ್ನು ಗುರುತಿಸುವ ಹಾಗೂ ಸಮನ್ವಯ ಸಮಿತಿಯ ಪ್ರಗತಿಯ ಹೆಜ್ಜೆಗಳನ್ನು ಗುರುತಿಸುವಂತಹ ರಸಪ್ರಶ್ನೆಗಳು ಕಾರ್ಯಕ್ರಮಕ್ಕೆ ಕಳೆಯೇರಿಸಿದ್ದುವು.ಗಾಯನಗೋಷ್ಠಿ, ಕಾವ್ಯಮಂಥನ, ಕವಿಗೋಷ್ಠಿಗಳೂ ಎಂದಿನಂತೆಯೇ ಹೊಸ ಕಮ್ಮಟಿಗರನ್ನು ಆಕರ್ಷಿಸಿ, ಹಳಬರನ್ನು ಪುನರುಜ್ಜೀವನಗೊಳಿಸಿ ಕಮ್ಮಟಕ್ಕೆ ಚುಂಬಕಶಕ್ತಿಯನ್ನುಗಳಿಸಿಕೊಟ್ಟವು. ಚಾಮುಂಡಿಬೆಟ್ಟದ ಪ್ರವಾಸವು ದೈವೀಕೃಪೆಯನ್ನು ತಂದುಕೊಟ್ಟಿತು.

ಈ ಕಮ್ಮಟದಲ್ಲಿ 17 ಪ್ರಬಂಧಗಳನ್ನು ಮಂಡಿಸಿ ಚರ್ಚಿಸಲಾಯಿತು. ಒಂದು ಲೇಖನವನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರ ಮಾಡಲಾಯಿತು.

ಕಮ್ಮಟದ ಸಮಾರೋಪವನ್ನು 28-10-94ರಂದು ಭಾರತೀಯ ಸ್ಟೇಟ್ ಬ್ಯಾಂಕಿನ ಮೈಸೂರು ಶಾಖೆಯ ಆವರಣದಲ್ಲಿ ಏರ್ಪಡಿಸಲಾಗಿತ್ತು. ಸಮಾರೋಪ ಭಾಷಣ ಮಾಡಿದ ವಿಜ್ಞಾನ ಲೇಖಕ ಶ್ರೀ ಜಿ. ಟಿ. ನಾರಾಯಣರಾವ್ ಅವರು ಎಚ್ಚೆಸ್ಕೆ ಹಾಗೂ ಸಮನ್ವಯ ಸಮಿತಿಯ ಬಾಂಧವ್ಯದಿಂದ ನಡೆಯುತ್ತಿರುವ ಕಮ್ಮಟಗಳನ್ನು 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಗಸು' ಎಂದು ಬಣ್ಣಿಸಿದರು. ಮೈಸೂರು ಶಾಖೆಯ ಸಹಾಯಕ ಪ್ರಧಾನ ವ್ಯವಸ್ಥಾಪಕರಾದಶ್ರೀ ಆರ್. ವೆಂಕಟಾಚಲಂ ಅಧ್ಯಕ್ಷತೆ ವಹಿಸಿದ್ದರು.

ಇಷ್ಟೆಲ್ಲಾ ಕಾರ್ಯಕ್ರಮಗಳು ನಡೆಯಲು ಸಹಕಾರಿಯಾಗಿ,ಹಿಂದೆ ನಿಂತು, ಹಗಲಿರುಳು ಶ್ರಮಿಸಿದ ನಮ್ಮ ಮೈಸೂರಿನ ಕನ್ನಡ-ಕಮ್ಮಟಾಭಿಮಾನಿಗಳಿಗೆ, ವಿಶೇಷವಾಗಿ ಮೈಸೂರಿನ ನಮ್ಮ ಕಮ್ಮಟಿಗರಿಗೆ ವಂದನೆಗಳು. ಕಾಲಕಾಲಕ್ಕೆ ಊಟ-ತಿಂಡಿಯ ವ್ಯವಸ್ಥೆಯನ್ನು ನೋಡಿಕೊಂಡು ಅವರ ಆದರಾತಿಥ್ಯಗಳಿಂದ ಕಮ್ಮಟಿಗರನ್ನು ಚಿರಋಣಿಗಳನ್ನಾಗಿ ಮಾಡಿದ್ದಾರೆ. ಇಲ್ಲಿಯ ಕಲಾಪಗಳ ಸಂಚಾಲಕತ್ವ ವಹಿಸಿದ್ದ ಶ್ರೀ ಬಿ. ಜಿ. ರಂಗನಾಥ್ ಮತ್ತು ಶ್ರೀ ಗುರುರಾಜ್ ಮತ್ತು ಅವರ ಗೆಳೆಯರು ವಿಶೇಷ ಕೃತಜ್ಞತೆಗೆ ಪಾತ್ರರು. 'ಎಂದು ಬಂದೀತು ಇನ್ನೊಮ್ಮೆ ಕಮ್ಮಟ' ಎನ್ನುವಂತಹ ಚಿರಂತನ ಸವಿಯನ್ನು ಉಣಬಡಿಸಿದ ಬೆಳ್ಳಿಕಮ್ಮಟಕ್ಕೆ ವಿದಾಯ ಹೇಳುತ್ತಾ, ಕಮ್ಮಟಾಚಾರ್ಯ ಪ್ರಾ. ಎಚ್ಚೆಸ್ಕೆಯವರಿಗೆ ನಮಿಸುತ್ತಾ ಸಮನ್ವಯ ಸಮಿತಿಯ ಕಾರ್ಯಕ್ಷಮತೆಯು ಇನ್ನೂ ನೂರ್ಮಡಿಯಾಗಿ ಹೆಚ್ಚಲೆಂದು ಆಶಿಸುತ್ತೇವೆ.

ಬೆಳ್ಳಿಕಮ್ಮಟದಲ್ಲಿ ಮಂಡಿತವಾದ ಪ್ರಬಂಧಗಳು

1 ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ : ಮಂಡನೆ —ಎಂ. ಜಿ. ವೆಂಕಟೇಶಮೂರ್ತಿ, ಪ್ರಧಾನ ವಿಮರ್ಶೆ— ಅನಸೂಯಾದೇವಿ, ಎಚ್. ಕೆ.; 2 ಭಾರತದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಸಂಪೂರ್ಣ ವಿಫಲವೇ? ಮಂಡನೆ—ಕೆ. ಎಲ್. ನಂದಗೋಪಾಲ್, ಪ್ರ. ವಿ.—ಎಚ್. ಆರ್. ವೆಂಕಟೇಶಮೂರ್ತಿ ; 3 ಬ್ಯಾಂಕುಗಳಲ್ಲಿ ವಂಚನೆ ಪ್ರಕರಣಗಳು ಮತ್ತು ಅವುಗಳ ತಡೆಗೆ ಕ್ರಮಗಳು—ಒಂದು ಪಕ್ಷಿನೋಟ : ಮಂಡನೆ—ಎಂ. ಆರ್. ರಘುನಾಥ್,ಪ್ರ. ವಿ.—ಪಾ. ರಾಜಗೋಪಾಲ್ ; 4 ಬ್ಯಾಂಕ್ ಸಾಲಗಳ ವಸೂಲಾತಿ : ಮಂಡನೆ—ಬಿ. ಎಸ್. ಚಂದ್ರಶೇಖರ್, ಪ್ರ. ವಿ.—ಕೆ. ಎಸ್. ಭದ್ರಣ್ಣ ; 5 ಅಭಿರಕ್ಷಕ ಸೇವೆಗಳು: ಮಂಡನೆ—ಜಿ.ಎಸ್. ರವೀಂದ್ರ, ಪ್ರ. ವಿ.—ಜಿ.ಎನ್. ನರಸಿಂಹಮೂರ್ತಿ ; 6 ಬ್ಯಾಂಕುಗಳಲ್ಲಿ ವೃತ್ತಿಪರತೆ : ಮಂಡನೆ—ನಾಗಾನಂದ, ಪ್ರ. ವಿ.—ಕೆ. ಎಸ್. ಭದ್ರಣ್ಣ ; 7 ಬ್ಯಾಂಕುಗಳಲ್ಲಿ ಕಾರ್ಮಿಕ ಸಂಘಟನೆಗಳು : ಮಂಡನೆ; —ವೈ. ಎಸ್. ಉಷಾ, ಪ್ರ. ವಿ.—ಆ. ಚ. ಅಶೋಕ ಕುಮಾರ್. 8 ಬ್ಯಾಂಕ್ ಉದ್ದಿಮೆಯಲ್ಲಿ ಕಾರ್ಮಿಕ ಸಂಘಟನೆಗಳು ಮತ್ತು ಕೈಗಾರಿಕಾ ಸಂಬಂಧಗಳು : ಮಂಡನೆ—ಬಿ. ಎಸ್. ರವೀಂದ್ರ, ಪ್ರ. ವಿ.—ಜಯಂತಿ ಮನೋಹರ್ ; 9–10 ಬ್ಯಾಂಕ್ ರಾಷ್ಟ್ರೀಕರಣದ ಬೆಳ್ಳಿಹಬ್ಬ ಸಂಭ್ರಮವೋ ವಿಷಾದವೋ? (ಎರಡು ಪ್ರಬಂಧಗಳು): ಮಂಡನೆ—ಶ್ರೀಮತಿ ಶಾಂತ ಮತ್ತು ಅನುಸೂಯದೇವಿ ಪ್ರ.ವಿ. —ಕೆ. ಎನ್. ವೆಂಕಟರಾಮ್, ಮತ್ತು ವಿ. ಎಸ್. ಶಿವರುದ್ರಯ್ಯ ; 11 ಇಂದಿನ ಬ್ಯಾಂಕ್ ಉದ್ಯೋಗಿ ಸಂತುಷ್ಟನೇ ? ಮಂಡನೆ— ಸಾ. ನಾ. ಬಾಲಸರಸ್ವತಿ, ಪ್ರ. ವಿ.—ಎಂ. ಜಿ. ವೆಂಕಟೇಶಮೂರ್ತಿ;

[10ನೇ ಪುಟ ನೋಡಿ

ಗ್ರಾಹಕ ಸೇವೆ

ಶ್ರೀಧರ್ ರಾಯಸಂ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೌಲ್ ಬಜಾರ್ ಶಾಖೆ, ಬಳ್ಳಾರಿ 583102

ಮಗ ಉಂಡರೆ ಕೇಡೆ ? ಮಳೆ ಬಂದರೆ ಕೇಡೆ ? ಗ್ರಾಹಕ ಇದ್ದರೆ ಕೇಡೆ ? ವ್ಯವಹಾರ ಹೆಚ್ಚಾದರೆ ಕೇಡೆ ? ಇಲ್ಲ ಎನ್ನುವುದಾದರೆ ಗ್ರಾಹಕನ ತೃಪ್ತಿಗಾಗಿ ಬ್ಯಾಂಕು ಏನು ಮಾಡಬೇಕು ?

ಭಾರತ ದೇಶದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣದ ಅನಂತರ ಸಮುದಾಯ ಸೇವಾಸಂಸ್ಥೆಗಳಾಗಿ ಮಾರ್ಪಾಟಾಗಿ ಎರಡು ವಿಶಿಷ್ಟ ಪಾತ್ರಗಳನ್ನು ಹೊಂದಿವೆ. ಮೊದಲನೆಯದಾಗಿ ವ್ಯವಹಾರದ ಲೇವಾದೇವಿ ಸಂಸ್ಥೆಗಳಾಗಿ ಮತ್ತು ಎರಡನೆಯದಾಗಿ ಸಮುದಾಯ ಸೇವಾಸಂಸ್ಥೆಗಳಾಗಿ ಪಾತ್ರ ನಿರ್ವಹಿಸುತ್ತಿವೆ. ವ್ಯಾವಹಾರಿಕವಾಗಿ ಗ್ರಾಹಕರಿಂದ ಠೇವಣಿಗಳನ್ನು ಸ್ವೀಕರಿಸಿ ತದನಂತರ ಗ್ರಾಹಕರಿಗೆ ಸಾಲದ ರೂಪದಲ್ಲಿ ಹಣವನ್ನು ನೀಡಿ ಹೆಚ್ಚು ಲಾಭಾಂಶ ಸಂಸ್ಥೆಗೆ ಪಡೆಯುವ ಉದ್ದೇಶ ಬ್ಯಾಂಕುಗಳ ಧ್ಯೇಯವಾಗಿದೆ. ಇದಲ್ಲದೆ ವ್ಯವಹಾರದ ಒಂದಂಶವಾಗಿ ಆನುಷಂಗಿಕ ಸೇವೆಗಳನ್ನು ನೀಡುವುದು. ಉದಾಹರಣೆಗೆ ಹಣರವಾನೆ, ಹಣ ಸಂಗ್ರಹಣೆ, ಬೆಲೆಬಾಳುವ ವಸ್ತುಗಳ ಭದ್ರಸುಪರ್ದು, ಭದ್ರ ಠೇವು ಕಪಾಟುಗಳನ್ನು ಗ್ರಾಹಕರಿಗೆ ನೀಡುವುದು, ಡ್ರಾಫ್ಟ್ ನೀಡುವುದು, ಹುಂಡಿ ಹಣ ವಸೂಲಿ ಮಾಡುವುದು ಮುಂತಾದವು. ಗ್ರಾಹಕರಿಗೆ ಅವರ ಅಪೇಕ್ಷೆಯ ಮೇರೆಗೆ ಸಮುದಾಯ ಸೇವೆ ನೀಡಿ ಸಮಾಜದ ಬೇಡಿಕೆಗಳನ್ನು ಪೂರೈಸುವುದು ಬ್ಯಾಂಕುಗಳ ಆದ್ಯ ಕರ್ತವ್ಯವಾಗಿದೆ.

ಬ್ಯಾಂಕುಗಳ ರಾಷ್ಟ್ರೀಕರಣದ ಪೂರ್ವದಲ್ಲಿ ಕೇವಲ ಠೇವಣಿ ಸ್ವೀಕರಿಸುವುದು, ಹಣವನ್ನು ಸಾಲರೂಪದಲ್ಲಿ ಕೆಲವೇ ವರ್ಗಗಳಿಗೆ ನೀಡುವ ಸಂಪ್ರದಾಯವಿತ್ತು. ಸಮಾಜದ ಸಾಮಾಜಿಕ-ಆರ್ಥಿಕ ಧ್ಯೇಯವನ್ನು ಅರಿತುಕೊಂಡು ಹಣಕಾಸಿನ ಸಂಸ್ಥೆಗಳು ಸಮುದಾಯ ಸೇವಾಸಂಸ್ಥೆಗಳಾಗಿ ಮಾರ್ಪಾಟಾದವು. ಸಮುದಾಯ ಸೇವೆ ಎಂದರೆ ಗ್ರಾಹಕರನ್ನು ಸ್ಪಷ್ಟವಾಗಿ ಗುರುತಿಸಿ ಅವರ ಬೇಡಿಕೆಗಳನ್ನು, ಆಕಾಂಕ್ಷೆಗಳನ್ನು ಅರಿತು, ನಂತರ ಅವುಗಳನ್ನು ಪೂರೈಸುವುದು ಬ್ಯಾಂಕುಗಳ ಪ್ರಥಮ ಧ್ಯೇಯವಾಯಿತು. ಸಾಕಷ್ಟು ಬ್ಯಾಂಕ್ ಸೇವೆಗಳನ್ನು ಪಡೆಯುವ ಗ್ರಾಹಕರಲ್ಲಿ ಹಲವಾರು ವಿಧಗಳಿವೆ. ಗ್ರಾಮ ಪ್ರದೇಶದ ಗ್ರಾಹಕ, ನಗರ ಪ್ರದೇಶದ ಗ್ರಾಹಕ, ಕೈಗಾರಿಕಾ ಪ್ರದೇಶದ ಗ್ರಾಹಕ, ದಲಿತ–ಬಡವರು ವಾಸಿಸುವ ಪ್ರದೇಶದ ಗ್ರಾಹಕ, ಶ್ರೀಮಂತ ವರ್ಗದ ನಿವಾಸದ ಬ್ಯಾಂಕಿನಲ್ಲಿರುವ ಗ್ರಾಹಕ, ಸಾಲ ಪಡೆದುಕೊಂಡ ಗ್ರಾಹಕ. ಖಾತೆದಾರನ ನಿರ್ದೇಶನ ಪಡೆದ ವ್ಯಕ್ತಿಯೂ ಗ್ರಾಹಕನಾಗಬಹುದು, ಅಥವಾ ಸಾಂದರ್ಭಿಕವಾಗಿ ಬ್ಯಾಂಕಿನಲ್ಲಿ ವ್ಯವಹಾರ ನಡೆಸುವವನೂ ಗ್ರಾಹಕನಾಗಬಹುದು.

ಗ್ರಾಹಕಸೇವೆಯ ಗುಣ ಮುಖ್ಯ

ಗ್ರಾಹಕನಿಗೆ ನೀಡುವ ಸೇವೆ ಗುಣಾತ್ಮಕವಾಗಿರಬೇಕು ಮತ್ತು ವ್ಯವಸ್ಥಿತವಾದ ಸೇವೆಯಾಗಿರಬೇಕು. ಮಾನವೀಯ ದೃಷ್ಟಿಯುಳ್ಳ ಸೇವೆ ನೀಡಿದಾಗ ಮಾತ್ರ ಬ್ಯಾಂಕುಗಳು ಅಭ್ಯುದಯ ಪಡೆಯಲು ಸಹಾಯವಾಗುತ್ತದೆ. ಬ್ಯಾಂಕುಗಳಲ್ಲಿ ಈ ಧೋರಣೆಯಿಲ್ಲದಿದ್ದರೆ ಗ್ರಾಹಕ ಸೇವೆಗೆ ಅರ್ಥವಿಲ್ಲದಂತಾಗುತ್ತದೆ. ಕನಿಷ್ಠ ಚಲನೆಯೊಂದಿಗೆ ಗರಿಷ್ಠ ಸೇವೆ ನೀಡುವ ಸ್ವರೂಪ ಅರಿಯಬೇಕು. ದೈಹಿಕವಾದ ಚಲನೆ ಕಡಿಮೆ ಮಾಡಿ ಕೆಲಸದ ಅಧ್ಯಯನ ಮಾಡಿ ಅದಕ್ಕನುಗುಣವಾಗಿ ವಿಂಗಡಣೆ ಮಾಡಿ ಸೇವೆ ನೀಡಬೇಕು. ಇನ್ನೊಂದು ಪ್ರಮುಖವಾದ ಅಂಶವೆಂದರೆ ಗ್ರಾಹಕ ರಕ್ಷಣಾ ವೇದಿಕೆ ಇದನ್ನು ಗಮನದಲ್ಲಿಟ್ಟುಕೊಂಡು ಗ್ರಾಹಕಸೇವೆ ನೀಡಬೇಕು.

ಬ್ಯಾಂಕ್ ಸಿಬ್ಬಂದಿ ತನ್ನ ಕೆಲಸದ ನಿಯಮಗಳನ್ನು ಸಂಪೂರ್ಣವಾಗಿ ಅರಿತಿರಬೇಕು. ಅನುಭವವಿಲ್ಲದ, ತರಬೇತಿ ಇಲ್ಲದ ಸಿಬ್ಬಂದಿಯಿಂದ ನಿರ್ಧಾರ ತೆಗೆದುಕೊಳ್ಳಲು ವಿಳಂಬ ಮಾಡುವುದರಿಂದ ಗ್ರಾಹಕನ ಬೇಡಿಕೆಗಳಿಗೆ, ಅಪೇಕ್ಷೆಗೆ ಧಕ್ಕೆ ಬರುವುದರಲ್ಲಿ ಸಂದೇಹವಿಲ್ಲ. ತರಬೇತಿ ಇಲ್ಲದ ಬ್ಯಾಂಕ್ ಸಿಬ್ಬಂದಿಯಿಂದ ಬ್ಯಾಂಕ್ ವ್ಯವಹಾರಕ್ಕೆ ಕುಂದು ಬರುವುದಲ್ಲದೆ ಬ್ಯಾಂಕಿನ ಪ್ರತಿಷ್ಠೆಗೆ ಧಕ್ಕೆ ಬರುವುದರಲ್ಲಿ ಸಂದೇಹವಿಲ್ಲ.

ಖಾಸಗಿ ಬ್ಯಾಂಕುಗಳಲ್ಲಿ ನೀಡುವ ಗ್ರಾಹಕ ಸೇವೆ ಸಾಮಾನ್ಯವಾಗಿ ಉತ್ತಮವಾಗಿರುವುದು ಮತ್ತು ಕಡಿಮೆ ದೂರುಗಳಿರುವುದು ಸ್ಪಷ್ಟವಾಗಿದೆ. ಪ್ರಾಯಶಃ ಆಡಳಿತ ಮಂಡಳಿಯಿಂದ ಸಿಬ್ಬಂದಿಗೆ ಪ್ರೋತ್ಸಾಹ, ಬಡತಿ, ಕೈಗಾರಿಕಾ ಸಂಬಂಧಗಳ ಸಾಮರಸ್ಯ, ರಾಜಕೀಯ ಹಸ್ತಕ್ಷೇಪವಿಲ್ಲದೆ ಇರುವುದು ಮತ್ತು ಸರ್ಕಾರದ ಸಾಲದ ಯೋಜನೆಗಳಿಲ್ಲದೆ ಇರುವುದು ಕಾರಣವಾಗಿರಬಹುದು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರಾಜಕೀಯ ಹಸ್ತಕ್ಷೇಪ, ಸಾಲ ನೀಡುವಿಕೆಯಲ್ಲಿ ಒತ್ತಡ, ಮುಂತಾದವು ಗ್ರಾಹಕ ಸೇವೆಗೆ ಅಡಚಣೆಯಾಗಿರುವುದು ಸರ್ವಸಾಮಾನ್ಯವಾಗಿದೆ. ಸಾಲ ವಸೂಲಾತಿಯಲ್ಲಿ ಯಾವ ಪ್ರಗತಿಯಿಲ್ಲದೆ ಬ್ಯಾಂಕುಗಳ ಲಾಭಪ್ರದತೆಯಲ್ಲಿ ಇಳಿಮುಖವಾಗಿ ನಷ್ಟ ಅನುಭವಿಸುವ ಸ್ಥಿತಿಗೆ ಬಂದಿವೆ ಬ್ಯಾಂಕುಗಳು. ಇತ್ತೀಚಿಗೆ ನೌಕರರ ಸಂಘ ಮತ್ತು ವ್ಯವಸ್ಥಾಪಕರಲ್ಲಿ ಒಪ್ಪಂದವಾಗಿ ಗಣಕೀಕರಣದಿಂದ ಉತ್ತಮ ಸೇವೆಯನ್ನು ಗ್ರಾಹಕರು

ಪಡೆಯುತ್ತಿದ್ದಾರೆ. ವೈಜ್ಞಾನಿಕವಾಗಿ ಮುಂದುವರಿದ ದೇಶಗಳಲ್ಲಿ ಬ್ಯಾಂಕುಗಳು ಗಣಕ ಯಂತ್ರಗಳನ್ನು ಅಳವಡಿಸಿ ಹೆಚ್ಚಿನ ಉತ್ತಮ ಸೇವೆ ನೀಡುವಲ್ಲಿ ಪೈಪೋಟಿಯಿದೆ. ಭಾರತದ ಬ್ಯಾಂಕುಗಳು ಗಣಕ ಯಂತ್ರಗಳನ್ನು ಅಳವಡಿಸಿ ವಿದೇಶಿ ಬ್ಯಾಂಕುಗಳ ಪೈಪೋಟಿಯನ್ನು ಎದುರಿಸುತ್ತಾ ಇವೆ.

ಗ್ರಾಹಕ ಸೇವೆಯ ಅಸಮರ್ಪಕತೆಗೆ ಕಾರಣಗಳು

ಈ ಕೆಳಗಿನ ಕಾರಣಗಳು ಗ್ರಾಹಕ ಸೇವೆಗೆ ಮಾರಕವಾಗಿವೆ ಎಂದರೆ ತಪ್ಪಾಗಲಾರದು.

1 ಅತಿಯಾದ ಶಾಖಾ ವಿಸ್ತರಣೆ ಮಾಡಿ ಅನುಭವವಿಲ್ಲದ ಸಿಬ್ಬಂದಿಯನ್ನು ವರ್ಗಾವಣೆ ಮಾಡುವುದು;

2 ಸಿಬ್ಬಂದಿ ಮತ್ತು ವ್ಯವಸ್ಥಾಪಕರ ನಡುವೆ ಸಾಮರಸ್ಯವಿಲ್ಲದೆ ಕೈಗಾರಿಕಾ ಸಂಬಂಧಗಳು ಹದಗೆಟ್ಟಿರುವುದು;

3 ಅತಿಯಾದ ಕಟ್ಟುನಿಟ್ಟಿನ ನಿಯಮಗಳು, ಕಾನೂನುಗಳ ತೊಡಕು ಮತ್ತು ಪರಂಪರಾಗತವಾದ ನಿರ್ದೇಶನದಿಂದ ವ್ಯವಹಾರ ದಲ್ಲಿ ವಿಳಂಬ ಮಾಡುವುದು;

4 ತರಬೇತಿಯಿಲ್ಲದ, ಸಂಪೂರ್ಣ ಬ್ಯಾಂಕಿನ ವಿವಿಧ ಯೋಜನೆ ಗಳ ಮಾಹಿತಿ ತಿಳಿದುಕೊಳ್ಳದ ಸಿಬ್ಬಂದಿ ಶಾಖೆಯಲ್ಲಿರುವುದು;

5 ನೌಕರರು ಬ್ಯಾಂಕ್ ವ್ಯವಹಾರದಲ್ಲಿ "ಸಮರ್ಪಣ" ಮನೋಭಾವದಿಂದ ಕೆಲಸ ನಿರ್ವಹಿಸದೆ ಇರುವುದು;

6 ಅಸ್ಪಷ್ಟ ಬರವಣಿಗೆ, ನಿಧಾನ ಪ್ರವೃತ್ತಿ ;

7 ಪತ್ರ ವ್ಯವಹಾರದಲ್ಲಿ ವಿಳಂಬ ನೀತಿ ;

8 ತಪ್ಪಾದ ಮಾರ್ಗದರ್ಶನ, ಸಹಾಯಕವಲ್ಲದ ನಿರ್ಧಾರ ತೆಗೆದುಕೊಳ್ಳುವುದು;

9 ಸಾಮಾನ್ಯ ಶಿಸ್ತಿನ ಕೊರತೆ, ಸಮಯಪಾಲನೆಯ ಕೊರತೆ;

10 ಸಿಬ್ಬಂದಿಗೆ ಸಕಾರಣವಾದ ಬೆಂಬಲ ಸಂಸ್ಥೆಯಿಂದ ದೊರೆ ಯದೆ ಇರುವುದು;

11 ಸಂಕೀರ್ಣವಾದ ದಸ್ತಾವೇಜುಗಳು, ಪ್ರಾದೇಶಿಕ ಭಾಷೆ ಯಿರದ ದಸ್ತಾವೇಜುಗಳು;

12 ಸೇವಾ ಶುಲ್ಕಗಳಲ್ಲಿ ಅಸಮಾನತೆ ;

13 ಬ್ಯಾಂಕು ಮತ್ತು ಗ್ರಾಹಕನಲ್ಲಿ ಸಂವಹನದ ಕೊರತೆ ;

14 ಸಣ್ಣ ಗ್ರಾಹಕ ಮತ್ತು ಪ್ರತಿಷ್ಠಿತ ಗ್ರಾಹಕನನ್ನು ಗುರುತಿ ಸದೇ ಇರುವುದು;

15 ಗ್ರಾಹಕನ ದೂರುಗಳನ್ನು ಸ್ವೀಕರಿಸಿ ಅದಕ್ಕೆ ಸರಿಯಾದ ಸಮಜಾಯಿಶಿ ನೀಡದೇ ಇರುವುದು ಅಥವಾ ತಪ್ಪಿದ್ದರೆ ಸರಿಪಡಿಸಿ ಕೊಳ್ಳದೇ ಇರುವುದು;

16 ಅತೃಪ್ತ ಗ್ರಾಹಕನ ಮನವೊಲಿಸಿ ವ್ಯವಹಾರ ಸುಗಮ ಗೊಳಿಸುವ ಪ್ರಯತ್ನ ನಡೆಸದಿರುವುದು.

ಗ್ರಾಹಕ ಪ್ರಮುಖವಾಗಿ ಅಪೇಕ್ಷೆ ಪಡುವುದು ಬ್ಯಾಂಕುಗಳಲ್ಲಿ ಶೀಘ್ರ ಹಣ ಪಡೆಯುವುದು, ಹಣ ರವಾನಿಸುವುದು, ಪಾಸ್ ಪುಸ್ತಕದಲ್ಲಿ ನಮೂದೆಗಳನ್ನು ವಿವರವಾಗಿ ಪಡೆಯುವುದು, ಹರಿದ ನೋಟುಗಳನ್ನು, ಎಣ್ಣೆಯಾದ, ಹಳೆಯ ನೋಟುಗಳನ್ನು ಬದಲಾ ಯಿಸಿಕೊಳ್ಳುವ ಅವಕಾಶ ಪಡೆಯುವುದು, ಸ್ಥಾಯೀ ಆದೇಶ ನಿಯತಕಾಲಿಕವಾಗಿ ಪಾಲಿಸುವುದು, ತೀರುವಳಿ ಚೆಕ್‌ಗಳ ಹಣ ಮರುದಿವಸವೇ ಪಡೆಯುವ ಅವಕಾಶ, ಪರಸ್ಥಳದ ಚೆಕ್‌ಗಳ ಹಣ ಸಂಗ್ರಹಣೆ ಶೀಘ್ರವಾಗಿ ಮಾಡಿ ಖಾತೆಗಳಿಗೆ ಜಮಾ ಮಾಡುವುದು ಮತ್ತು ಉದರಿ ಕಾರ್ಡುಗಳನ್ನು ಪಡೆಯುವುದು.

ಮಾನವ ಸಂಪನ್ಮೂಲಗಳು

ಬ್ಯಾಂಕುಗಳಲ್ಲಿ ಉತ್ತಮ ಗ್ರಾಹಕ ಸೇವೆ ದೊರೆಯಲು "ಮಾನವ ಸಂಪನ್ಮೂಲ ಅಭಿವೃದ್ಧಿ" ಸಂಸ್ಥೆ ವಿಶಿಷ್ಟ ಪಾತ್ರ ವಹಿಸುತ್ತದೆ. ಸಮಾಜದ ಆರ್ಥಿಕ–ಸಾಮಾಜಿಕ ಬೇಡಿಕೆಗಳನ್ನು ಗುರುತಿಸಿ ಬ್ಯಾಂಕ್ ಸಿಬ್ಬಂದಿಯನ್ನು ನೇಮಕಮಾಡುವ ಸಂದರ್ಭ ಬಂದಿದೆ. ರಾಷ್ಟ್ರೀ-ಕರಣದ ನಂತರ ಬ್ಯಾಂಕುಗಳು ಸಾಮಾಜಿಕ–ಆರ್ಥಿಕ ಅಸಮ ತೋಲನವನ್ನು ಸರಿಪಡಿಸಲು ಮುಂದೆ ಬಂದು ವಿವಿಧ ವರ್ಗಗಳನ್ನು, ಗ್ರಾಮೀಣ ಜನರನ್ನು ಗುರುತಿಸಿ ಸಾಲ ನೀಡಲು ಉದ್ಯುಕ್ತವಾದವು. ಧ್ಯೇಯೋದ್ದೇಶ ಉಪಯುಕ್ತವಾದರೂ, ಕೆಲವು ಕಾರ್ಯಕ್ರಮ ಗಳು ವಿಫಲವಾಗಿ ಸಾಲದ ಮರುಪಾವತಿಯಾಗದೆ ಹಲವು ಬ್ಯಾಂಕು ಗಳು ನಷ್ಟ ಅನುಭವಿಸಲು ಪ್ರಾರಂಭಿಸಿದವು. ಬ್ಯಾಂಕಿನಲ್ಲಿನ ಒಬ್ಬ ವ್ಯಕ್ತಿ ತಾನು ಮಾಡುವ ಕ್ಷೇತ್ರದ ಸಂಪೂರ್ಣ ಜ್ಞಾನ ಪಡೆದರೆ ಸಾಲದು, ಸುತ್ತಲಿನ ಪರಿಸರದ ತಿಳಿವಳಿಕೆ ಮತ್ತು ಸಂಸ್ಥೆಯಲ್ಲಿನ ಬದಲಾಗುತ್ತಿರುವ ನಿಯಮಾವಳಿಗಳನ್ನು ಅರಿತಿರಬೇಕು. ಮುಕ್ತ ಮನಸ್ಸಿನಿಂದ ಈ ಸಾಮಾಜಿಕ-ತಾಂತ್ರಿಕ ಬದಲಾವಣೆಗಳನ್ನು ಎದುರಿಸಿದಾಗ ಅವನ ಪ್ರತ್ಯಕ್ಷ–ಅಪ್ರತ್ಯಕ್ಷ ಪ್ರತಿಷ್ಠೆ ಬೆಳೆಯುವುದ ರಲ್ಲಿ ಸಹಾಯವಾಗುವುದು. ಬ್ಯಾಂಕಿಗೆ ಸೇರಿದ ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ಮೌಲ್ಯಗಳನ್ನು, ಸಂಸ್ಕೃತಿ ಪದ್ಧತಿಗಳನ್ನು ಅಳವಡಿ ಸಲು ಪ್ರಯತ್ನಿಸುತ್ತಾನೆ. ಈ ಎಲ್ಲಾ ಪ್ರಯತ್ನಗಳು ಬ್ಯಾಂಕಿನ ಮುಖ್ಯ ಧ್ಯೇಯೋದ್ದೇಶಗಳಿಗೆ ಪೂರಕವಾಗುವುದರಲ್ಲಿ ಸಂಶಯ ವಿಲ್ಲ. ಮಾನವ ಸಂಪನ್ಮೂಲ ಸಂಸ್ಥೆಯು ಈ ಎಲ್ಲಾ ಧ್ಯೇಯ ಗಳನ್ನು ಅರಿತು ಸಿಬ್ಬಂದಿಗೆ ತರಬೇತಿ ನೀಡುವ ಯೋಜನೆಗಳನ್ನು ಹಾಕಬೇಕು.

ತನಗೆ ನೀಡಿದ ಕಾರ್ಯವನ್ನು ಸಿಬ್ಬಂದಿಯು ಸಂಪೂರ್ಣ ಜ್ಞಾನ ದೊಂದಿಗೆ .ಚಾಣಾಕ್ಷತನದಿಂದ ಸಮರ್ಪಕವಾಗಿ, ಆರ್ಥಿಕವಾಗಿ ಪೂರೈಸುವ ಸಾಮರ್ಥ್ಯ ಪಡೆದಿರಬೇಕು. ಸಂಸ್ಥೆಯು ಹೆಚ್ಚಿನ ಬೆಳವಣಿಗೆ ಹೊಂದಲು ಸಿಬ್ಬಂದಿಯು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು. ನಿಯತಕಾಲಿಕ ತರಬೇತಿಯನ್ನು ಎಲ್ಲಾ ವರ್ಗದ ಸಿಬ್ಬಂದಿಗೆ ಬ್ಯಾಂಕ್ ಆಗಾಗ್ಗೆ ನೀಡುತ್ತಿರಬೇಕು.

ಬ್ಯಾಂಕು ಕೇವಲ ನಿಯಮಾವಳಿಗಳನ್ನು, ಸಂಪೂರ್ಣ ಮಾಹಿತಿ ಯನ್ನು ಸಿಬ್ಬಂದಿಗೆ ನೀಡಿದರೆ ಸಾಲದು, ಅದರಿಂದ ಸಿಬ್ಬಂದಿ ತನ್ನ ತಾನು ಅರಿತುಕೊಂಡು ಬ್ಯಾಂಕಿಗೆ ಉಪಯುಕ್ತವಾದ ಕೊಡುಗೆ ಯಾಗಿರಬೇಕು. ಇದರಿಂದ ನಿಜವಾದ ಅರ್ಥ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ಬರುವುದಲ್ಲದೆ, ಬ್ಯಾಂಕು ಅಭಿವೃದ್ಧಿಯಾಗಲು ಸಂಪೂರ್ಣ ಸಹಾಯವಾಗುತ್ತದೆ. ಸಿಬ್ಬಂದಿಗೆ ಕಾಲಕಾಲಕ್ಕೆ ತರಬೇತಿ ನೀಡಿ ಬ್ಯಾಂಕಿನ ಬದಲಾಗುವ ಸಾಮಾಜಿಕ–ಆರ್ಥಿಕ ಜವಾಬ್ದಾರಿ

ಗಳನ್ನು ತಿಳಿಸುತ್ತಾ ಮುನ್ನಡೆದರೆ ಭವಿಷ್ಯದಲ್ಲಿ ಆ ಸಂಸ್ಥೆ ಸಂಪೂರ್ಣ ಪರಿಪೂರ್ಣತೆ ಪಡೆಯಲು ಸಾಧ್ಯವಾಗುತ್ತದೆ.

ಕೆಲವು ಸಲಹೆಗಳು

ಗ್ರಾಹಕ ಸೇವೆ ಇನ್ನೂ ಉತ್ತಮಗೊಳ್ಳಲು ಈ ಕೆಳಗಿನ ಹಲವು ಸಲಹೆಗಳನ್ನು ಗ್ರಾಹಕ ಸೇವಾ ಆಡಿಟ್ ನಿರೂಪಿಸಿದೆ :

1 ಬ್ಯಾಂಕ್ ವ್ಯವಹಾರ ಪ್ರಾರಂಭಿಸುವ ಮೊದಲು 12 ನಿಮಿಷ ಮುಂಚಿತವಾಗಿ ನೌಕರರು ನಗರಗಳಲ್ಲಿ, ಮಹಾನಗರಗಳಲ್ಲಿ ಸಿದ್ಧವಾಗಿ ಆ ದಿವಸದ ಕೆಲಸ ನಿರ್ವಹಿಸುವುದು,

2 ಬ್ಯಾಂಕಿನ ಗ್ರಾಹಕರು ವ್ಯವಹಾರದ ವೇಳೆಯಲ್ಲಿ ಬ್ಯಾಂಕಿನ ಆವರಣದಲ್ಲಿದ್ದರೆ ಅವರ ಬೇಡಿಕೆಗಳನ್ನು ಪೂರೈಸುವುದು,

3 ಬ್ಯಾಂಕಿನ ಯಾವ ಮುಂಗಟ್ಟೆಯನ್ನೂ ಮುಚ್ಚದೆ ಗ್ರಾಹಕರಿಗೆ ಅಡಚಣೆಯಾಗದ ಸೇವೆಯನ್ನು ವ್ಯವಹಾರದ ವೇಳೆಯಲ್ಲಿ ನೀಡುವುದು,

4 ದೊಡ್ಡ ಶಾಖೆಗಳಲ್ಲಿ "ನಿಮಗೆ ಸಹಾಯ ಮಾಡಲೇ" ಮತ್ತು "ವಿಚಾರಣೆ" ಮುಂಗಟ್ಟೆಗಳನ್ನು ತೆರೆಯುವುದು,

5 ಸಣ್ಣ ಮೊತ್ತದ ಹಣ ಸ್ವೀಕರಿಸುವಾಗ ಆಗುವ ತೊಂದರೆಗಳನ್ನು ಪರಿಹರಿಸುವ ಮಾರ್ಗ ಕಂಡುಕೊಳ್ಳುವುದು,

6 ಸಾಧ್ಯವಾದಷ್ಟು ಪ್ರಮುಖ ದೊಡ್ಡ ಶಾಖೆಗಳಲ್ಲಿ ನೋಟು ಬದಲಾಯಿಸುವ ಮುಂಗಟ್ಟೆಗಳನ್ನು ತೆರೆಯುವುದು,

7 ನೋಟುಗಳನ್ನು ಹೊಲೆಯುವುದರಲ್ಲಿ ನಿಪುಣತೆ ತೋರಿಸುವುದು ಮತ್ತು "ಪೆಟ್ರೊ ಕೆಮಿಕಲ್ ಮೊಹರುಗಳನ್ನು" ಹಾಕುವುದು,

8 ನಾಮ ನಿರ್ದೇಶನ ಸೌಲಭ್ಯ ಠೇವಣಿಗಳಿಗೆ, ಭದ್ರ ಸುಪರ್ದು ವಸ್ತುಗಳಿಗೆ, ಭದ್ರ ಠೇವು ಕಪಾಟುಗಳಿಗೆ ಇರುವ ತಿಳುವಳಿಕೆ ಪ್ರತಿಯೊಬ್ಬ ಗ್ರಾಹಕನಿಗೆ ತಿಳಿಸುವುದು ಮತ್ತು ಸೂಕ್ತ ಸ್ಥಳದಲ್ಲಿ ಸಂಬಂಧಪಟ್ಟ ಫಲಕ, ಭಿತ್ತಿಪತ್ರಗಳನ್ನು, ಬ್ಯಾನರ್‌ಗಳನ್ನು ಹಾಕಿಸುವುದು,

9 ಅರ್ಥವಾಗುವಂತೆ ನಮೂದುಗಳನ್ನು ಗ್ರಾಹಕರ ಪಾಸ್ ಪುಸ್ತಕಗಳಲ್ಲಿ ವಿವರವಾಗಿ ಬರೆಯುವುದು,

10 ವಿವಿಧ ಠೇವಣಿಗಳ ಸಾಹಿತ್ಯ, ಬಡ್ಡಿದರಗಳ ನಮೂನೆಯನ್ನು ಗ್ರಾಹಕರಿಗೆ ಒದಗಿಸುವುದು,

11 ನಾಮನಿರ್ದೇಶನ ಮಾಡದೆ ಉಳಿದಿರುವ ಖಾತೆಗಳಿಗೆ ಆದಷ್ಟು ಶೀಘ್ರವಾಗಿ ಗ್ರಾಹಕರಿಂದ ನಾಮನಿರ್ದೇಶನ ಮಾಡಿಸುವುದು,

12 ಪೂರ್ಣಗೊಂಡ ಉಳಿತಾಯ ಖಾತೆ ಪಾಸ್ ಪುಸ್ತಕಗಳನ್ನು ಗ್ರಾಹಕರಿಗೆ ನೀಡುವುದು ಮತ್ತು ಖಾತೆಯ ತಃಖ್ತೆಯನ್ನು ನಿಯತಕಾಲಿಕವಾಗಿ ನೀಡುವುದು,

13 ಠೇವಣಿಗಳ ವಿವಿಧ ಯೋಜನೆಗಳನ್ನು ತಿಳಿಸುವ ಭಿತ್ತಿಪತ್ರಗಳನ್ನು, ಪ್ರಚಾರವನ್ನು ಬ್ಯಾಂಕ್ ಆವರಣದಲ್ಲಿ ಗ್ರಾಹಕರಿಗೆ ಕಾಣುವಂತೆ ತೂಗುಹಾಕುವುದು,

14 ಠೇವಣಿಯ ಪಕ್ವತೆ ಅವಧಿ ಮುಗಿದಾಗ ಠೇವಣಿದಾರರಿಗೆ ಪತ್ರ ಬರೆದು ಠೇವಣಿಯನ್ನು ಪುನರ್‌ನವೀಕರಣ ಮಾಡಲು ವಿನಂತಿಸಿಕೊಳ್ಳುವುದು,

15 ಸೂಕ್ತ ಸ್ಥಳಗಳಲ್ಲಿ ಗ್ರಾಹಕರಿಗೆ ಠೇವಣಿಗಳಿಗೆ ಸಂಬಂಧಪಟ್ಟ ನಮೂನೆಗಳನ್ನು ಒದಗಿಸುವುದು,

16 ತ್ರಿಭಾಷಾ ಕರಪತ್ರಗಳನ್ನು, ಭಿತ್ತಿಪತ್ರಗಳನ್ನು ಒದಗಿಸಿ ಠೇವಣಿಗಳ ಮಾಹಿತಿ ನೀಡುವುದು,

17 ಅನಾದರಣೆಗೊಂಡ ಚೆಕ್‌ಗಳನ್ನು ಗ್ರಾಹಕರಿಗೆ 24 ಗಂಟೆಯೊಳಗೆ ತಲುಪಿಸುವುದು.

18 ತಂತಿ ವರ್ಗಾವಣೆ ಶಾಖೆಗೆ ಬಂದಾಗ ತಕ್ಷಣ ಗ್ರಾಹಕನ ಖಾತೆಗೆ ತಡಮಾಡದೆ ಜಮಾ ಮಾಡುವುದು,

19 ಅವಧಿಗೆ ಅನುಸಾರವಾಗಿ ಸಿಬ್ಬಂದಿಯನ್ನು ಒಂದು ಮುಂಗಟ್ಟೆಯಿಂದ ಮತ್ತೊಂದು ಮುಂಗಟ್ಟೆಗೆ ಬದಲಾಯಿಸುವುದು. ಇದರಿಂದ ನೌಕರರಿಗೆ ಕೆಲಸದ ಸಂಪೂರ್ಣ ಜ್ಞಾನ ಬರುವುದಲ್ಲದೆ ಗ್ರಾಹಕಸೇವೆ ಉತ್ತಮಗೊಳ್ಳುವುದು,

20 ದೂರು ಪೆಟ್ಟಿಗೆ, ದೂರು ಪುಸ್ತಕ ಗ್ರಾಹಕರಿಗೆ ಒದಗಿಸುವುದು,

21 ಶಾಖಾ ಮಟ್ಟದ ಗ್ರಾಹಕ ಸೇವಾ ಸಮಿತಿಗಳನ್ನು ರಚಿಸುವುದು,

22 ನಿಯತಕಾಲಿಕ ಗ್ರಾಹಕರ ಸಭೆಯನ್ನು ಕರೆದು ಅವರ ಸಮಸ್ಯೆ, ಕುಂದುಕೊರತೆಗಳನ್ನು ಅರಿಯುವುದು ಮತ್ತು ಸಲಹೆ, ಸೂಚನೆಗಳನ್ನು ಸ್ವೀಕರಿಸುವುದು,

23 ಶಾಖಾ ಕಟ್ಟಡದ ಆವರಣ ಶುಚಿಯಾಗಿಡುವುದು ಮತ್ತು ಗ್ರಾಹಕರಿಗೆ ಅದೋರಚನೆ ಸೌಲಭ್ಯಗಳು ದೊರೆಯುವಂತೆ ಏರ್ಪಾಟು ಮಾಡುವುದು. ಉದಾಹರಣೆಗೆ ವಿಶಾಲವಾದ ಬ್ಯಾಂಕ್ ಆವರಣ, ಗ್ರಾಹಕರಿಗೆ ಕುಳಿತುಕೊಳ್ಳಲು ಉತ್ತಮ ಆಸನಗಳು ಮತ್ತು ಕುಡಿಯುವ ನೀರು, ವಾರ್ತಾ ಪುಸ್ತಕಗಳನ್ನು ಒದಗಿಸುವುದು,

24 ವ್ಯವಹಾರದ ವೇಳೆಯನ್ನು ಸ್ಪಷ್ಟವಾಗಿ ಬರೆದು ಫಲಕವನ್ನು ಪ್ರಮುಖ ಸ್ಥಳದಲ್ಲಿ ತೂಗುಹಾಕುವುದು,

ಈ ಎಲ್ಲಾ ಅಂಶಗಳನ್ನು ಗುರುತಿಸಿ ಬ್ಯಾಂಕ್ ಶಾಖೆಯಲ್ಲಿ ಪಾಲಿಸಿದರೆ ಗ್ರಾಹಕ ಸಂತುಷ್ಟವಾಗುವುದಲ್ಲದೆ ಬ್ಯಾಂಕಿನ ಮುಖ್ಯ ಉದ್ದೇಶವಾದ ಸಮುದಾಯ ಸೇವೆ ನಿರಂತರವಾಗಿ ನಡೆಸಿಕೊಂಡು ಬಂದು ಹೆಚ್ಚಿನ ಲಾಭಾಂಶ ಪಡೆಯುತ್ತಾ, ಬ್ಯಾಂಕು ಮುನ್ನಡೆ ಸಾಧಿಸುವುದರಲ್ಲಿ ಸಂದೇಹವಿಲ್ಲ. ಕೊನೆಯದಾಗಿ, ಮಗ ಉಂಡರೆ ಕೇಡೆ, ಮಳೆ ಬಂದರೆ ಕೇಡೆ ಎನ್ನುವ ಹಾಗೆ ಗ್ರಾಹಕ ಬಂದರೆ ಕೇಡೆ, ವ್ಯವಹಾರ ಹೆಚ್ಚಾದರೇ ಕೇಡೆ ?—ಎಂದು ನಾವು ಪ್ರಶ್ನಿಸಿಕೊಳ್ಳಬಹುದು. ★

ಬ್ಯಾಂಕ್ ಮೋಸಗಳು

ಪ್ರೊ. ಸಿ. ಗೋವಿಂದಾಚಾರ್
ವಾಣಿಜ್ಯ ವಿಭಾಗ, ಆಚಾರ್ಯ ಪಾಠಶಾಲಾ ಕಾಲೇಜು, ಎನ್. ಆರ್. ಕಾಲೋನಿ, ಬೆಂಗಳೂರು ೧೯

ಬ್ಯಾಂಕಿಂಗ್ ಎಷ್ಟು ಹಳೆಯದೋ ಬ್ಯಾಂಕ್ ವಂಚನೆಯೂ ಅಷ್ಟೇ ಹಳೆಯದು. ಹಾಗೆ ನೋಡುವುದಾದರೆ, ಬ್ಯಾಂಕಿಂಗಿನ ಉಗಮಕ್ಕೂ ಹಿಂದಿನಿಂದಲೇ ವಂಚನೆ ಪ್ರಪಂಚದಲ್ಲಿ ಬೆಳೆದು ಬಂದಿದೆ. ಇಂದಿನ ಸಂಕೀರ್ಣ ವ್ಯವಸ್ಥೆಯಲ್ಲಿ ವಂಚನೆಗೆ ನಾನಾಮುಖಗಳಿವೆ, ನಾನಾ ವಿಧಾನಗಳೂ ಇವೆ. ಕಾನೂನನ್ನೇ ಸರಿಸುವ ಚಾಣಾಕ್ಷತೆಯೂ ಬೆಳೆದಿದೆ.

ಬ್ಯಾಂಕಿಂಗ್ ಎಷ್ಟು ಹಳೆಯದೋ ಬ್ಯಾಂಕ್ ಮೋಸವೂ ಅಷ್ಟೇ ಹಳೆಯದು. ಗರುಕೆ ಹುಲ್ಲಿನಂತೆ ಇದ್ದದ್ದು ಈಗ ಹೆಮ್ಮರವಾಗಿ ಬೆಳೆದಿದೆ. ಆದರಲ್ಲೂ ಬಿಸಿಸಿಐ ಹಾಗೂ ಶೇರುಪೇಟೆ ಹಗರಣದ ನಂತರ ಬ್ಯಾಂಕ್ ಮೋಸಗಳಲ್ಲಿ ಹೊಸ ಆಯಾಮಗಳು ಮೂಡಿರುವುದಲ್ಲದೆ ವಂಚನೆಯ ಜಾಲ ನೂರ್ಮಡಿಯಾಗಿದೆ. ಈ ದಿಸೆಯಲ್ಲಿ ಈ ಕೆಳಗಿನ ಅಂಕಿ ಅಂಶಗಳು ಗಮನಾರ್ಹ :

ಕಾಲ	ವಂಚನೆಗಳ ಸಂಖ್ಯೆ		ಹಣದ ಮೊತ್ತ (ಕೋಟಿ ರೂ. ಗಳಲ್ಲಿ)	ವಸೂಲಾತಿ
1. 1976–92	30000		800	
2. 1993–94 [ಶೇರು ಹಗರಣದ ಅನಂತರ]	2800	(ಬ್ಯಾಂಕುಗಳಿಗೆ ತಗಲಿದ)	400	
3. ಅತಿ ಹೆಚ್ಚಿನ ನಷ್ಟ : ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯ	51		115	ಶೇ. 10ಕ್ಕಿಂತ ಕಡಿಮೆ
4. ಅತಿ ಹೆಚ್ಚಿನ ಪ್ರಕರಣಗಳು ಭಾರತೀಯ ಸ್ಟೇಟ್ ಬ್ಯಾಂಕ್	636		10	

ಅಂಕಿ ಅಂಶಗಳು—ಎಕನಾಮಿಕ್ಸ್ ಟೈಮ್ಸ್ ಸೆಪ್ಟೆಂಬರ್ 1994

ವಂಚನೆಗಳು ಭಾರತದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಒಂದು ಸರ್ವಸಾಮಾನ್ಯ ಲಕ್ಷಣವೇ ಎಂದು ಹೇಳಬೇಕು. ಹೊಸ ಹೊಸವು ತಲೆದೋರುತ್ತಲೇ ಇವೆ. ಸ್ಥಿರ ಠೇವಣಿ, ಮಿಾರೆಳೆತ ಹಾಗೂ ಸರ್ಕಾರಿ ಖಾತೆಗಳು, ಹಣರವಾನೆ, ಹುಂಡಿ ಮತ್ತು ಸ್ವರ್ಣ ಸಾಲ—ಇವೇ ವಂಚನೆಗಳು ಜರುಗುವ ಪ್ರಮುಖ ಕ್ಷೇತ್ರಗಳು. ಇವುಗಳನ್ನು ಏಳು ಭಾಗಗಳಾಗಿ ವಿಂಗಡಿಸಬಹುದು : (1) ಹಣ ಹಾಗೂ ವಿವೇಚನಾಧಿಕಾರದ ದುರುಪಯೋಗ, (2) ಖೋಟ ಸಹಿ, (3) ಅಪರಿಚಿತ ರೀತಿಯಲ್ಲಿ ನಗದೀಕರಣ, (4) ಹಣ ವಾಪಸಾತಿ ಆದೇಶದಲ್ಲಿ ಮೋಸ [ಇತ್ತೀಚಿನ ವರದಿಗಳ ಪ್ರಕಾರ ಇದರಲ್ಲಿ ತೊಡಗಿರುವ ಹಣದ ಮೊತ್ತ 1000 ಕೋಟಿ ರೂ.ಗಳು], (5) ತೀರುವೆ ವಿಭಾಗ, (6) ವಿದೇಶಿ ವಿನಿಮಯ ಗಳಿಕೆ, (7) ರೋಜು/ಖಾತೆ ಪುಸ್ತಕಗಳಲ್ಲಿ ಉದ್ದೇಶಪೂರ್ವಕವಾಗಿ ತಪ್ಪು ನಮೂದಿಕರಣ. ವಂಚಕರ ಕೂಟದಲ್ಲಿ ವೃತ್ತಿಪರ ಪಕ್ಕಾ ಕಳ್ಳರು ಪ್ರಥಮ ಸ್ಥಾನದಲ್ಲಿರುವರು. ಒಂದೇ ಏಟಿಗೆ ಭಾರಿ ಲೂಟಿ ಹೊಡೆದು ಹಲವಾರು ವರ್ಷಗಳು ಸುಮ್ಮನಿರುವರು. ಅದೃಷ್ಟಬಲದಿಂದ ಚೆನ್ನಾಗಿಯೇ ಜೀವನ ಮಾಡುವರು. ಅಪರಿಚಿತ ವ್ಯಕ್ತಿಗಳು, ರೌಡಿಗಳು, ಪೋಲಿ ಪೋಕರಿಗಳು ಮಾಡುವ ವಂಚನೆಯೇ ಸರ್ವವ್ಯಾಪಕವಾಗಿದೆ. ಇವರೊಂದಿಗೆ ಬ್ಯಾಂಕ್ ಸಿಬ್ಬಂದಿ ವರ್ಗದಲ್ಲಿ ಕೆಲವರು ಹಾಗೂ ಶೇರು ದಳ್ಳಾಳಿಗಳೂ ಸೇರಿ ವಂಚನೆಗಳು ಸಲೀಸಾಗಿ ಸಾಗುತ್ತಿವೆ.

ವಂಚನೆಯ ವಿನ್ಯಾಸ

ಬೇಲಿಯೇ ಎದ್ದು ಹೊಲ ಮೇಯ್ದರೆ ಹೇಗೆ ? ಥಾಣೆ ಜಿಲ್ಲಾ ಸಹಕಾರಿ ಬ್ಯಾಂಕಿನ ನಿರ್ವಾಹಕನೊಬ್ಬ ದೀಪಕ್ ಶಿಂಧೆ ಎಂಬ ಇಲ್ಲದ

ಹೆಸರಿನಲ್ಲಿ ಖಾತೆ ತೆರೆದು 35 ಲಕ್ಷ ರೂ. ಲಪಟಾಯಿಸಿ 'ದೀಪಕ್ ಹಣ ದೋಚಿ ಪರಾರಿಯಾಗಿದ್ದಾನೆ' ಎಂದು ತಾನೇ ಪೋಲೀಸರಿಗೆ ದೂರಿತ್ತ. ಇವನ ದುರದೃಷ್ಟ—ಬ್ಯಾಂಕಿನ ಇಬ್ಬರು ಶೇರುದಾರರು ಈ ರಹಸ್ಯವನ್ನು ಬಯಲು ಮಾಡಿ ಇನ್ನೂ 22 ಸುಳ್ಳು ಲೆಕ್ಕ ಪ್ರಕರಣಗಳಲ್ಲಿ ಇವನ ಪಾತ್ರ ಇದೆ ಎಂದು ಹೇಳಿಕೆ ಇತ್ತರು. ನಿರೀಕ್ಷಣ ಜಾಮೀನಿನ ಮೇಲೆ ಬಿಡುಗಡೆ ಆದ ಇವನು ಇನ್ನೂ ನ್ಯಾಯಾಲಯಕ್ಕೆ ಅಲೆದಾಡುತ್ತಿದ್ದಾನೆ.

ಕದ್ದ ಚೆಕ್ಕಿನ ಮೂಲಕ ಖಾತೆ ತೆರೆಯುವುದು, ನಗದೀಕರಿಸುವುದು, ಅನಂತರ ಪರಾರಿಯಾಗುವುದು ಹಳೆ ವಂಚನೆಯೇ ಸರಿ. ಖಾತೆ ತೆರೆಯುವಾಗ ಪರಿಚಯ ಕಲಾಪ ಕೇವಲ ಔಪಚಾರಿಕವಾದ್ದು. ಇಲ್ಲಿ ಪರಿಚಯಸ್ಥನ ಹೊಣೆ ಆನುಷಂಗಿಕ. ಬೇರೊಂದು ಪಟ್ಟಣದಲ್ಲಿ ಚೆಕ್ಕೊಂದನ್ನು ಕದ್ದು ತರಲು ಒಬ್ಬನನ್ನು ಗೊತ್ತು ಮಾಡಿ ಲಕ್ಷಗಟ್ಟಲೆ ಹಣ ಸಂಪಾದಿಸಿರುವ ಪ್ರಸಂಗಗಳು ಬಿಹಾರ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಜರುಗಿವೆ. ಸಣ್ಣ ಶಾಖೆಗಳಲ್ಲಿ ನಿದ್ರಿಸುತ್ತಿರುವ ಖಾತೆಗಳಿಗೆ ಚೆಕ್ಕುಗಳ ವ್ಯವಹಾರಗಳನ್ನು ಸರಿದೂಗಿಸುವ ಪ್ರಕರಣಗಳಿವೆ. ಅಂತರ ಶಾಖಾಮಟ್ಟದಲ್ಲಿ ಖಾತೆಗಳನ್ನು ಬಹಳ ದಿನಗಳ ವರೆಗೆ ತಾಳೆ ಮಾಡದಿದ್ದರೆ ಮೋಸಕ್ಕೆ ಆಮಂತ್ರಣವಿತ್ತಂತೆಯೇ.

ಖೋಟಾ ಚೆಕ್ಕು ಹಾಗೂ ರಾಸಾಯನಿಕವಾಗಿ ತಿದ್ದಿದ ಚೆಕ್ಕುಗಳು ತುಂಬಾ ಅಪಾಯಕಾರಿ ಎಂದು ತಿಳಿದ ನಟವರ್‌ಲಾಲ್ ಈಗ 'ಮೆಗಾ' ಮೋಸಗಾರನಾಗಿದ್ದಾನೆ. ಬೇರೆ ವಿಧಾನಗಳನ್ನು ಕಂಡುಕೊಂಡಿದ್ದಾನೆ. ಖಾತೆಯೊಂದರಲ್ಲಿ 500 ರೂ. ಶಿಲ್ಕಿದೆ ಅಂತ ಇಟ್ಟುಕೊಳ್ಳೋಣ. ಈ ಖಾತೆಗೆ ಇನ್ನೂ 500 ರೂ. ಹಾಕಿ, ಖಾತೆ ಗುಮಾಸ್ತನಿಗೆ ಸ್ವಲ್ಪ ಕೈ ಬೆಚ್ಚಗೆ ಮಾಡಿದರೆ 500+500=1000 ಆಗುವ ಬದಲು 500, 500 ಆಗುವುದು. ತಾಳೆ ಹಾಕುವಾಗ ಈ ವಿಷಯ ತಲೆದೋರಿದಾಗ 'ತಪ್ಪು ನಮೂದೀಕರಣ' ಎಂದು ಜಾರಿಕೊಳ್ಳಬಹುದು.

ಎಕನಾಮಿಕ್ ಟೈಮ್ಸ್ ಪತ್ರಿಕೆಯ ಪ್ರಕಾರ ತೀರುವೆ ವಿಭಾಗದಲ್ಲಿ ಸಿಬ್ಬಂದಿ ವರ್ಗದ ಕೆಲವರ ಕುಮ್ಮಕ್ಕಿನಿಂದ ಸುಮಾರು 200 ಕೋಟಿ ರೂ. ಮೋಸ ಜರುಗಿದೆ. ರಿಸರ್ವ್ ಬ್ಯಾಂಕ್ ಇದನ್ನು ಅಲ್ಲಗಳೆದಿದೆ. ತೀರುವೆಗಾಗಿ ಬಂದ ಚೆಕ್ಕನ್ನು ಬೇಕೆಂತಲೇ ನಾಶಗೊಳಿಸುವುದು, ನಮೂದೀಕರಣದಲ್ಲಿ ಗೋಲ್‌ಮಾಲ್ ಮಾಡುವುದು, ಅನಾದರಣೆಯಾದ ಚೆಕ್ಕನ್ನು ನಿಧಾನವಾಗಿ ವಾಪಸ್ ಮಾಡುವುದು, ಇನ್ನೂ ಚಮತ್ಕಾರ ವಿಧಾನಗಳಿವೆ. ಪರಸ್ಥಳ ಚೆಕ್ಕು-ಹುಂಡಿಗಳಲ್ಲಿ ಇಂಥ ಮೋಸಗಳು ಜರುಗುತ್ತಲೇ ಇವೆ. ಚೆಕ್ಕು-ಡ್ರಾಫ್ಟುಗಳ ಪುಸ್ತಕದಲ್ಲಿ ಒಂದನ್ನೋ ಅಥವ ಇಡಿ ಡ್ರಾಫ್ಟು ಪುಸ್ತಕವನ್ನೇ ಕದ್ದು ಭಾರಿ ಪಾವತಿಗಳನ್ನು ಮಾಡಿ ಸಿಕ್ಕಿಬಿದ್ದ ಪ್ರಸಂಗಗಳಿವೆ. ಸಿಬ್ಬಂದಿ ವರ್ಗದವರ ಶಾಮೀಲಿಲ್ಲದೆ ಅಂಚೆ ವರ್ಗಾವಣೆಯಲ್ಲಿ ವಂಚನೆ ಸಾಧ್ಯವಿಲ್ಲ. ಚೆಕ್ಕುಗಳನ್ನು ಅಂಚೆರವಾನೆ ಹಂತದಲ್ಲೇ 'ಕುಂಭಕೋಣ' ಮಾಡಿ ತಾನೇ ವಾಹಕನಂತೆ ವರ್ತಿಸಿ ವಂಚಿಸಿರುವುದನ್ನೂ ನೋಡಬಹುದು. "ನಿಗಾ ಇಟ್ಟು ಇಂಥವರನ್ನು ಗುರುತಿಸಿ ಬಯಲಿಗೆಳೆಯಬೇಕು ನೀವು" ಎಂದು ಸಿಬ್ಬಂದಿಗಳಿಗೆ ಸಲಹೆ ಬಂದಾಗ "ನೋಡಿ ಸ್ವಾಮಿ, ಹೇಳೋದು ಬಹಳ ಸುಲಭ. ಆದರೆ ಬ್ಯಾಂಕ್ ವ್ಯವಹಾರಗಳ ಗಾತ್ರ ಹಾಗೂ ಸಂಕೀರ್ಣದಿಂದ ಎಲ್ಲರ ಬಗ್ಗೆ ನಾವು ನಿಗಾ ಇಡಲು ಸಾಧ್ಯವಿಲ್ಲ. 100 ರೂ.ಗಳ ಚೆಕ್ಕೊಂದು ಮೋಸದ್ದು ಎಂದು ಅದರ ಮೇಲೆ ನಿಗಾ ಇಟ್ಟರೆ ಪಕ್ಕದಲ್ಲೇ 1 ಲಕ್ಷ ರೂ ಮೋಸ ಜರುಗಿರುತ್ತೆ" ಎಂದು ಗಂಭೀರವಾಗಿ ಉತ್ತರಿಸಿದರು ಬ್ಯಾಂಕ್ ನಿರ್ವಾಹಕರು. ಚೆಕ್ಕು ಪುಸ್ತಕವನ್ನು ಟೇಬಲ್ ಡ್ರಾಯರ್‌ನಲ್ಲಿ ಬೀಗ ಹಾಕದೇ ಹಾಗೇ ಬಿಟ್ಟು, ಮನೆ ಕೆಲಸದವಳು 44 ಚೆಕ್ಕುಗಳನ್ನು ದುರುಪಯೋಗಿಸಿಕೊಂಡಿರುವುದು ಪ್ರಭುದಯಾಳ್ ವಿ. ಜ್ವಾಲಾ ಬ್ಯಾಂಕ್ ಪ್ರಕರಣದಲ್ಲಿದೆ. ದೂರವಾಣಿಯ ಮೂಲಕ ಅಪರಿಚಿತ ಅಥವ ಪರಿಚಿತ ವ್ಯಕ್ತಿಯೇ ರಾಜಕಾರಣಿಯ ಪರವಾಗಿ ಹಣ ದೋಚಿರುವುದನ್ನು ಭಾರತೀಯ ಸ್ಟೇಟ್ ಬ್ಯಾಂಕ್ ನಗರವಾಲ ಪ್ರಕರಣದಲ್ಲಿ ನೋಡಬಹುದು. ವಿವೇಚನಾಧಿಕಾರವನ್ನು ಮೀರಿ ಉದರಿ ಪತ್ರ-ಖಾತರಿಗಳನ್ನು ಕೊಟ್ಟ ಸ್ವಾಮಿ ಜೆ. ಪಟೇಲ್ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ ಲಂಡನ್ ಶಾಖೆಯನ್ನು ಮೋಸಗೊಳಿಸಿ ಸಿಕ್ಕಿಬಿದ್ದ. ಸುಳ್ಳು ಭರಾವಣೆ ಪತ್ರದ ಆಧಾರದ ಮೇಲೆ ಉದರಿ ಪತ್ರವನ್ನು ಸೃಷ್ಟಿಸಿ ಸಮುದ್ರಯಾನದಲ್ಲಿ ಮೋಸವಾಗಿದೆ. ಇದನ್ನು ತಡೆಗಟ್ಟಲು ಸುರಕ್ಷಿತ ಹಾಗೂ ಸಂಕ್ಷಿಪ್ತ ಸಾಗಣೆ ವ್ಯವಸ್ಥೆ ಜಾರಿಗೆ ಬಂತು. ಆದರೂ ಇಡೀ ಪೆಟ್ಟಿಗೆಯನ್ನೇ ಲಪಟಾಯಿಸಿದರೆ ಹೇಗೆ ತಡೆಯುವುದು ?

ಅರ್ಧ ಹರಿದ ಚೆಕ್ಕು, ಕೊಳೆಯಾದ ಅಥವಾ ಮುದುರಿಹೋದ ಚೆಕ್ಕುಗಳನ್ನು ಬುದ್ಧಿವಂತನಾದ ಗ್ರಾಹಕನಾದವನು ಪೂರ್ತಿಯಾಗಿ ನಾಶಗೊಳಿಸಬೇಕು. ಆದರೆ ಇವನ ಅಲಕ್ಷ್ಯದಿಂದ ಚೋರನು ಬುದ್ಧಿವಂತನಾಗುವನು. ಹಿಂದೆ ಶೋಲೆ ವಿ. ರ್‍ಯಾಮ್ಸ್‌ಬಾತಮ್ ಪ್ರಕರಣದಲ್ಲಿ ಎರಡಾಗಿ ಹರಿದು ಬಿಸಾಡಿದ್ದ ಚೆಕ್ಕೊಂದನ್ನು ದಾರಿಹೋಕನೊಬ್ಬ ತೆಗೆದುಕೊಂಡು ಅಂಟಿಸಿ ನಗದೀಕರಿಸಿದ. ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ "ಚೆಕ್ಕಿನ ಮೇಲೆ ಅಂಕಿಅಂಶಗಳು ಚೆನ್ನಾಗಿ ಕಾಣುತ್ತಿದ್ದುದರಿಂದ ಹಣ ಕೊಟ್ಟೆವು" ಎಂದು ಉತ್ತರ ಬಂತು. ಹರ್ಷದ್ ಮೆಹ್ತಾ ಹಗರಣದಂತೆಯೇ ನವದೆಹಲಿಯ ಗ್ರೀನ್ ಪಾರ್ಕ್ ಬಡಾವಣೆಯ ಸ್ಟೇಟ್ ಬ್ಯಾಂಕಿನಲ್ಲಿ ಹಾಗೂ ಎರಡು ಸಂಸ್ಥೆಗಳಿಂದ ಪಂಜಾಬ್ ನ್ಯಾಶನಲ್ ಬ್ಯಾಂಕಿನಲ್ಲಿ ಮೋಸವಾಗಿದೆ ಎಂದು ರಿಸರ್ವ್ ಬ್ಯಾಂಕಿಗೆ ಸಲ್ಲಿಸಿದ ವರದಿಯಲ್ಲಿದೆ. ಕಾರ್ಯದರ್ಶಿ, ಲೆಕ್ಕಿಗ, ಅವನ ಸಹಾಯಕ ಹಾಗೂ ಗುಮಾಸ್ತ—ಈ ನಾಲ್ವರೂ ಪಿತೂರಿಯಿಂದ ಲಂಕ್ಲಾಕುದೇರು ಸಹಕಾರಿ ಗ್ರಾಮೀಣ ಬ್ಯಾಂಕನ್ನು ಮೋಸಗೊಳಿಸಿ 52 ಲಕ್ಷ ದೋಚಿದ್ದನ್ನು ಆಂಧ್ರಪ್ರದೇಶದ ಲೋಕಾಯುಕ್ತ ಪತ್ತೆಹಚ್ಚಿದೆ. ಈ ಎಲ್ಲ ಪ್ರಕರಣಗಳಲ್ಲಿ ಸಿಬ್ಬಂದಿ ವರ್ಗದವರ ಪಾತ್ರವನ್ನು ಎತ್ತಿಹಿಡಿಯಲಾಗಿದೆ. ವಜಾ ದಸ್ತಗಿರಿಗಳೂ ನಡೆದಿವೆ. ಬೀಟ ಕಬ್ಬು ಮಾರಾಟ ಸಹಕಾರ ಸಂಘ ವಿ. ಬಿಹಾರ್ ಬ್ಯಾಂಕ್ ಪ್ರಕರಣದಲ್ಲಿ ಜಂಟಿ ಸಹಿ ಇರಬೇಕಾದ

ಚೆಕ್ಕೊಂದರಲ್ಲಿ ಒಂದು ಸಾಚಾ ಇನ್ನೊಂದು ಖೋಟಾ. ಬ್ಯಾಂಕ್ ಚೆಕ್ಕನ್ನು 'ಪಾಸ್' ಮಾಡಿತು. ವಂಚಕ ಮತ್ತು ಬ್ಯಾಂಕ್ ನಿರ್ವಾಹಕ ಬಂದ ಹಣವನ್ನು ಹಂಚಿಕೊಂಡರು. ಈ ಚೆಕ್ಕು ಬೇಡವೆಂದು ಮುದುರಿ ಬಿಸಾಡಿದ ಚೆಕ್ಕು.

ಸ್ವರ್ಣ ಸಾಲಗಳಲ್ಲಿ ಮೋಸ ಅಕ್ಕಸಾಲಿಗನನ್ನೇ ದಂಗುಬಡಿಸುವಂಥಾದ್ದು. ಮೇಲ್ನೋಟಕ್ಕೆ ಅಪರಂಜಿ. ಆದರೆ ಮೂಲಲೋಹಕ್ಕೆ ಗಟ್ಟಿ ಮುಲಾಮು ಹಾಕಿ ಹೊಳೆಯುವಂತೆ ಮಾಡಿ ಸಾಲ ಪಡೆದು ಬ್ಯಾಂಕುಗಳನ್ನು ವಂಚಿಸಿರುವುದು ರಾಜಸ್ಥಾನದಲ್ಲಿ ವರದಿಯಾಗಿದೆ. ಸಾಲಮೇಳ–ಮನ್ನಾಗಳಿಂದ ಬ್ಯಾಂಕ್ ಮೋಸಗಳು ಹೊಸ ರೂಪ ತಾಳಿವೆ. "ಬನ್ನಿ, ಸಾಲ ಕೊಡಿಸುವೆವು" ಎಂದು ಗುಡಿಸಲು ನಿವಾಸಿಯನ್ನು ಎಳೆದುಕೊಂಡು ಹೋದಾಗ ಅವನಿಗೆ ಆಶ್ಚರ್ಯ! ಮಾನ್ಯ ಮಂತ್ರಿರಾಜನಿಂದ ಇದೊಂದು ಬಿಳಿಯ ಕಾಲರಿನ ಕೃಷಿ ಸಾಲದಲ್ಲಿ ಜರುಗಿದ ಮೋಸ ಸ್ವಾರಸ್ಯವಾಗಿದೆ. ಎಮ್ಮೆಗಳನ್ನು ಕೊಳ್ಳಲು ಸಾಲ ಕೊಡುವ ಬ್ಯಾಂಕು ಎಮ್ಮೆ ಕಿವಿಯ ಮೇಲೆ ಬ್ಯಾಂಕಿನ ಮುದ್ರೆ ಗುರುತನ್ನು ಒತ್ತುವುದು. ಆದರೆ ಚೋರ ಮಾರ್ತಾಂಡ ಏನು ಮಾಡುವನು ? ಆ ಗುರುತನ್ನು ಅಳಿಸುವನು ಅಥವ ಅಷ್ಟಕ್ಕೇ ಹರಿದು ಹಾಕುವುದಕ್ಕೂ ಹಿಂಜರಿಯುವುದಿಲ್ಲ. ಅದೇ ಎಮ್ಮೆಯನ್ನು ಬೇರೊಂದು ಬ್ಯಾಂಕಿನಲ್ಲಿ ಸಾಲ ಎತ್ತಲು ಉಪಯೋಗಿಸುತ್ತಾನೆ. ಸತ್ತ ಎಮ್ಮೆಯ ಕಳೇಬರವನ್ನು ಮುಂದಿಟ್ಟು 'ನಿಮ್ಮ ಸಾಲದಿಂದ ಖರೀದಿಸಿದ ಎಮ್ಮೆ' ಎಂದು ಅತ್ತು ಕರೆದು ನಾಟಕವಾಡಿ ಸಾಲ ಮನ್ನಾಮಾಡಿಸಿಕೊಳ್ಳುವನು. "ಸಣ್ಣ ಸಾಲ ತೆಗೆದುಕೊಂಡು. ಕೊಡದೆ ವಂಚಿಸಿದರೆ ಸಾಲಗಾರನಿಗೆ ತಲೆನೋವು. ಭಾರಿ ಸಾಲ ತೆಗೆದುಕೊಂಡು ಕೊಡದೆ ವಂಚಿಸಿದರೆ ಬ್ಯಾಂಕರನಿಗೆ ತಲೆನೋವು." ಇದು ಬ್ಯಾಂಕಿಂಗ್ ವಲಯದಲ್ಲಿರುವ ಆಡಿಕೆ.

ಪಾಶ್ಚಾತ್ಯ ದೇಶಗಳಲ್ಲಿ

ಪಾಶ್ಚಾತ್ಯ ದೇಶಗಳಲ್ಲಿ ನಡೆಯುವ ಬ್ಯಾಂಕ್ ವಂಚನೆಗಳನ್ನೂ ಅವುಗಳ ವಿನ್ಯಾಸಗಳನ್ನೂ ನೋಡಿದರೆ ನಮ್ಮವು ಜುಜುಬಿ. ಚಾರ್ಲ್ಸ್ ಕ್ಯಾಲ್‌ಥ್ರೋಪ್ ಎಂಬುವನು 'ಶಾಕಲ್' ಎಂಬ ಅಂಕಿತದಲ್ಲಿ ಸುಮಾರು 300ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಪಾಸ್‌ಪೋರ್ಟ್ ಅಧಿಕಾರಿಗಳನ್ನೂ ಬ್ಯಾಂಕುಗಳನ್ನೂ ವಂಚಿಸಿ ಫ್ರಾನ್ಸ್‌ನ ಮಾಜಿ ಅಧ್ಯಕ್ಷ ಡಿಗಾಲ್‌ರವರನ್ನು ಕೊಲ್ಲಲು ಹವಣಿಸುತ್ತಿದ್ದಾಗ ಸಿಕ್ಕಿಬಿದ್ದ. ಈ ಸತ್ಯ ಕಥೆಯ ಬಗ್ಗೆ 'ದಿ ಡೇ ಆಫ್ ಜಾಕಲ್' ಎಂಬ ಚಿತ್ರ ಬಂದಿತ್ತು. ಹಣ ರವಾನೆಯ ವಿಷಯದಲ್ಲಿ 'ದಿ ಗ್ರೇಟ್ ಟ್ರೈನ್ ರಾಬರಿ' ಒಂದು ಸತ್ಯ ಕಥಾ ಚಿತ್ರ. ಈ ಗ್ಯಾಂಗಿನ ಮುಖಂಡ 1977ರಲ್ಲಿ ನ್ಯೂ ಯಾರ್ಕಿನಲ್ಲಿ ಸಿಕ್ಕಿಬಿದ್ದ. ಹಣರವಾನೆಯ ಮೋಸದಿಂದಲ್ಲವೇ ಸ್ವಿಸ್ ಬ್ಯಾಂಕುಗಳ ಗೋಪ್ಯತೆಯ ಭದ್ರಕೋಟೆ ಬಿರುಕುಬಿಟ್ಟಿದ್ದು? ವ್ಯಾನುಗಳ ಕಳ್ಳತನದಲ್ಲಿ ಹಣ ಸಾಗಿಸುತ್ತಿದ್ದ ಬ್ಯಾಂಕಿನ ಸಿಬ್ಬಂದಿ ವರ್ಗದವರೇ ಇಲ್ಲಿ ಮುಖ್ಯ ಅಪರಾಧಿಗಳು. ಇದಾದ ಸ್ವಲ್ಪ ದಿನಗಳಲ್ಲೇ (1980ರ ಸುಮಾರಿಗೆ) ಬ್ಯಾಂಕ್ ಆಫ್ ಇಟಲಿಯ ತಿಜೋರಿಯನ್ನು ಉಡಾಯಿಸಲು ಒಂದು ಗ್ಯಾಂಗು ಅಳವಡಿಸಿದ ವಿಧಾನ—ದಿನವಿಡೀ ಸಾರ್ವಜನಿಕ ಸೇವಕರಂತೆ (ನಮ್ಮ ಪಿ ಡಬ್ಲ್ಯುಡಿನಂತೆ) ರಸ್ತೆ ಅಂಚಿನಲ್ಲಿ ಮೊಕ್ಕಾಂ ಹೂಡಿ ಕೆಲಸ ಮಾಡುವವರಂತೆ ವರ್ತಿಸಿ ರಾತ್ರಿ ನೆಲ ಅಗೆದು ಬ್ಯಾಂಕಿನ ತಿಜೋರಿ ಸಿಗುವವರೆಗೂ ಸುರಂಗ ಮಾಡಿ ದೋಚಿ ಪರಾರಿಯಾದರು. ಲಂಚಗುಳಿತನ ಪಾಕಿಸ್ತಾನ ವ್ಯಾಪಾರದ ಒಂದು ಅವಿಭಾಜ್ಯ ಅಂಗವೆಂದೇ ಹೇಳಬೇಕು. ವಿಶೇಷವಾಗಿ ಬಿಸಿಸಿಐ ಕಲಾಪಗಳು ಈ ದೇಶದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ರಂಗದಲ್ಲಿ ಕ್ರಾಂತಿಯನ್ನುಂಟುಮಾಡಿದ್ದಲ್ಲದೆ ವಿಪತ್ತನ್ನೇ ತಂದೊಡ್ಡಿತು. ಮಾಜಿ ಪ್ರಧಾನಿ ನವಾಬ್ ಶರೀಫರ ಕಾಲದಲ್ಲಿ ಅತಿ ಹೆಚ್ಚಿನ ಬ್ಯಾಂಕ್ ಅವ್ಯವಹಾರಗಳು, ವಂಚನೆಗಳು ಜರುಗಿವೆ ಎಂದು ಬಲ್ಲ ಮೂಲಗಳು ತಿಳಿಸಿವೆ. ನೂರಾರು ಸಹಕಾರಿ ಬ್ಯಾಂಕುಗಳ ಮುಳುಗಡೆ ಆಗಿ ಆ ಹಣಕ್ಕೆಲ್ಲ ಶರೀಫರೇ ಕಾರಣ ಎಂದೂ ಅವು ತಿಳಿಸಿವೆ. ಹಂಗೆರಿ ದೇಶದಲ್ಲಿ 42 ಬ್ಯಾಂಕುಗಳು ವಿವಿಧ ಮೋಸಗಳ ಜಾಲದಲ್ಲಿ ಸಿಕ್ಕಿ ನಷ್ಟವನ್ನನುಭವಿಸುತ್ತಿವೆ. ಸರ್ಕಾರ 30ಕೋಟಿ ಡಾಲರ್ ನೆರವಿಗಾಗಿ ವಿಶ್ವ ಬ್ಯಾಂಕನ್ನು ಪ್ರಾರ್ಥಿಸಿದೆ.

ಸಮೂಹ ಮಾಧ್ಯಮಗಳ ಪ್ರಭಾವ

ಸಿನಿಮಾ–ಟಿವಿ ಮಾಧ್ಯಮಗಳ ಶೈಕ್ಷಣಿಕ ಮೌಲ್ಯ ಪ್ರಜಾಪ್ರಭುತ್ವದಲ್ಲಿ ಪ್ರಮುಖ ಪಾತ್ರವಹಿಸುವುದು. ಅನೇಕ ಸಂದರ್ಭಗಳಲ್ಲಿ ಅವುಗಳಿಂದ ಕೆಡುಕೂ ಉಂಟಾಗಬಹುದು. ಎಡ್ಗರ್ ವ್ಯಾಲೇಸ್‌ನ 'ದಿ ಓನ್' ಎಂಬ ಪತ್ತೇದಾರಿ ಕಥೆಯಂತೆಯೇ ಬೊಂಬಾಯಿಯಲ್ಲಿ 2 ಬ್ಯಾಂಕ್ ವಂಚನೆ ಪ್ರಕರಣಗಳು ಜರುಗಿವೆ. ಏಕಾಯಿತು? ಹೇಗಾಯಿತು? ಎಂಬುದು ಪೋಲೀಸರ ತಲೆನೋವು.

ನೋಟು ಎಣಿಸುವವನ ಗಮನ ಬೇರೆ ಕಡೆಗೆ ತಿರುಗಿಸಿ ನೋಟುಗಳನ್ನು ಕಸಿದುಕೊಂಡು ಪರಾರಿಯಾಗಿರುವ ಸಹಸ್ರಾರು ಪ್ರಸಂಗಗಳಿವೆ. ಇದರ ಬಗ್ಗೆ ಸಾಕಷ್ಟು ಪ್ರಚಾರ ಹಾಗೂ ಎಚ್ಚರಿಕೆ ಇದ್ದರೂ ವಂಚನೆ ನಿಂತಿಲ್ಲ. ಮುಗ್ಧರು, ಹಳ್ಳಿಗರು, ಅನಕ್ಷರಸ್ಥರು ಇದಕ್ಕೆ ಹೆಚ್ಚು ಬಲಿಯಾಗಿದ್ದಾರೆ. ಬ್ಯಾಂಕ್ ದರೋಡೆಗಳಿಗೂ ಸಿನಿಮಾದಲ್ಲಿ ತೋರಿಸುವ 'ಮಸಾಲಾ' ಚಿತ್ರಗಳಿಗೂ ಸಾಮ್ಯವಿದೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳ ಪುತ್ರನೊಬ್ಬ ಬ್ಯಾಂಕ್ ದರೋಡೆ ಪ್ರಕರಣದಲ್ಲಿ ಬೆಂಗಳೂರಿನಲ್ಲಿ ಸಿಕ್ಕಿಬಿದ್ದ. ಇಂಥಾ ನೂರಾರು ಪ್ರಕರಣಗಳು ಪೋಲೀಸ್ ಇಲಾಖೆಯ ಕಡತಗಳಲ್ಲಿವೆ.

ಬ್ಯಾಂಕುಗಳ ನಿತ್ಯಕಾರ್ಯವಿಧಾನಗಳಲ್ಲಿ ಉಪೇಕ್ಷೆ, ಉಚ್ಚ ನಿರ್ವಹಣೆಯ ಧೋರಣೆಗಳು ವಂಚನೆಗಳಿಗೆ ಒತ್ತುಕೊಟ್ಟಿವೆ. ಹಣ್ಣು ತಿಂದವನು ನುಣುಚಿಕೊಂಡ ಎಂಬಂತೆ ಉನ್ನತ ಅಧಿಕಾರಿಗಳು ಚಮತ್ಕಾರದಿಂದ ಜಾರಿಕೊಂಡಿರುತ್ತಾರೆ. ಮೋಸಗಳನ್ನು ತಡೆಯಲು ಅಳವಡಿಸುವ ಮಾಮೂಲು ಮಾಧ್ಯಮ—ಆಂತರಿಕ ಲೆಕ್ಕಪರಿಶೋಧನೆ—ತೀರಾ ಕಳಪೆಯಾಗಿರುತ್ತೆ. 6 ಬಾರಿ ಲೆಕ್ಕ ಪರಿಶೋಧನೆ ಆದರೂ 1993ರಲ್ಲಿ ಸ್ಟೇಟ್ ಬ್ಯಾಂಕ್ ಆಫ್

ಹೈದರಾಬಾದ್‌ನ 1.5 ಕೋಟಿ ರೂಗಳನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಆಂತರಿಕ ನಿಯಂತ್ರಣ ಎಲ್ಲಿ ಚುರುಕಾಗಿಲ್ಲವೋ ಅಲ್ಲಿದೆ ಚಾಣಾಕ್ಷ ವಂಚಕರ ಕೈವಾಡ.

ಅಮಿತಾವ್ ಘೋಷ್

ಸಂಸದೀಯ ಅಂದಾಜು ಸಮಿತಿಯ ಪ್ರಕಾರ ಕೆಳ ನೈತಿಕಮಟ್ಟ, ಸಿಬ್ಬಂದಿಯ ಕೊರತೆ, ಯಾಂತ್ರೀಕರಣದ ಕೊರತೆ, ಕಾರ್ಯವಿಧಾನದಲ್ಲಿ ಅಲಕ್ಷ್ಯ—ಇವೇ ವಂಚನೆಗೆ ಕಾರಣ ಎಂದು ವರದಿಯಲ್ಲಿ ಹೇಳಿದೆ. ಈ ಜ್ವಲಂತ ಸಮಸ್ಯೆಯನ್ನು ಬಗೆಹರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಅಮಿತಾವ್ ಘೋಷ್ ಸಮಿತಿಯನ್ನು ರಚಿಸಿತು. ಇದು ಮಾಡಿದ ಶಿಫಾರ್ಸುಗಳ ಪೈಕಿ ಈ ಕೆಳಗೆ ಹೇಳಿರುವವು ಗಮನಾರ್ಹ :

(ಅ) ಎಲ್ಲಾ ಬ್ಯಾಂಕುಗಳು ತಂತಮ್ಮ ಗ್ರಾಹಕರ ಫೋಟೋ ಗುರುತು ಕಾರ್ಡಿನೊಂದಿಗೆ ವ್ಯವಹರಿಸತಕ್ಕದ್ದು;

(ಆ) ಬ್ಯಾಂಕುಗಳ ದೈನಂದಿನ ಕಾರ್ಯವಿಧಾನಗಳಲ್ಲಿ ಸುಧಾರಣೆ;

(ಇ) 50,000 ರೂಗಳ ಗಡುವು ಮೀರಿದ ಚೆಕ್ಕುಗಳಾಗಲಿ ಡ್ರಾಫ್ಟುಗಳಾಗಲಿ ಬ್ಯಾಂಕು ನೀಡಕೂಡದು ;

(ಈ) ಬ್ಯಾಂಕ್ ಸೌಲಭ್ಯಗಳನ್ನು ತೆರಿಗೆ ತಪ್ಪಿಸಿಕೊಳ್ಳುವ ವಿಧಾನವನ್ನಾಗಿ ಉಪಯೋಗಿಸಕೂಡದು ;

(ಉ) ಶಾಖಾ ಮಟ್ಟದಲ್ಲಿ ಉದರಿಪತ್ರ, ಖಾತರಿಗಳನ್ನು ನೀಡುವಾಗ ಕೇಂದ್ರ ಅಧಿಕಾರಿಯ ಮೇರು ಸಹಿಗೆ ಒತ್ತಾಯಪಡಿಸುವುದು;

(ಊ) ಹಂತಹಂತವಾಗಿ ಗಣಕೀಕರಣ, ಇತ್ಯಾದಿ.

ಈ ಶಿಫಾರ್ಸುಗಳು ಎಷ್ಟರಮಟ್ಟಿಗೆ ಸಫಲ ಎಂಬುದು ಸಂದೇಹಾಸ್ಪದವಾಗಿಯೇ ಉಳಿದಿದೆ. ಏಕೆಂದರೆ ಚಿತ್ರವಿರುವ ಗುರುತು ಕಾರ್ಡು ಎಂದರೆ ಹಿಮಾಲಯದಷ್ಟು ಟೇಬಲ್ ಕೆಲಸ. ಸುಮಾರು 30 ದಶಲಕ್ಷ ಫೋಟೋಗಳು ಬ್ಯಾಂಕ್ ಕಡತಗಳನ್ನು ಸೇರಬೇಕಾಗುವುದು. ಇದು ವ್ಯಕ್ತಿಯನ್ನು ಗುರುತಿಸುವುದೇ ವಿನಾ ವಿವಿಧ ವಿಳಾಸಗಳನ್ನು ಕೊಟ್ಟು ವಿವಿಧ ಖಾತೆಗಳನ್ನು ತೆರೆಯುವ ಕಲಾಪಗಳನ್ನು ಗುರುತಿಸುವುದಿಲ್ಲ. ಇದರಲ್ಲಿ ತೊಡಗಿರುವ ಸಹಸ್ರಾರು 'ಜಾಕಲ್'ಗಳನ್ನು ಬಯಲಿಗೆಳೆಯಲು ಸಾಧ್ಯವಾಗುವುದಿಲ್ಲ. ಗ್ರಾಮಗಳಲ್ಲಿ ಈ ಪದ್ಧತಿ ಸಫಲವಾಗದು. ಬ್ಯಾಂಕಿನ ದೈನಂದಿನ ಕಾರ್ಯವಿಧಾನಗಳಲ್ಲಿ ಸುಧಾರಣೆಯಾಗಬೇಕಾದರೆ ಯಾಂತ್ರೀಕರಣದ ಬಗ್ಗೆ ಯೋಚಿಸಬೇಕಾಗುವುದು. ಗಣಕೀಕರಣದಿಂದ ಕಾರ್ಯದ ಗಾತ್ರವನ್ನು ಇಳಿಸಬಹುದು. ಇದರಿಂದ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ನಿಗಾ ಇಡಬಹುದು. ಸಿಬ್ಬಂದಿ ವರ್ಗದ ಸಹಕಾರ ಇಲ್ಲಿ ಅಗತ್ಯವಾಗಿದೆ. ಇನ್ನು 50,000 ರೂ ಗಡುವು ಚೆಕ್ಕಿನ ಬಗ್ಗೆ. ತುರ್ತುಪರಿಸ್ಥಿತಿಯಲ್ಲಿ ಬ್ಯಾಂಕ್ ನಿರ್ವಾಹಕ ವಿವೇಚನಾಧಿಕಾರವನ್ನು ಚಲಾಯಿಸಿ ಈ ನಿಯಮವನ್ನು ಪಾಲಿಸಲಾರ. ಸಿಬ್ಬಂದಿಗಳ ಶಾಮೀಲಿನಿಂದ ಜರುಗಿದ ವಂಚನೆಗೆ ಅಂಥವರನ್ನು ವಜಾ ಮಾಡುವ ಸರ್ಕಾರದ ನಿರ್ಧಾರ ಸರಿಯಾಗಿದೆ. ಬ್ಯಾಂಕಿಂಗ್ ವಿನಿಮಯ ಅಧಿನಿಯಮದ 10 (1) (b) (i) ಕಲಮು, ವಜಾ ಆದ ಅಪರಾಧಿ ಸಿಬ್ಬಂದಿಗಳ ಪುನರ್ನೇಮಕವನ್ನು ನಿಷೇಧಪಡಿಸಿದೆ. ಬಿಸಿಸಿಐ ಇಂಥಾ ಕೆಲಸ ಮಾಡುತ್ತಿದ್ದುದರಿಂದಲೇ ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು.

ಬ್ಯಾಂಕಿಂಗ್ ಕ್ಷೇತ್ರದ ವಿವಿಧ ಮೂಲಗಳಿಂದ ತಜ್ಞ ಸಲಹೆಗಳೂ ಬರುತ್ತಿವೆ. ಚೆಕ್ಕುಗಳನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸುವುದು, ಪ್ರತಿ ಚೆಕ್ಕಿಗೆ ಕಾರ್ಬನ್ ಪ್ರತಿ ಇರುವುದು ಒಳ್ಳೆಯದು. ಮೊತ್ತ ಬರೆದ ಜಾಗವನ್ನು ಸೆಲ್ಲೋಟೇಪಿನಿಂದ ಅಂಟಿಸುವುದು. ಐಬಿಎಂ ಸಂಸ್ಥೆ ಕಂಡು ಹಿಡಿದ 'ಯೂನಿಸಿಸ್' ಅಥವಾ ಎನ್‌ಸಿಆರ್ ಯಂತ್ರದಿಂದ ಉತ್ಪತ್ತಿಯಾದ ಡಿಜಿಟಲ್ ಚೆಕ್ಕು ಪದ್ಧತಿ, ಬ್ಯಾಂಕುಗಳಲ್ಲಿ ಬಿಗಿಯಾದ ರಕ್ಷಣಾ ವ್ಯವಸ್ಥೆ ಇತ್ಯಾದಿ. ವಿದ್ಯುನ್ಮಾನ ಚೆಕ್ಕು ಪದ್ಧತಿ ಭಾರತದಲ್ಲಿ ಸರಿಯಾಗಿ ತಲೆ ಎತ್ತಿಲ್ಲ. ಇವುಗಳ ಸಾಧ್ಯಾಸಾಧ್ಯತೆಗಳು ವೆಚ್ಚ, ಅನುಕೂಲ, ಸಿಬ್ಬಂದಿ ವರ್ಗದ ಸಹಕಾರವನ್ನು ಅವಲಂಬಿಸಿವೆ.

ಸಿಬಿಐನ ಬ್ಯಾಂಕ್ ರಕ್ಷಣಾ ವಿಭಾಗ ಈಗ 500 ಬ್ಯಾಂಕ್ ಮೋಸ ಪ್ರಕರಣಗಳ ತನಿಖೆ ನಡೆಸುತ್ತಿದೆ. ಕೇಂದ್ರ ಸರ್ಕಾರ ಈ ಸಮಸ್ಯೆಯನ್ನು ಬಗೆಹರಿಸಲು ಎಲ್ಲ ಕಡೆ ಎಲ್ಲ ರೀತಿಯಿಂದ 'ಪಾತಾಳಗರಡಿ'ಯಂತೆ ಕ್ರಮಗಳನ್ನು ತೆಗೆದುಕೊಳ್ಳುತ್ತಲೇ ಇದೆ. ಎಷ್ಟೇ ಸುಧಾರಣೆಗಳನ್ನು ತಂದರೂ ವಂಚನೆಗಳನ್ನು ಸಂಪೂರ್ಣವಾಗಿ ನಿರ್ಮೂಲಮಾಡಲು ಸಾಧ್ಯವಿಲ್ಲ. ರಕ್ತಬೀಜಾಸುರನಂತೆ ಒಂದು ಕಡೆ ವಂಚನೆ ಜರುಗಿದರೆ ಇನ್ನೂ ಹತ್ತಾರು ಸ್ಥಳಗಳಲ್ಲಿ ಅವು ವ್ಯಾಪಿಸುತ್ತವೆ. ಮೂಲವಾಗಿ ಬ್ಯಾಂಕುಗಳು, ಗ್ರಾಹಕ ಸಮುದಾಯ ಜಾಗ್ರತರಾಗಿದ್ದು ಸಾರ್ವಜನಿಕ ಬೆಂಬಲದೊಂದಿಗೆ "ವಂಚನೆ–ಶೂನ್ಯ"ದೆಡೆಗೆ ಸಾಹಸಪಡಬೇಕು. ★

ಬೆಳ್ಳಿ ಕಮ್ಮಟ

[3ನೇ ಪುಟದಿಂದ ಮುಂದುವರಿದಿದೆ]

12 ಗ್ರಾಹಕ ಸೇವೆ : ಮಂಡನೆ—ಶ್ರೀಧರ ರಾಯಸಂ ,ಪ್ರ. ಪಿ.—ವಿಜಯಲಕ್ಷ್ಮಿ ; 13 ಮುಗುಳುನಗೆಯೊಡನೆ ಸೇವೆ : ಮಂಡನೆ—ಜಯಂತಿ ಮನೋಹರ್, ಪ್ರ. ಪಿ.—ಪಾ. ರಾಜಗೋಪಾಲ ; 14 ಗ್ರಾಹಕರ ದೂರುಗಳು : ಮಂಡನೆ—ವಿಜಯಲಕ್ಷ್ಮಿ , ಪ್ರ. ಪಿ.—ಬಾಲಸರಸ್ವತಿ; 15 ರಿಸರ್ವ್ ಬ್ಯಾಂಕ್ ಉದರಿ ನೀತಿ : ಮಂಡನೆ—ಕೆ. ಎಸ್. ಭದ್ರಣ್ಣ ; 16 ವಿದೇಶಿ ವಿನಿಮಯ ಕ್ಷೇತ್ರ—ಇತ್ತೀಚಿನ ಬೆಳವಣಿಗೆಗಳು : ಮಂಡನೆ—ಬಿ. ಎಸ್. ಸಂಜೀವ, ಪ್ರ. ಪಿ.—ಶ್ರೀಧರ ರಾಯಸಂ ; 17 ತಾಂತ್ರಿಕ ಸಲಹಾ ಕೋಶಗಳು: ಮಂಡನೆ—ಸರ್ವಮಂಗಳ, ಪ್ರ.ಪಿ.—ಬಿ.ಎಸ್. ಸಂಜೀವ, ●

ಬ್ಯಾಂಕುಗಳಲ್ಲಿ ವಂಚನೆಯ ಪ್ರಕರಣಗಳು

ಎಂ. ಆರ್. ರಘುನಾಥ್

ವ್ಯವಸ್ಥಾಪಕ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪ್ರಧಾನ ಕಛೇರಿ, ಬೆಂಗಳೂರು 560009

ಬ್ಯಾಂಕ್ ವಂಚನೆಗಳಲ್ಲಿ ನಾನಾ ಬಗೆ: ಹೊರಗಿನ ವ್ಯಕ್ತಿಗಳು ಬ್ಯಾಂಕ್ ಸಿಬ್ಬಂದಿಯವರ ನೆರವಿಲ್ಲದೆ ಮಾಡಿದಂಥವು, ಅವರ ಸಹಾಯದಿಂದ ಎಸಗಿದಂಥವು, ಬ್ಯಾಂಕ್ ಸಿಬ್ಬಂದಿ ವರ್ಗದವರೇ ಮಾಡಿದಂಥವು ಎಂದು ಇವನ್ನು ವಿಂಗಡಿಸಬಹುದು. ಯಾರು ಹೇಗೆ ಮಾಡಿದರೇನು ? ವಂಚನೆ ವಂಚನೆಯೇ. ಈ ಸಹಸ್ರಬೀಜಾಸುರನ ಸಂಹಾರ ಹೇಗೆ ?

"ಬ್ಯಾಂಕಿಂಗ್ ವಂಚನೆ", "ಬ್ಯಾಂಕಿನಲ್ಲಿ ವಂಚನೆ ಪ್ರಕರಣ" ಈ ತಲೆಬರಹಗಳಡಿಯಲ್ಲಿ ಆಗಾಗ್ಗೆ ಬರುವ ಸುದ್ದಿಗಳನ್ನು ವೃತ್ತಪತ್ರಿಕೆಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ಓದಿರುತ್ತಾರೆ. ಈಚೀಚೆಗೆ ಇಂತಹ ಪ್ರಕರಣಗಳು ಹೆಚ್ಚಾಗಿರುವುದು ಕಂಡುಬರುತ್ತಿದ್ದು ಸಾರ್ವಜನಿಕರನ್ನು ಧೃತಿಗೆಡಿಸುತ್ತಿವೆ. ಇಂತಹ ಸುದ್ದಿಗಳನ್ನು ಓದಿದಾಕ್ಷಣ ಆಶ್ಚರ್ಯವಾಗಿ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಾಗುತ್ತದೆ. ವಂಚನೆಯನ್ನು ಅಷ್ಟು ಚತುರತೆಯಿಂದ ಮಾಡಲಾಗಿರುತ್ತದೆ. ಇಂತಹ ವಂಚನೆಗಳು ಕೃತ್ರಿಮೋಪಾಯ, ಕುಯುಕ್ತಿ ಮತ್ತು ಕುಟಿಲ ತಂತ್ರದಿಂದ ಒಬ್ಬ ವ್ಯಕ್ತಿ ಅಥವಾ ಹಲವು ವ್ಯಕ್ತಿಗಳು ಮಾಡುವಂಥವು. ಇತ್ತೀಚೆಗೆ ಸಂಭವಿಸಿದ 'ಷೇರು ಹಗರಣ' ಬೃಹತ್ ವಂಚನೆಯ ಪ್ರಕರಣಕ್ಕೆ ಒಂದು ಉದಾಹರಣೆ.

ವಂಚನೆ ಎಂದರೇನು ?

"ವಂಚನೆ" ಎಂದಾಕ್ಷಣ ಸಾಮಾನ್ಯವಾಗಿ ವಂಚಿಸುವುದು, ಮೋಸ ಮಾಡುವುದು ಎಂದು ಅರ್ಥವಾಗುತ್ತದೆ. ಕಪಟ, ಕೃತ್ರಿಮ ಎಂದು ತಿಳಿಯಬಹುದು. ಆದರೆ "ವಂಚನೆ" ಎಂಬ ಪದಕ್ಕೆ ಯಾವ ನಿಷ್ಕೃಷ್ಟಾರ್ಥವೂ ಇಲ್ಲ. "ಭಾರತೀಯ ದಂಡ ಸಂಹಿತೆ"ಯಲ್ಲಿ ನಿರೂಪಿಸಿರುವಂತೆ "ವಂಚನೆ" ಎಂದರೆ "ಒಬ್ಬ ವ್ಯಕ್ತಿಯು ತನ್ನ ಅಪ್ರಾಮಾಣಿಕತೆಯಿಂದ ಇನ್ನೊಬ್ಬ ವ್ಯಕ್ತಿಯ ವಿರುದ್ಧ ಲಾಭ ಗಳಿಸಲು ತೋರುವ ವರ್ತನೆ ಅಥವಾ ಮಾಡುವ ಮೋಸ" ಎಂದು ಹೇಳಬಹುದಾಗಿದೆ. ಅಂದರೆ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಮೋಸಗೊಳಿಸಿ ತಾನು ಅದರಿಂದ ಲಾಭ ಪಡೆಯುವ ಉದ್ದೇಶದಿಂದ ಮಾಡಿದ ಕೆಲಸ ಎಂದು ಹೇಳಬಹುದು. ಇಂಥ ವಂಚನೆ ಪ್ರಕರಣಗಳನ್ನು ಅನೇಕರು ತಮ್ಮ ದೈನಂದಿನ ಜೀವನದಲ್ಲೂ ಎದುರಿಸಬಹುದು. ಆದರೆ ಈಗ ನಮ್ಮ ಮುಂದಿರುವ ವಿಷಯ ಬ್ಯಾಂಕಿನಲ್ಲಿ ವಂಚನೆಯಾದ್ದರಿಂದ ಇತರೆ ವಿಷಯಗಳು ಇಲ್ಲಿ ಅಪ್ರಸ್ತುತ. ಬ್ಯಾಂಕುಗಳ ವ್ಯವಹಾರ ವಹಿವಾಟುಗಳು ಹೆಚ್ಚುತ್ತಿದ್ದಂತೆ ಇಂಥ ವಂಚನೆಯ ಪ್ರಕರಣಗಳು ಹೆಚ್ಚುಹೆಚ್ಚಾಗಿ ಆಗುತ್ತಿರುವುದು ಕಂಡುಬರುತ್ತಿವೆ. ಬ್ಯಾಂಕಿನಲ್ಲಿ ನಡೆಯುವ ವಂಚನೆಯ ಪ್ರಕರಣಗಳನ್ನು ವಿಶ್ಲೇಷಿಸಿದಾಗ ಕಂಡುಬರುವುದೇನೆಂದರೆ, ಸಾಮಾನ್ಯವಾಗಿ ಎಷ್ಟೇ ಜಾಗರೂಕರಾಗಿದ್ದರೂ ಬ್ಯಾಂಕಿನ ಸಿಬ್ಬಂದಿಯ/ಅಧಿಕಾರಿಗಳ ಯಾವುದೇ ಒಂದು ಸಣ್ಣ ಅಜಾಗರೂಕತೆಯಿಂದಾಗಿ ಇಂತಹ ವಂಚನೆ ಪ್ರಕರಣಗಳು ನಡೆಯಲು ಅವಕಾಶವಾಗುತ್ತದೆ. ಬ್ಯಾಂಕಿನಲ್ಲಿ ವಿಧಿಸಿರುವ ನೀತಿ–ನಿಯಮಗಳನ್ನು, ಕಟ್ಟುಪಾಡುಗಳನ್ನು ಸಮರ್ಪಕವಾದ ರೀತಿಯಲ್ಲಿ ಜಾರಿಗೆ ತಂದರೆ ಅಥವಾ ಅನುಸರಿಸಿದರೆ ಇಂತಹ ಎಷ್ಟೋ ವಂಚನೆಯ ಪ್ರಕರಣಗಳನ್ನು ತಡೆಯಬಹುದಾಗಿರುತ್ತದೆ.* ಆದರೆ ಬ್ಯಾಂಕುಗಳ ಕೆಲವು ವ್ಯವಸ್ಥಾಪಕರ ಅನಿಸಿಕೆ ಏನೆಂದರೆ, ಬ್ಯಾಂಕುಗಳಲ್ಲಿ ಅಧಿಕವಾಗುತ್ತಿರುವ ವ್ಯವಹಾರ ವಹಿವಾಟು ಇವುಗಳಿಗೆ ಹೋಲಿಸಿದರೆ, ಬ್ಯಾಂಕುಗಳಿಗೆ ಒದಗಿಸಿರುವ ಸಿಬ್ಬಂದಿ ಮತ್ತು ಅಧಿಕಾರ ವರ್ಗದ ಸಂಖ್ಯೆ ಅತಿ ಕಡಿಮೆ. ಇದರಿಂದಾಗಿ ವಿಧಿಸಿರುವ ಕಟ್ಟುಪಾಡುಗಳನ್ನು ಎಲ್ಲಾ ರೀತಿಯಲ್ಲಿಯೂ ಅನುಸರಿಸಲು ಸಾಧ್ಯವಾಗದಿರಬಹುದು ಎಂದಿದ್ದಾರೆ. ಹೀಗಾಗಿ ಹೆಚ್ಚು ಕಡಿಮೆ ಒಂದಲ್ಲ ಒಂದು ಕಡೆ ದಿನಕ್ಕೊಂದರಂತೆ ವಂಚನೆ ಪ್ರಕರಣಗಳು ನಡೆಯುವ ಸಂಭವವಿದೆ ಎಂದೂ ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಇಂತಹ ಪ್ರಕರಣಗಳು ಪದೇಪದೇ ಸಂಭವಿಸಿದಾಗ ಸಾರ್ವಜನಿಕರ ಮನಸ್ಸಿನಲ್ಲಿ ಬ್ಯಾಂಕಿಂಗ್ ಉದ್ಯಮದ ಮೇಲೆಯೇ ಅಪನಂಬಿಕೆ ಬರುವಂತಹ ಸಂದರ್ಭವೂ ಒದಗಬಹುದು ಎಂದಿದ್ದಾರೆ. ಇಂತಹ ವಾದವನ್ನು ಅಷ್ಟು ಸಲೀಸಾಗಿ ಅಲ್ಲಗಳೆಯಲಾಗುವುದಿಲ್ಲ. ಏಕೆಂದರೆ ಈಚಿನ ದಿನಗಳಲ್ಲಿ ಬ್ಯಾಂಕಿಂಗ್ ಉದ್ಯಮದ ವ್ಯವಹಾರ ವಹಿವಾಟುಗಳು ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತಿರುವುದು ಕಂಡುಬರುತ್ತಿದೆ. ಅದೂ ಅಲ್ಲದೆ ಬ್ಯಾಂಕ್ ರಾಷ್ಟ್ರೀಕರಣವಾದ ಮೇಲಂತೂ ಅದು ಕೇವಲ "ಸೀಮಿತ ವರ್ಗ ಬ್ಯಾಂಕು" ಆಗಿರದೆ "ಬಹುಜನರ

---

* ಬ್ಯಾಂಕುಗಳಲ್ಲಿ ಈಗ ವಿಧಿಸಿರುವ ನೀತಿ-ನಿಯಮಗಳು, ಕಟ್ಟುಪಾಡುಗಳು ಸಾಕಷ್ಟು ಇವೆ ಎಂದೆನಿಸುತ್ತದೆ.

ಬ್ಯಾಂಕಾಗಿದೆ. ಅದು ಠೇವಣಿ ಸಂಗ್ರಹಣೆಯಲ್ಲಿರಬಹುದು, ಮುಂಗಡ ಸಾಲ ನೀಡುವಿಕೆಯಲ್ಲಿರಬಹುದು.ಅಥವಾ ಇತರೆ ವ್ಯವಹಾರಗಳಲ್ಲಿರಬಹುದು. ಎಲ್ಲಕ್ಕಿಂತ ಮಿಗಿಲಾಗಿ ಬ್ಯಾಂಕ್ ನೀಡುವ ವೈವಿಧ್ಯಮಯ ಸೇವೆಯ ಪ್ರಮಾಣವಂತೂ ವಿಪರೀತವಾಗಿ ಬೆಳೆದುಬಂದಿರುವುದು ಕಂಡುಬರುತ್ತಿದೆ. ಒಟ್ಟಿನಲ್ಲಿ ಬ್ಯಾಂಕಿನ ದೃಷ್ಟಿಕೋನ ಲಾಭಗಳಿಕೆ ಮತ್ತು ಸಾರ್ವಜನಿಕ ಸೇವೆ ಎರಡೂ ಆಗಿವೆ. ಬ್ಯಾಂಕಿನ ವ್ಯವಹಾರ, ವಹಿವಾಟುಗಳು ಹಿಂದಿನ ಕಾಲದಲ್ಲಿದ್ದಂತೆ ಇಲ್ಲ. ಅವು ವಿವಿಧ ರೀತಿಯವಾಗಿವೆ. ಸರ್ಕಾರಗಳು ನೀಡುತ್ತಿದ್ದ ಕೆಲವು ಸೇವೆ ಸೌಕರ್ಯಗಳನ್ನು ಈಗ ಬ್ಯಾಂಕುಗಳೇ ಮಾಡಬೇಕಾಗಿ ಬಂದಿದೆ. ಉದಾಹರಣೆಗೆ, ನಿವೃತ್ತಿದಾರರ ಪಿಂಚಣಿ ಪಾವತಿ, ವಿದ್ಯುಚ್ಛಕ್ತಿ ಹಣ ಪಾವತಿ, ನೀರಿನ ಹಣಪಾವತಿ, ಕರಪಾವತಿ ಇತ್ಯಾದಿ. ಹೀಗೆ ಕೆಲಸದ ಭಾರ ಬಹಳ ಹೆಚ್ಚಾಗಿದೆ. ಇಂತಹ ಬೆಳೆಯುತ್ತಿರುವ ವ್ಯವಹಾರಗಳನ್ನು ಗಮನಿಸಿದರೆ ಅದಕ್ಕೆ ನೀಡಿರುವ ಸಿಬ್ಬಂದಿ ವರ್ಗದ ಸಂಖ್ಯೆ ತೀರಾ ಕಡಿಮೆ ಎನಿಸಬಹುದು. ಶಾಖೆಗಳಲ್ಲಿ ಖಾತೆಗಳ ಸಂಖ್ಯೆ ಹೆಚ್ಚಿದಂತೆಲ್ಲಾ ಒಬ್ಬ ಸಿಬ್ಬಂದಿಯು ಪಾಲಿಸಬೇಕಾದ ನಿಯಮಗಳು ಪೂರ್ಣವಾಗಿ ಪಾಲಿಸಲು ಸಾಧ್ಯವಾಗದೇ ಇರಬಹುದು. ಇಂತಹ ಪರಿಸ್ಥಿತಿಯು ಮುಂದುವರಿದುಕೊಂಡು ಹೋದಂತೆ ನೀತಿ ನಿಯಮಗಳ ಉಲ್ಲಂಘನೆಯೂ ಹೆಚ್ಚಾಗಿ ತಪ್ಪುಗಳಿಗೆ ಅವಕಾಶವಾಗಬಹುದು. ಇದರಿಂದಾಗಿ ಕಾಲಕ್ರಮೇಣ ಲೆಕ್ಕಪತ್ರಗಳು ತಾಳೆ ಆಗುವ ಕೆಲಸ ಸ್ಥಗಿತವಾಗಿ ಮುಂದೊಂದು ದಿನ ಅದೇ ಆಂತರಿಕ ಸಿಬ್ಬಂದಿಯಿಂದಲೇ ವಂಚನೆ ಎಸಗುವುದಕ್ಕೆ ಅನುಕೂಲವಾಗಬಹುದು.

ವಂಚನೆ ಏಕೆ ಮಾಡುತ್ತಾರೆ ?

ವಂಚನೆ ಪ್ರಕರಣಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದಕ್ಕೆ ಅನೇಕ ಕಾರಣಗಳು ಕಂಡುಬರುತ್ತವೆ. ಹೆಚ್ಚಿನ ದುಶ್ಚಟಗಳಿಗೆ ಬಲಿಯಾಗಿ ಆ ವ್ಯೂಹದಿಂದ ಹೊರಬರಲಾರದೆ, ತನ್ನ ಸ್ವಂತ ದುಡಿಮೆಯಿಂದ ಬರುವ ಹಣವೂ ಸಾಲದೆ, ಬೇರಾವ ದಾರಿಯೂ ಕಾಣದೆ, ಇಂಥ ವಂಚನೆ ಕಾರ್ಯಕ್ಕಿಳಿದಿರುವ ಉದಾಹರಣೆಗಳಿವೆ.

ಇನ್ನು ಕೆಲವು ಪ್ರಸಂಗಗಳಲ್ಲಿ ಒಬ್ಬ ವ್ಯಕ್ತಿಯು ಶ್ರೀಮಂತನಾದಾಗ್ಯೂ ಒಮ್ಮೊಮ್ಮೆ ದುರ್ಬಲ ಮನಸ್ಸುಳ್ಳವನಾಗಿದ್ದು ಇಂತಹ ವಂಚನೆ ಕಾರ್ಯಕ್ಕಿಳಿಯಬಹುದು. ಮತ್ತೆ ಕೆಲವು ಪ್ರಸಂಗಗಳಲ್ಲಿ ಒಬ್ಬ ವ್ಯಕ್ತಿಯು ತನಗೆ ಸಾಕಷ್ಟು ಆದಾಯವಿದ್ದಾಗ್ಯೂ ಅತಿ ಹೆಚ್ಚಿನ ಆಸೆಯಿಂದಾಗಿ ಒಮ್ಮಿಂದೊಮ್ಮೆಲೇ ಕುಬೇರನಾಗುವ ಕನಸುಗಳನ್ನು ಕಂಡು ಇಂತಹ ಕಾರ್ಯಗಳಲ್ಲಿ ತೊಡಗಿರುತ್ತಾನೆ. ಆದರೆ ಆಶ್ಚರ್ಯಕರ ಸಂಗತಿ ಏನೆಂದರೆ ತಾವು ಈ ತೆರನಾದ ದುಷ್ಕೃತ್ಯಗಳಿಗೆ ಕೈಹಾಕಿದರೆ ಮುಂದೊಂದು ದಿನ ತಮ್ಮ ದುಷ್ಕೃತ್ಯ ಬೆಳಕಿಗೆ ಬಂದೇ ಬರುತ್ತದೆ, ತಾವು ಶಿಕ್ಷೆಗೊಳಗಾಗುತ್ತೇವೆ ಎಂಬುದರ ಬಗ್ಗೆ ಕಿಂಚಿತ್ತೂ ಪರಿವೆ ಇಲ್ಲದಿರುವುದು. ಕೆಲವು ವ್ಯಕ್ತಿಗಳಿಗೆ ಇಂತಹ ಕಾರ್ಯವೆಸಗಿದ ಬಳಿಕ ಜ್ಞಾನೋದಯವುಂಟಾದರೂ ಸಹ ಆ ವೇಳೆಗೆ ಕಾಲ ಮಿಂಚಿ ಹೋಗಿರುವುದರಿಂದ ಮತ್ತೆ ಭಂಡ ಧೈರ್ಯದಿಂದ ಆ ದಾರಿಯಲ್ಲೇ ಮುನ್ನುಗ್ಗಿ ಸಾಧ್ಯವಾದಷ್ಟೂ ದುರ್ಲಾಭ ಪಡೆಯುವ ಯೋಚನೆ ಮಾಡಿರುತ್ತಾರೆ.

ವಂಚನೆ ಯಾರು ಹೇಗೆ ಮಾಡುತ್ತಾರೆ

ಬ್ಯಾಂಕಿಗೆ ವಂಚನೆ ಯಾರಿಂದ ಆಗುತ್ತದೆ ಎಂಬ ವಿಷಯವನ್ನು ಮೂರು ವಿಭಾಗಗಳಲ್ಲಿ ತಿಳಿಸಬಹುದು :

(1) ಬ್ಯಾಂಕಿಗೆ ಸಂಬಂಧಪಡದ ಹೊರ ವ್ಯಕ್ತಿಗಳಿಂದ — ಬ್ಯಾಂಕಿನ ಸಿಬ್ಬಂದಿಯ ಸಹಾಯವಿಲ್ಲದೆ.

(2) ಬ್ಯಾಂಕಿಗೆ ಸಂಬಂಧಪಡದ ಹೊರ ವ್ಯಕ್ತಿಗಳಿಂದ– ಬ್ಯಾಂಕಿನ ಸಿಬ್ಬಂದಿ ಸಹಾಯದಿಂದ ; ಅಂದರೆ, ಇಂತಹ ಪ್ರಕರಣಗಳಿಗೆ ಬ್ಯಾಂಕಿನ ಸಿಬ್ಬಂದಿ ಅಧಿಕಾರಿಗಳು ಶಾಮೀಲಾಗಿದ್ದು ಅವರೂ ಸಹ ಇದರಲ್ಲಿ ಲಾಭ ಪಡೆಯುತ್ತಾರೆ;

(3) ಬ್ಯಾಂಕಿಗೆ ಸಂಬಂಧಪಟ್ಟ ಸಿಬ್ಬಂದಿ/ಅಧಿಕಾರಿ ವರ್ಗದವರಿಂದಲೇ ನಡೆಯುವಂತಹದು.

ಈ ಮೇಲ್ಕಂಡ ಅಂಶಗಳನ್ನು ಕೆಲವು ಉದಾಹರಣೆಗಳೊಡನೆ ಸಂಕ್ಷಿಪ್ತವಾಗಿ ತಿಳಿಸಬಹುದು :

ಒಬ್ಬ ವ್ಯಕ್ತಿ ಬ್ಯಾಂಕಿನ ಶಾಖೆಯಲ್ಲಿ ಗುಪ್ತನಾಮದಿಂದ ಒಂದು ಖಾತೆಯನ್ನು ತೆರೆದು, ಕೆಲವು ದಿನಗಳವರೆಗೆ ಆ ಖಾತೆಯ ಮೂಲಕ ಸಣ್ಣ ಪ್ರಮಾಣದ ವ್ಯವಹಾರ ನಡೆಸುತ್ತಾರೆ. ಮತ್ತು ಬ್ಯಾಂಕಿನ ವ್ಯವಸ್ಥಾಪಕರು ಸಿಬ್ಬಂದಿಯ ವಿಶ್ವಾಸ ಗಳಿಸುತ್ತಾರೆ. ನಂತರದಲ್ಲಿ ಎಲ್ಲಿಂದಲೋ ಕದ್ದು ತಂದಿರುವ ಡ್ರಾಫ್ಟನ್ನೋ, ಚೆಕ್ಕುಗಳನ್ನೋ ತಮ್ಮ ಖಾತೆಗೆ ಜಮಾ ಮಾಡಿ ಮರುಕ್ಷಣವೇ ಹಣ ಹಿಂದೆ ಪಡೆಯುತ್ತಾರೆ. ಕೆಲವು ವೇಳೆ ಬ್ಯಾಂಕಿನ ಇತರೆ ಶಾಖೆಗಳಿಗೆ ಸಂಬಂಧಿಸಿದ ಡ್ರಾಫ್ಟ್‌ಗಳನ್ನು ಹಣ ವರ್ಗಾವಣೆ ಆದೇಶಗಳನ್ನು ಕದ್ದು ಅದರಲ್ಲಿ ತಮಗೆ ಸೂಕ್ತವಾಗುವಂತೆ ಹಣ ಭರ್ತಿ ಮಾಡಿಕೊಂಡು, ಕಳ್ಳ ರುಜುಗಳನ್ನು ಹಾಕಿ, ಸುಳ್ಳು ಹೆಸರಿನಲ್ಲಿ ಖಾತೆಗಳನ್ನು ಪ್ರಾರಂಭಿಸಿ ತನ್ಮೂಲಕ ಹಣ ತೆಗೆದುಕೊಳ್ಳುವುದು ಇನ್ನೊಂದು ರೀತಿಯ ವಂಚನೆಯಾಗಿರುತ್ತದೆ. ಕೆಲವು ವೇಳೆ ಟಪಾಲಿನ ಮೂಲಕ ಬರುವ ಚೆಕ್ಕುಗಳನ್ನು, ಡ್ರಾಫ್ಟ್‌ಗಳನ್ನು ಕದ್ದು ಅದರಲ್ಲಿ ನಮೂದಿಸಿರುವ ಹೆಸರು, ಹಣದ ಮೊತ್ತ ಇತ್ಯಾದಿಗಳನ್ನು ತಿದ್ದಿ ತಮ್ಮ ಖಾತೆಗೆ ಜಮಾ ಮಾಡಿಕೊಳ್ಳುತ್ತಾರೆ. ಹೀಗೆ ನಾನಾ ರೀತಿಯ ವಂಚನೆ ಪ್ರಕರಣಗಳು ಬೆಳಕಿಗೆ ಬರುತ್ತಲೇ ಇರುತ್ತವೆ. ಒಂದೊಂದು ಪ್ರಕರಣವೂ ವಿಭಿನ್ನರೀತಿಯದಾಗಿದ್ದು ಪ್ರತಿಯೊಂದನ್ನೂ ಬಿಡಿಸಿ ಹೇಳುವುದು ಇಲ್ಲಿ ಅನಾವಶ್ಯಕವೆನಿಸುತ್ತದೆ.

ಆದರೆ, ಕೆಲವು ನಿರ್ದಿಷ್ಟ ಪ್ರಸಂಗಗಳನ್ನು ಈ ಮುಂದಿನಂತೆ ಸಂಕ್ಷಿಪ್ತವಾಗಿ ತಿಳಿಸಬಹುದು :

ಅದೊಂದು ಗ್ರಾಮೀಣ ಪ್ರದೇಶದಲ್ಲಿನ ಒಂದು ಸಣ್ಣ ಶಾಖೆ. ಅಲ್ಲಿನ ವ್ಯವಹಾರ ವಹಿವಾಟುಗಳು ಸಣ್ಣ ಪ್ರಮಾಣದವೇ ಆಗಿರುತ್ತವಷ್ಟೆ. ಅಲ್ಲಿಗೆ ಒಬ್ಬಾತ ಒಂದು ದಿನ ಭೇಟಿಕೊಟ್ಟು, ತಾನೊಬ್ಬ ದೊಡ್ಡ ರಫ್ತು ವ್ಯಾಪಾರಿಯೆಂದೂ, ಆ ಊರಿನಲ್ಲಿ ತನ್ನ ವ್ಯವಹಾರ

ವನ್ನು ಹೊಸದಾಗಿ ಪ್ರಾರಂಭಿಸಿರುವುದಾಗಿಯೂ ತಿಳಿಸಿ ಒಂದು ಖಾತೆಯನ್ನು ಪ್ರಾರಂಭಿಸಿದ. ಹಾಗೆ ಖಾತೆ ತೆರೆಯುವಾಗ ಕಾಲಕ್ರಮೇಣ ತನ್ನ ವ್ಯವಹಾರದಲ್ಲಿನ ಲಾಭಾಂಶದಿಂದ ಆ ಶಾಖೆಗೆ ಹೆಚ್ಚಿನ ಮೊತ್ತದ ಠೇವಣಿ ನೀಡುವುದಾಗಿ ತಿಳಿಸಿದ. ಹಾಗೆ ಹೇಳುತ್ತಾ ಬ್ಯಾಂಕಿನ ವ್ಯವಸ್ಥಾಪಕರ, ಇದ್ದ ಒಂದೆರಡು ಸಿಬ್ಬಂದಿ ವರ್ಗದವರ ವಿಶ್ವಾಸ ಗಳಿಸಿದ. ಖಾತೆ ಪ್ರಾರಂಭಮಾಡಿದ ಕೆಲವೇ ದಿನಗಳಲ್ಲಿ ದೊಡ್ಡ ಮೊತ್ತದ ಚೆಕ್ಕೊಂದನ್ನು ತಂದು ತನ್ನ ಖಾತೆಗೆ ಜಮಾ ಮಾಡಲು ನೀಡಿದ. ಆ ಚೆಕ್ಕು ದೂರದ ಊರಿನಲ್ಲಿದ್ದ ಬ್ಯಾಂಕೊಂದಕ್ಕೆ ಸಂಬಂಧಪಟ್ಟಿದ್ದಾದ್ದರಿಂದ ಅಲ್ಲಿಂದ ಹಣ ಪಾವತಿಯಾಗಿ ಬರುವುದು ತಡವಾಗುವುದೆಂದು ತಾನೇ ಆ ಚೆಕ್ಕನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಕೊಟ್ಟು, ಅಲ್ಲಿಂದ ಹಣ ಪಾವತಿಯಾದ ರಸೀತಿಯನ್ನು ತಂದುಕೊಡುವುದಾಗಿ ಹೇಳಿ ವ್ಯವಸ್ಥಾಪಕರನ್ನು ನಂಬಿಸಿದ. ವ್ಯವಸ್ಥಾಪಕರಿಗೆ ಆತನು ಹೂಡಿದ್ದ ವಂಚನೆಯ ಜಾಲದ ಸುಳಿವು ಸಿಗದಾಯಿತು. ಅಲ್ಲದೆ ಮುಂದಿನ ಕೆಲವೇ ದಿನಗಳಲ್ಲಿ ಶಾಖೆಗೆ ಅವನಿಂದ ಹೆಚ್ಚಿನ ಮೊತ್ತದ ಠೇವಣಿ ಬರುವ ನಿರೀಕ್ಷೆ ಇಟ್ಟುಕೊಂಡಿದ್ದರಿಂದ ಅವರು ಆ ಖಾತೆದಾರನ ಮಾತನ್ನು ನಂಬಿ ತಮ್ಮ ಶಾಖೆಯ ಅಗತ್ಯವಾದ ಫಾರಂಗಳನ್ನು ಭರ್ತಿಮಾಡಿ ಆ ಖಾತೆದಾರನ ಮೂಲಕವೇ ಚೆಕ್ಕನ್ನು ಉದ್ದೇಶಿತ ಬ್ಯಾಂಕಿಗೆ ಕಳುಹಿಸಿದರು. ಹಾಗೆ ಕಳುಹಿಸಿದ ಎರಡನೆಯ ದಿನವೇ ಖಾತೆದಾರನು ತಾನೇ ತೆಗೆದುಕೊಂಡು ಹೋಗಿದ್ದ ಚೆಕ್ಕಿನ ಪಾವತಿ ಆದೇಶವನ್ನು ತಂದು ಈ ಶಾಖೆಗೆ ಕೊಟ್ಟು ಹಣವನ್ನು ತನ್ನ ಖಾತೆಗೆ ಜಮಾ ಮಾಡಿಸಿ ಆ ದಿನವೇ ಕನಿಷ್ಠ ಮೊತ್ತವನ್ನು ಖಾತೆಯಲ್ಲಿ ಉಳಿಸಿ ಉಳಿದ ಹಣವನ್ನು ಹಿಂಪಡೆದ. ಇದೇ ರೀತಿ ನಾಲ್ಕಾರು ಬಾರಿ ಹೆಚ್ಚಿನ ಮೊತ್ತದ ಚೆಕ್ಕುಗಳ ಪಾವತಿ ಆದೇಶವನ್ನು ತಾನೇ ತಂದುಕೊಟ್ಟು ಖಾತೆಗೆ ಜಮಾ ಮಾಡಿಸಿ ಹಣವನ್ನು ಹಿಂಪಡೆದ. ಈ ಮಧ್ಯೆ ಒಂದೆರಡು ಬಾರಿ ಸಣ್ಣ ಮೊತ್ತದ ಠೇವಣಿಯನ್ನು ಶಾಖೆಯಲ್ಲಿ ಇಟ್ಟ. ಇಂತಹ ಚೆಕ್ಕುಗಳನ್ನು ಕೊಡುವುದು ಮತ್ತು ಅದರ ಪಾವತಿ ಆದೇಶಗಳನ್ನು ತಾನೇ ಖುದ್ದಾಗಿ ತಂದು ನೀಡಿ ಖಾತೆಯ ಮೂಲಕ ಹಣ ಡ್ರಾ ಮಾಡುವ ವ್ಯವಹಾರ ಅನೇಕ ಲಕ್ಷ ರೂ.ಗಳವರೆಗೆ ನಡೆಯಿತು.

ನಂತರ ಆ ವ್ಯಕ್ತಿ ಬ್ಯಾಂಕಿನ ಕಡೆ ಬರಲೇ ಇಲ್ಲ. ಬ್ಯಾಂಕಿನ ವ್ಯವಸ್ಥಾಪಕರು ಅನುಮಾನದಿಂದ ಆ ವ್ಯಕ್ತಿಯು ಖಾತೆ ತೆರೆಯುವಾಗ ನೀಡಿದ್ದ ವಿಳಾಸವನ್ನು ಹುಡುಕಿಕೊಂಡು ಹೋದಾಗ ಆ ವಿಳಾಸವೇ ಸರಿಯಾದದ್ದಲ್ಲವೆಂದೂ, ಆ ಸುತ್ತಮುತ್ತಲಿನ ಪ್ರದೇಶದಲ್ಲಿ ಅಂತಹ ಹೆಸರಿನ ವ್ಯಕ್ತಿಯಾಗಲಿ ಅಂತಹ ವ್ಯವಹಾರವಾಗಲಿ ಇಲ್ಲವೆಂದೂ ತಿಳಿದುಬಂತು. ಮುಂದೆ ಕೆಲವೇ ದಿನಗಳಲ್ಲಿ ಅಂತಹ ವಂಚನೆಯ ಪ್ರಕರಣಗಳು ಸುತ್ತಮುತ್ತಲ ಇತರ ಬ್ಯಾಂಕುಗಳ ಶಾಖೆಗಳಲ್ಲಿಯೂ ನಡೆದಿರುವುದಾಗಿ ತಿಳಿದುಬಂತು. ಆ ವ್ಯಕ್ತಿಯು ಸುಳ್ಳು ಹೆಸರಿನಲ್ಲಿ ಖಾತೆಯನ್ನು ಪ್ರಾರಂಭಿಸಿ ಯಾವುದೋ ಕದ್ದು ತಂದ ಚೆಕ್ಕುಗಳನ್ನು ಬ್ಯಾಂಕಿಗೆ ನೀಡಿ ಅದೇ ರೀತಿ ಕದ್ದು ತಂದ ಪಾವತಿ ಆದೇಶಗಳನ್ನು ಭರ್ತಿಮಾಡಿ ಅವುಗಳಿಗೆ ಕಳ್ಳರುಜುಗಳನ್ನು ಹಾಕಿ ತನ್ಮೂಲಕ ಹಣವನ್ನು ಅಪಹರಿಸುತ್ತಿದ್ದ. ಇದಕ್ಕೆ ಆ ಇನ್ನೊಂದು ಬ್ಯಾಂಕಿನ ಸಿಬ್ಬಂದಿಯ ಸಹಾಯವನ್ನು ಪಡೆದುಕೊಂಡಿರಬಹುದು. ಬ್ಯಾಂಕಿನ ವ್ಯವಸ್ಥಾಪಕರ ಮತ್ತು ಸಿಬ್ಬಂದಿಗಳ ಅಜಾಗರೂಕತೆಯಿಂದಲೂ ಮತ್ತು ಬ್ಯಾಂಕಿನ ನೀತಿ ನಿಯಮಗಳನ್ನು ನಿಷ್ಕೃಷ್ಟವಾಗಿ ಪಾಲಿಸದೆ ಇದ್ದುದರಿಂದಲೂ ವಂಚನೆಗೊಳಗಾಗುವ ಪ್ರಸಂಗ ಒದಗಿಬಂತೆಂದೂ ತಿಳಿಯಿತು. ಒಂದು ಹೊಸ ಖಾತೆಯನ್ನು ತೆರೆಯುವಾಗ ಅದಕ್ಕೆ ಅನುಸರಿಸಬೇಕಾದ ನಿಯಮಗಳನ್ನು ಪಾಲಿಸಿರಲಿಲ್ಲ. ಮತ್ತು ಹೆಚ್ಚಿನ ಮೊತ್ತದ ಚೆಕ್ಕುಗಳನ್ನು ಬೇರೆ ಕಡೆಗೆ ಕಳುಹಿಸುವಾಗಲೂ ವಿಧಿಸಿದ್ದ ನಿಯಮಗಳನ್ನು ಪಾಲಿಸಿರಲಿಲ್ಲ. ಇಂಥ ನಿಯಮ ಉಲ್ಲಂಘನೆಗಾಗಿ ಬ್ಯಾಂಕಿನ ಅಧಿಕಾರಿಯು ಶಿಸ್ತು ನಡಾವಳಿ ಕ್ರಮ ಎದುರಿಸಬೇಕಾಗಿ ಬಂತು.

ಮೇಲಿನ ಉದಾಹರಣೆಯು ಹೊರಗಿನ ವ್ಯಕ್ತಿಯಿಂದ ಆದ ವಂಚನೆಯ ಪ್ರಕರಣವಾದ್ದರೆ, ಕೆಳಕಂಡ ಇನ್ನೊಂದು ಉದಾಹರಣೆ ಬ್ಯಾಂಕಿನ ಸಿಬ್ಬಂದಿಯಿಂದಲೇ ನಡೆದ ಪ್ರಕರಣ.

ಅದೊಂದು ಸಣ್ಣ ಶಾಖೆ. ಅದಕ್ಕೆ ಒಬ್ಬ ವ್ಯವಸ್ಥಾಪಕ, ಒಬ್ಬ ನಗದಿಕಾರ ಗುಮಾಸ್ತೆ ಅಷ್ಟೆ. ಹಾಗಾಗಿ ಸಾಮಾನ್ಯವಾಗಿ ಶಾಖೆಯ ಎಲ್ಲ ಕೆಲಸಗಳನ್ನು, ಅಂದರೆ ನಗದಿಗಾರನ ಗುಮಾಸ್ತಿಕೆ ಕೆಲಸ, ರವಾನೆ ಕೆಲಸ ಆ ಸಿಬ್ಬಂದಿಯೇ ಮಾಡಬೇಕಾಗಿತ್ತು. ಶಾಖೆಯ ವ್ಯವಸ್ಥಾಪಕರೂ ಈ ನಗದಿದಾರನ ಮೇಲೆ ವಿಶ್ವಾಸ ವಿಟ್ಟಿದ್ದರು. ಆ ವಿಶ್ವಾಸವನ್ನು ಈತ ಹೆಚ್ಚು ದಿನ ಉಳಿಸಿಕೊಳ್ಳಲಾರದೇ ಹೋದ. ಖಾತೆದಾರರು ತಂದು ಜಮಾ ಮಾಡುತ್ತಿದ್ದ ಹಣವನ್ನು ತೆಗೆದುಕೊಂಡು ವ್ಯವಸ್ಥಾಪಕರಿಗೆ ತಿಳಿಯದಂತೆ ರಸೀತಿಗಳನ್ನು ತಾನೇ ನೀಡತೊಡಗಿದ. ಅವರ ಪಾಸ್ ಪುಸ್ತಕಗಳಲ್ಲಿ ಹಣ ಜಮಾ ದಾಖಲೆಗಳನ್ನು ಮಾಡಿ ತಾನೇ ವ್ಯವಸ್ಥಾಪಕರ ರುಜುವಿನಂತೆ ರುಜು ಹಾಕತೊಡಗಿದ. ಇಂಥ ಹಣವನ್ನು ಸ್ವಂತಕ್ಕಾಗಿ ದುರುಪಯೋಗಪಡಿಸಿಕೊಳ್ಳುತ್ತಿದ್ದ. ಮುಂದೊಂದು ದಿನ ಖಾತೆದಾರರು ಹಣ ಹಿಂಪಡೆಯಲು ಬಂದಾಗ ತಾನೇ ಅವರ ಖಾತೆಗಳಲ್ಲಿ ಜಮದ ಸುಳ್ಳು ದಾಖಲೆ ಮಾಡಿ ಶಾಖೆಯ ವ್ಯವಸ್ಥಾಪಕರ ಕಳ್ಳರುಜುವನ್ನು ಹಾಕಿ ಪಾವತಿ ಆದೇಶವಾದ ನಂತರ ಹಣ ಪಾವತಿ ಮಾಡುತ್ತಿದ್ದ. ಇದೇ ರೀತಿ ಒಂದೆರಡು ವರ್ಷಗಳವರೆಗೆ ವಿವಿಧ ದಿನಗಳಲ್ಲಿ, ವಿವಿಧ ಖಾತೆಗಳಲ್ಲಿ ಮಾಡಿದ. ಇದಕ್ಕಾಗಿ ಒಂದೇ ಖಾತೆಗೆ 2–3 ಲೆಡ್ಜರ್ ಹಾಳೆಗಳನ್ನು ಉಪಯೋಗಿಸಿದ.

ಶಾಖೆಗೆ ತನಿಖಾಧಿಕಾರಿಗಳು ಬಂದಾಗ ಕೂಡ ಅವರಿಗೆ ನಂಬಿಕೆ ಹುಟ್ಟಿಸಿ ಎಲ್ಲ ಖಾತೆಗಳಿಗೂ ತಾಳೆಯಾದಂತೆ ಪುಸ್ತಕದಲ್ಲಿ ನಮೂದಿಸಿ ವ್ಯವಸ್ಥಾಪಕರ ರುಜುಹಾಕಿಸಿ ನೀಡಿದ. ಅವರೂ ಸಹ ಅವುಗಳೆಲ್ಲ ಸರಿಯಾಗಿದೆಯೆಂದು ಸರ್ಟಿಫಿಕೇಟ್ ನೀಡಿದ್ದರು. ಹೀಗೆ ಲಕ್ಷಾಂತರ ರೂ.ಗಳವರೆಗೆ ವಂಚನೆ ನಡೆದಿತ್ತು. ಮುಂದೆ ಶಾಖೆಯ ವ್ಯವಸ್ಥಾಪಕರ ಬದಲಾವಣೆ ಆದಾಗ ಈ ಪ್ರಕರಣ ಹೊರಬಿತ್ತು. ಮುಖ್ಯವಾಗಿ ಆತನು ಮಾಡಿದ ವಂಚನೆಯ ಜೊತೆಗೆ ಈ ಪ್ರಕರಣ

ಗಳಿಗೆ ಹಿಂದಿದ್ದ ವ್ಯವಸ್ಥಾಪಕರ ಮತ್ತು ತನಿಖಾಧಿಕಾರಿಗಳ ಅಜಾಗರೂಕತೆ ಮತ್ತು ಉಪೇಕ್ಷೆ ಕಾರಣವಾಗಿತ್ತೆನ್ನಬಹುದು. ಈ ಪ್ರಕರಣಗಳಲ್ಲಿ ಖಾತೆದಾರರಿಗೆ ಯಾವ ವಿಧವಾದ ಹಣದ ಹಾನಿಯೂ ಆಗಿರದಿದ್ದುದರಿಂದ ಯಾರಿಂದಲೂ ಆ ಬಗ್ಗೆ ದೂರು ಬಂದಿರಲಿಲ್ಲ. ಹೀಗಾಗಿ ಈ ಪ್ರಕರಣಗಳು ಬೇಗನೇ ಬೆಳಕಿಗೆ ಬರಲು ಸಾಧ್ಯವಾಗಲಿಲ್ಲ. ನಂತರದಲ್ಲಿ ಆ ನಗದಿಗಾರನ ವಿರುದ್ಧ, ಶಿಸ್ತು ನಡಾವಳಿಕೆ ಕ್ರಮ ನಡೆದಿದ್ದು ಬೇರೆ ವಿಷಯ. ಇಲ್ಲಿ ಅದನ್ನು ತಿಳಿಸುವುದು ಅಪ್ರಸ್ತುತ.

ಅಂಕಿ ಅಂಶಗಳು

ವಂಚನೆ ಪ್ರಕರಣಗಳು ಯಾವ ಯಾವ ವಿಭಾಗಗಳಲ್ಲಿ ಎಷ್ಟೆಷ್ಟು ನಡೆಯಬಹುದು ಎಂಬ ಅಂಶವನ್ನು ಈ ಕೆಳಗೆ ಕೊಡಲಾಗಿದೆ :

	ಪ್ರಕರಣಗಳು	ಶೇಕಡಾವಾರು
1	ಉಳಿತಾಯ ಖಾತೆ ಮತ್ತಿತರ ಠೇವಣಿ ಖಾತೆಗಳಲ್ಲಿ	40
2	ಮುಂಗಡಗಳು, ಸಾಲಗಳು ಇತ್ಯಾದಿ	12
3	ಕ್ಯಾಷ್ ವಿಭಾಗದಲ್ಲಿ	12
4	ಬ್ರಾಂಚ್ ಕ್ಲಿಯರಿಂಗ್ ವಿಭಾಗದಲ್ಲಿ	8
5	ಡ್ರಾಫ್ಟ್, ಮೆಯಿಲ್‌ಟ್ರಾನ್ಸ್‌ಫರ್ಸ್ ಮತ್ತಿತರೆ	28
		100

ಮೇಲೆ ನಮೂದಿಸಿರುವ ವಿವಿಧ ವಿಭಾಗಗಳಲ್ಲಿ ವಂಚನೆ ಪ್ರಕರಣಗಳಿಗೆ ಕೆಲವು ಕಾರಣಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ನೀಡಲಾಗಿದೆ :

ಹೊಸ ಖಾತೆಗಳನ್ನು ಪ್ರಾರಂಭಿಸುವಾಗ ಸಮರ್ಪಕವಾದ ರೀತಿಯಲ್ಲಿ ಬ್ಯಾಂಕಿನ ನಿಯಮಾನುಸಾರವಾಗಿ ಪರಿಚಯ ತೆಗೆದುಕೊಳ್ಳದಿರುವುದು,

'ಸ್ಥಗಿತ'ವಾಗಿದ್ದ, ಚಾಲ್ತಿಯಲ್ಲಿ ಇರದ ಖಾತೆಗಳನ್ನು ಪುನರುಜ್ಜೀವನಗೊಳಿಸಿ ವ್ಯವಹಾರ ಮುಂದುವರಿಸಿಕೊಂಡು ಹೋಗಲು ಅವಕಾಶ ನೀಡುವಾಗ ಸರಿಯಾದ ನಿಯಮಗಳನ್ನು ಪಾಲಿಸದಿರುವುದು,

ನಕಲಿ ಪಾಸ್ ಪುಸ್ತಕವನ್ನು ನೀಡುವಾಗ ಸರಿಯಾದ ನಿಯಮವನ್ನು ಪಾಲಿಸದಿರುವುದು,

ಅನಕ್ಷರಸ್ಥರ ಖಾತೆಗಳ ವ್ಯವಹಾರಗಳ ಬಗ್ಗೆ ಎಚ್ಚರ ವಹಿಸದಿರುವುದು,

ಒಬ್ಬ ವ್ಯಕ್ತಿಯ ಖಾತೆಗೆ ಸಂಬಂಧಿಸಿದ ಚೆಕ್ಕು ಪುಸ್ತಕವನ್ನು ಮೂರನೆಯ ವ್ಯಕ್ತಿಗೆ ನೀಡುವಾಗ ನಿಯಮಗಳನ್ನು ಪಾಲಿಸದಿರುವುದು,

ಒಬ್ಬ ವ್ಯಕ್ತಿಯ ಮೇಲೆ ಮಿತಿಮೀರಿದ ಅಥವಾ ಅನಾವಶ್ಯಕವಾದ ವಿಶ್ವಾಸ ಇಟ್ಟು ಅಂಥವರಿಂದಲೇ ವಂಚನೆಗೊಳ್ಳುವುದು. ಹೊಸದಾಗಿ ಪ್ರಾರಂಭವಾದ ಖಾತೆಗಳಲ್ಲಿ ಇದ್ದಕ್ಕಿದ್ದಂತೆ ಅತಿ ಹೆಚ್ಚಿನ ಮೊತ್ತದ ವ್ಯವಹಾರ ಕಂಡುಬರದಲ್ಲಿ ಎಚ್ಚರಿಕೆ ವಹಿಸುವುದು,

ಖಾತೆಗಳು ದೀರ್ಘಾವಧಿಯ ವರೆಗೆ ತಾಳೆ ಆಗದಿರುವುದು,

ಜನತಾ ಡಿಪಾಸಿಟ್ ಖಾತೆಗೆ ಸಂಬಂಧಿಸಿದ ನಿಯಮಾವಳಿಗಳನ್ನು ಸರಿಯಾಗಿ ಪಾಲಿಸದಿರುವುದು, ಇತ್ಯಾದಿ,

ಕ್ಯಾಷ್ ವಿಭಾಗದಲ್ಲಿ; ಕ್ಯಾಷಿಯರ್‌ಗಳು ಅಜಾಗರೂಕತೆಯಿಂದಿರುವುದು, ಮತ್ತು ಸಂಬಂಧಿಸಿದ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸಿ ನಿಯಮಾವಳಿಗಳನ್ನು ಪಾಲಿಸದಿರುವುದು,

ಕ್ಯಾಷ್ ವಿಭಾಗಕ್ಕೆ ಹೊರಗಿನ ವ್ಯಕ್ತಿಗಳಿಗೆ ಬರಲು ಅವಕಾಶ ನೀಡುವುದು.

ಕ್ಯಾಷಿಯರ್ ಮತ್ತೆ ಅಧಿಕಾರಿಗಳು ತಮ್ಮ ತಮ್ಮ ಬೀಗದ ಕೈಗಳನ್ನು ಇಟ್ಟುಕೊಳ್ಳುವ ಮತ್ತು ಅದರ ಮೂಲಕ ವ್ಯವಹರಿಸುವ ವಿಷಯದಲ್ಲಿ ಅಜಾಗರೂಕತೆಯಿಂದ ಇರುವುದು, ತಕ್ಕ ನಿಯಮಗಳನ್ನು ಪಾಲಿಸದಿರುವುದು, ಇತ್ಯಾದಿ.

ಚೆಕ್‌ಗಳು, ಬ್ಯಾಂಕ್ ಡ್ರಾಫ್ಟ್, ಟಪಾಲು ವರ್ಗಾವಣೆ ಆದೇಶ ಇತ್ಯಾದಿ ಸೆಕ್ಯೂರಿಟಿ ಫಾರಂಗಳ ಬಗ್ಗೆ ನಿಯಮಗಳನ್ನು ಪಾಲಿಸದಿರುವುದು,

ಹೆಚ್ಚಿನ ಮೊತ್ತದ ಡ್ರಾಫ್ಟ್‌ಗಳಿಗೆ ಆದೇಶವಿಲ್ಲದೆ ಹಣ ಪಾವತಿ ಮಾಡುವ ಸಂದರ್ಭಗಳಲ್ಲಿ ಸರಿಯಾದ ಎಚ್ಚರಿಕೆ ವಹಿಸದಿರುವುದು,

ಪಾವತಿ ಆದೇಶಗಳು, ಡ್ರಾಫ್ಟ್‌ಗಳ ಹಣ ಪಾವತಿ ಮಾಡುವಾಗ ಅದರಲ್ಲಿರುವ ಸಹಿಗಳನ್ನು ಸರಿಯಾಗಿ ಪರಿಶೀಲಿಸದೆ ಇರುವುದು, ಇತ್ಯಾದಿ ಇತ್ಯಾದಿ.

ಸಾರ್ವಜನಿಕ ರಂಗದ ಬ್ಯಾಂಕುಗಳಲ್ಲಿ ವಂಚನೆ ಪ್ರಕರಣಗಳು, ದೊರಕಿದ ಅಂಕಿ ಅಂಶಗಳ ಪ್ರಕಾರ ಹೀಗಿವೆ :

(ವಿವರಕ್ಕೆ ಮುಂದಿನ ಪುಟ ನೋಡಿ)

ಇಂತಹ ಪ್ರಕರಣಗಳು 1991–92ರಲ್ಲಿ 1764 ಇದ್ದು ರೂ. 67.48 ಕೋಟಿಗಳಷ್ಟಾಗಿತ್ತೆಂದೂ, ಆದರೆ 1992-93ರಲ್ಲಿ 2217 ಪ್ರಕರಣಗಳಾಗಿದ್ದು ರೂ. 126.81 ಕೋಟಿಗಳಷ್ಟಾಗಿತ್ತೆಂದೂ ತಿಳಿಯಲಾಗಿದೆ. ಈ ಅಂಕಿ ಅಂಶಗಳಿಂದ ಇಂಥ ಪ್ರಕರಣಗಳ ಸಂಖ್ಯೆ ವರ್ಷ ವರ್ಷ ಅಧಿಕವಾಗುತ್ತಿರುವುದನ್ನು ಗಮನಿಸಬಹುದು.

ವಂಚನೆ ತಡೆಗಟ್ಟುವಲ್ಲಿ ಇತರ ಸಂಸ್ಥೆಗಳ ಪಾತ್ರ

ಸರ್ಕಾರ ಮತ್ತೆ ರಿಸರ್ವ್ ಬ್ಯಾಂಕ್ ವಂಚನೆ ಪ್ರಕರಣಗಳನ್ನು ತಡೆಗಟ್ಟಲು ಆಗಿಂದಾಗ್ಗೆ ಕೆಲವು ಭದ್ರ ಕ್ರಮಗಳನ್ನು ತೆಗೆದುಕೊಳ್ಳುತ್ತಲೇ ಬರುತ್ತಿದ್ದು, ಲೆಕ್ಕ ತಪಾಸಣೆಯ ನೀತಿ ನಿಯಮಗಳಲ್ಲಿ ಬದಲಾವಣೆ, ಇನ್ನಿತರ ವಿಭಾಗದಲ್ಲಿಯೂ ಬದಲಾವಣೆಗಳನ್ನು ತರುತ್ತಿದೆ. ಹೀಗೆ ಇಂತಹ ಪ್ರಕರಣಗಳನ್ನು ಪತ್ತೆಹಚ್ಚಲು ಮತ್ತೆ ಮುಂದಿನ ಕ್ರಮಗಳನ್ನು ಜರುಗಿಸಲು ಪೋಲೀಸ್ ಖಾತೆಯಲ್ಲದೆ ಇತರೆ ಸಂಸ್ಥೆಗಳೂ ಅನೇಕ ರೀತಿಯಲ್ಲಿ ಸಹಾಯಕ್ಕೆ ಬರುತ್ತಿವೆ.

ಬ್ಯಾಂಕಿನ ಹೆಸರು	1988ರಲ್ಲಿ		1989ರಲ್ಲಿ	
	ಸಂಖ್ಯೆ	ಮೊತ್ತ (ಲಕ್ಷ ರೂ. ಗಳಲ್ಲಿ)	ಸಂಖ್ಯೆ	ಮೊತ್ತ (ಲಕ್ಷ ರೂ. ಗಳಲ್ಲಿ)
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ	607	588.00	490	569.00
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು	42	12.50	34	10.44
ಅಲಹಾಬಾದ್ ಬ್ಯಾಂಕ್	72	35.44	39	103.00
ಆಂಧ್ರ ಬ್ಯಾಂಕ್	29	454.00	37	341.00
ಬ್ಯಾಂಕ್ ಆಫ್ ಬರೋಡ	77	63.94	91	82.68
ಬ್ಯಾಂಕ್ ಆಫ್ ಇಂಡಿಯ	135	208.00	114	165.00
ಕೆನರಾ ಬ್ಯಾಂಕ್		91.60	134	311.00
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ	63	107.00	63	285.00
ಇಂಡಿಯನ್ ಬ್ಯಾಂಕ್	67	32.09	67	34.58
ಇಂಡಿಯನ್ ಓವರ್‌ಸೀಸ್ ಬ್ಯಾಂಕ್	72	11.42	37	772.00
ಪಂಜಾಬ್ ನ್ಯಾಷನಲ್ ಬ್ಯಾಂಕ್	33	69.31	39	140.00
ಸಿಂಡಿಕೇಟ್ ಬ್ಯಾಂಕ್	102	130.00	9	173.00
ವಿಜಯ ಬ್ಯಾಂಕ್	36	24.25	47	280.00

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ 1991ರಲ್ಲಿ ವಂಚನೆ ಪ್ರಕರಣಗಳು ಮತ್ತು ಅವ್ಯವಹಾರಗಳು ಇವುಗಳ ಬಗ್ಗೆ ವಿಚಾರಣೆ ನಡೆಸಲು ಒಂದು ಉನ್ನತ ಸಮಿತಿಯನ್ನು ನೇಮಿಸಿತು. ಈ ಸಮಿತಿಯ ಮುಖ್ಯಸ್ಥರಾಗಿದ್ದ ಶ್ರೀ ಘೋಷ್ ಅವರು ಮಾಡಿದ ಶಿಫಾರಸ್ಸುಗಳ ಪೈಕಿ ಹಸ್ತಾಕ್ಷರ, ರುಜುಗಳನ್ನು, ಕೈಬರಹಗಳನ್ನು ಪರಿಶೀಲಿಸುವ ವಿಚಾರದಲ್ಲಿ ಕೂಡ ಪ್ರಶಿಕ್ಷಣವನ್ನು ನೀಡಬೇಕು ಎಂಬುದೂ ಒಂದಾಗಿತ್ತು. ಅಲ್ಲದೆ ಇನ್ಸ್ಟಿಟ್ಯೂಟ್ ಆಫ್ ಕ್ರಿಮಿನಾಲಜಿ ಮತ್ತು ಫೊರೆನ್ಸಿಕ್ ಸೈನ್ಸ್ ಇವರಲ್ಲಿ ಕಳ್ಳರುಜು ಗಳನ್ನು ಪತ್ತೆಹಚ್ಚುವ ಬಗ್ಗೆ ಇರುವ ಮಾಹಿತಿಗಳನ್ನೂ ಪುಸ್ತಕ ಗಳನ್ನೂ ಬ್ಯಾಂಕು ಅಧಿಕಾರಿಗಳಿಗೆ ಒದಗಿಸಿಕೊಡಬೇಕೆಂಬುದು ಇತ್ತು. ಹಾಗಾಗಿ ಮೇಲೆ ತಿಳಿಸಿದ ಸಂಸ್ಥೆಯು ಬ್ಯಾಂಕುಗಳಿಗೆ ಇಂಥ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಕ್ಷಿಪ್ತವಾಗಿ ಒದಗಿಸಿದೆ. ಈ ಮಾಹಿತಿಯನ್ನು ಅನುಸರಿಸಿ ವಂಚಿಸಿದ ವ್ಯಕ್ತಿಗಳ ರುಜು ಕೈಬರಹಗಳು ಇತ್ಯಾದಿಗಳನ್ನು ಕಂಡುಹಿಡಿಯಲು ತಕ್ಕ ಮಟ್ಟಿಗೆ ಅನುಕೂಲವಾದಂತಾಗಿದೆ. ಈ ಬಗ್ಗೆ ಪ್ರಶಿಕ್ಷಣವನ್ನು ನೀಡಲೂ ವ್ಯವಸ್ಥೆ ಮಾಡಲಾಗಿದೆ. ಆದರೆ ಈ ಮಾಹಿತಿಗಳು ಮತ್ತು ಉಪಕರಣಗಳು ಎಲ್ಲರಿಗೂ ಎಲ್ಲಾ ಕಾಲದಲ್ಲೂ ದೊರೆಯಲು ಸಾಧ್ಯವಾಗಿಲ್ಲ.

1964ರಲ್ಲಿ ಸ್ಥಾಪಿತವಾದ ಕೇಂದ್ರೀಯ ಜಾಗೃತ ಆಯೋಗವು ಇಂಥ ಸಂಸ್ಥೆಗಳಲ್ಲಿ ಒಂದು. ಈ ಸಂಸ್ಥೆಯು ಇಂಥ ವಂಚನೆ ಅವ್ಯವ ಹಾರ ಪ್ರಕರಣಗಳ ಬಗ್ಗೆ ಆದೇಶ ನೀಡುತ್ತದೆ. ಇದೇ ರೀತಿ ಇನ್ನೊಂದು ಸಂಸ್ಥೆಯಾದ, 1963ರಲ್ಲಿ ಸ್ಥಾಪಿತವಾದ, ಸೆಂಟ್ರಲ್ ಬ್ಯೂರೊ ಆಫ್ ಇನ್‌ವೆಸ್ಟಿಗೇಷನ್ಸ್ ಸಹ ತನಿಖೆ ನಡೆಸಿ ಕ್ರಮ ಜರುಗಿಸಲು ಸಹಾಯಮಾಡುತ್ತಿದೆ.

ಬ್ಯಾಂಕುಗಳಲ್ಲಿ ಹೊರಗಿನ ವ್ಯಕ್ತಿಗಳಿಂದ ನಡೆದ ವಂಚನೆ ಪ್ರಕರಣ ಗಳಲ್ಲಿ ಬ್ಯಾಂಕ್ ಸಿಬ್ಬಂದಿಯೂ ಶಾಮೀಲಾಗಿದ್ದು ಇವರೊಡನೆ ಲಂಚಕೋರತನವೂ ಸೇರಿರುವ ಸಂದರ್ಭಗಳಿರುತ್ತವೆ. ಇಂಥ ಸಂದರ್ಭಗಳಲ್ಲಿ ಬ್ಯಾಂಕುಗಳು ತಪ್ಪಿತಸ್ಥರ ವಿರುದ್ಧ ಬ್ಯಾಂಕಿನ ನಿಯಮಾನುಸಾರವಾಗಿ ಕ್ರಮ ಜರುಗಿಸುವುದರ ಜೊತೆಗೆ ಇಂಥ ಪ್ರಕರಣಗಳಲ್ಲಿ ಕೇಂದ್ರೀಯ ಜಾಗೃತ ಆಯೋಗದ ಸಹಾಯ ಕೋರುತ್ತವೆ. ಮತ್ತೆ ಈ ಆಯೋಗದ ಆದೇಶವನ್ನು ಪಡೆದು ಮುಂದಿನ ಕ್ರಮ ಜರುಗಿಸಲಾಗುತ್ತದೆ.

ಕೇಂದ್ರೀಯ ಜಾಗೃತ ಆಯೋಗಕ್ಕೆ ಪ್ರಕರಣಗಳನ್ನು ಅದರ ಪರಿಶೀಲನೆಗೆ ಮತ್ತು ಆದೇಶಕ್ಕೆ ಕಳುಹಿಸಬೇಕಾದರೆ, ಕೆಲವು ನಿರ್ದಿಷ್ಟ ನಿಯಮಗಳಿವೆ. ಅಂದರೆ ತಪ್ಪಿತಸ್ಥರ ಸ್ಥಾನಮಾನ, ಸಂಬಳ ಇತ್ಯಾದಿ ಇವುಗಳನ್ನು ಅನುಸರಿಸಿ ಆ ಆಯೋಗದ ಆದೇಶ ಕೋರಬೇಕಾಗುತ್ತದೆ.

ಈಚೆಗೆ ಕೇಂದ್ರದ ಆದೇಶದಂತೆ ಪ್ರತಿಯೊಂದು ಬ್ಯಾಂಕಿನ ಕೇಂದ್ರ ಕಛೇರಿಯಲ್ಲೂ ಒಂದು ಜಾಗೃತ ವಿಭಾಗವನ್ನು ಸ್ಥಾಪಿಸ ಲಾಗಿದ್ದು ಬ್ಯಾಂಕಿನ ವ್ಯವಸ್ಥಾಪಕರಲ್ಲಿ ಒಬ್ಬರು ಇದಕ್ಕೆ ಮುಖ್ಯಸ್ಥ ರಾಗಿರುತ್ತಾರೆ. ಈ ವಿಭಾಗದಲ್ಲಿ ಹಿರಿಯ ಹಾಗೂ ಅನುಭವಿ ಅಧಿಕಾರಿಗಳು ಇದ್ದು ಯಾವುದೇ ದೂರು ಅಥವಾ ಇತರೆ ವಿಭಾಗ ಗಳಿಂದ ಬಂದ ಮಾಹಿತಿಗಳ ಆಧಾರದ ಮೇಲೆ ಕೂಲಂಕಷ ತನಿಖೆ ನಡೆಸುತ್ತಾರೆ ಮತ್ತು ತಮ್ಮ ವರದಿಯನ್ನು ಶೀಘ್ರವಾಗಿ ಮೇಲಧಿಕಾರಿಗೆ ಸಲ್ಲಿಸುತ್ತಾರೆ. ಇಂಥ ವರದಿಗಳ ಆಧಾರದ ಮೇಲೆ ಮುಖ್ಯಸ್ಥರು ಮುಂದಿನ ಕ್ರಮ ಜರುಗಿಸಲು ಆದೇಶ ನೀಡುತ್ತಾರೆ. ಇಂಥ ಪ್ರಕರಣಗಳನ್ನು ಎರಡು ವಿಧವಾಗಿ ವಿಂಗಡಿ ಸುತ್ತಾರೆ.

1 ವಿಜಿಲೆನ್ಸ್ ಪ್ರಕರಣಗಳು.

2 ನಾನ್-ವಿಜಿಲೆನ್ಸ್ ಪ್ರಕರಣಗಳು.

ವಿಜಿಲೆನ್ಸ್ ಪ್ರಕರಣಗಳನ್ನು ಸಿ.ಬಿ.ಐ.ಗೆ ಮುಂದಿನ ತನಿಖೆಗೆ ಕಳುಹಿಸಲಾಗುತ್ತದೆ. ಅಲ್ಲಿಂದ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

ನಾನ್-ವಿಜಿಲೆನ್ಸ್ ಪ್ರಕರಣಗಳಲ್ಲಿ, ಬ್ಯಾಂಕು ತನ್ನದೇ ಆದ ನಿರ್ಧಾರ ತೆಗೆದುಕೊಂಡು ಮುಂದಿನ ಕ್ರಮ ಜರುಗಿಸುತ್ತದೆ.

ತಡೆಗಟ್ಟುವ ಇತರ ಕ್ರಮಗಳು

ಬುಡಮೂಲದಿಂದ ತೊಡೆದುಹಾಕಲು ಅಸಾಧ್ಯವೆನಿಸಿದಾಗ್ಯೂ ಅಂಥ ಪ್ರಕರಣಗಳು ಆಗದಂತೆ ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅಂಥವುಗಳನ್ನು ಸಂಕ್ಷಿಪ್ತವಾಗಿ ಕೆಳ ಕಂಡಂತೆ ತಿಳಿಸಬಹುದು :

ಶಾಖೆಗಳಲ್ಲಿ : ಬ್ಯಾಂಕಿನಲ್ಲಿ ಹೊಸ ಖಾತೆಗಳನ್ನು ಪ್ರಾರಂಭಿಸುವಾಗ ಅದಕ್ಕೆ ಸಂಬಂಧಿಸಿದ ಎಲ್ಲ ನೀತಿ ನಿಯಮಗಳನ್ನು ಸಹ ಜಾಗರೂಕತೆಯಿಂದ ಪಾಲಿಸಬೇಕು. ಯಾವ ವಿಧದಲ್ಲೂ ಅದರಿಂದ ವಿಚಲಿತರಾಗಬಾರದು.

ಬ್ಯಾಂಕಿನ ವ್ಯವಸ್ಥಾಪಕರು, ಇತರ ಅಧಿಕಾರಿಗಳು ಶಾಖೆಯ ಎಲ್ಲ ಪುಸ್ತಕಗಳನ್ನು ಲೆಡ್ಜರುಗಳನ್ನೂ, ರಿಜಿಸ್ಟರುಗಳನ್ನು ಪ್ರತಿದಿನವೂ ಪರಿಶೀಲಿಸುತ್ತಿರಬೇಕು. ಮತ್ತು ಬ್ಯಾಂಕಿನ ಆದೇಶಗಳಿಗೆ ಅನುಸಾರವಾಗಿ ಬರೆಯಲಾಗಿದೆಯೇ ಎಂದು ಜಾಗರೂಕತೆಯಿಂದ ಗಮನಿಸಬೇಕು.

ಬ್ಯಾಂಕಿನ ಸಿಬ್ಬಂದಿ ವರ್ಗದವರ ಕಾರ್ಯಗಳನ್ನು ಆಗಿಂದಾಗ್ಗೆ ಬದಲಾಯಿಸುತ್ತಿರಬೇಕು. ಒಂದೇ ವಿಭಾಗದಲ್ಲಿ ದೀರ್ಘಕಾಲ ಕೆಲಸ ಮಾಡದಂತೆ ನೋಡಿಕೊಳ್ಳಬೇಕು.

ಸಿಬ್ಬಂದಿವರ್ಗದವರ ಖಾತೆಗಳು ಮತ್ತು ಅವರ ಜೀವನ ಶೈಲಿ ಇತ್ಯಾದಿಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು.

ಯಾರೊಬ್ಬರೂ ರಜವನ್ನೇ ಹಾಕದೇ ಕೆಲಸ ಮಾಡುತ್ತಿದ್ದರೆ ಅವರನ್ನು ರಜದ ಮೇಲೆ ಹೋಗುವಂತೆ ತಿಳಿಸಬೇಕು. ಅವರ ಜಾಗಕ್ಕೆ ಬೇರೊಬ್ಬರನ್ನು ನಿಯಮಿಸುವುದು.

ಎಲ್ಲ ಅಧಿಕಾರ ವರ್ಗದವರೂ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿದ್ದಾರೆಯೇ ಎಂದು ಗಮನಿಸಬೇಕು.

ಬ್ಯಾಂಕಿನ ಶಾಖೆಯ ಎಲ್ಲಾ ವೋಚರುಗಳು ನಿಯಮಾನುಸಾರವಾಗಿ ತಯಾರಾಗಿದ್ದು ಅವುಗಳನ್ನು ನಿಶ್ಚಿತ ಜಾಗದಲ್ಲಿ ರಕ್ಷಣೆಯಲ್ಲಿ ಇಡಲಾಗಿದೆಯೇ ಎಂದು ಗಮನಿಸಬೇಕು.

ಕ್ಯಾಷ್ ವಿಭಾಗದಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಮೇಲೂ ಬಹಳ ಜಾಗರೂಕತೆಯಿಂದಿರಬೇಕು. ಕ್ಯಾಷ್ ವಿಭಾಗದಲ್ಲಿ ಸಾರ್ವಜನಿಕರಿಗೆ ವೇದ್ಯವಾಗುವಂತೆ ಸೂಕ್ತವಾದ ಆದೇಶಗಳನ್ನು ಹಾಕಿರಬೇಕು.

ಸೆಕ್ಯೂರಿಟಿ ಫಾರಂಗಳ ಮೇಲೆ ಸೂಕ್ತ ರಕ್ಷಣೆ ಹಿಡಿತವಿರಬೇಕು.

ಡ್ರಾಫ್ಟ್ ಇತ್ಯಾದಿಗಳನ್ನು ಹಣ ಪಾವತಿ ಮಾಡುವುದಕ್ಕೆ ಮುಂಚಿತವಾಗಿ ಅದರಲ್ಲಿ ನಮೂದಿಸಿರುವ ಅಧಿಕಾರಿಗಳ ಸಹಿಗಳು ಸರಿಯಾಗಿವೆಯೇ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು.

ಅತಿ ಹೆಚ್ಚಿನ ಮೊತ್ತದ ಡ್ರಾಫ್ಟ್‌ಗಳ ಪಾವತಿ ಮಾಡುವಾಗ ಆದೇಶರಹಿತ ಡ್ರಾಫ್ಟ್ ಪಾವತಿ ಮಾಡಿದಾಗ ಸಂಬಂಧಪಟ್ಟ ಶಾಖೆಯಿಂದ ಶೀಘ್ರವಾಗಿ ದೃಢೀಕರಣ ಪತ್ರವನ್ನು ತೆಗೆದುಕೊಳ್ಳಬೇಕು.

ತೀರುವೆ, ಕ್ಲಿಯರಿಂಗ್ ಮೂಲಕ ಬರುವ ಡ್ರಾಫ್ಟ್‌ಗಳ ಪಾವತಿ ಮಾಡುವಾಗ ಹೆಚ್ಚಿಗೆ ಜಾಗರೂಕತೆಯಿಂದಿರಬೇಕು. ಕ್ಲಿಯರಿಂಗ್ ವಿಭಾಗದ ಕೆಲಸ ಸಮರ್ಪಕವಾಗಿದೆಯೇ ಎಂಬುದರ ಬಗ್ಗೆ ಜಾಗರೂಕತೆಯಿಂದ ಇರಬೇಕು.

ಟ್ರೆಷರಿ ಹುಂಡಿಗಳನ್ನು ಪಾವತಿ ಮಾಡುವಾಗ ಟ್ರೆಷರಿ ನಿಯಮಾವಳಿಗಳನ್ನು ಜಾಗರೂಕತೆಯಿಂದ ಪಾಲಿಸಬೇಕು. ಟ್ರೆಷರಿ ಅಧಿಕಾರಿಗಳ ಸಹಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು.

ಬ್ಯಾಂಕಿಗೆ ಬರತಕ್ಕ ದೂರುಗಳನ್ನು, ಅವು ಬರಹದಲ್ಲಿರಲಿ ಅಥವಾ ಬಾಯಿಮಾತಿನಲ್ಲಿರಲಿ, ಅಂಥವುಗಳಿಗೆ ವಿಶೇಷ ಗಮನವಿತ್ತು ಶೀಘ್ರವಾಗಿ ಪರಿಶೀಲಿಸಿ, ಪರಿಹಾರ ನೀಡಬೇಕು.

ಬ್ಯಾಂಕಿನ ಲೆಕ್ಕಪತ್ರಗಳು ನಮೂದಿಸಲಾಗಿರುವ ಪುಸ್ತಕಗಳೊಡನೆ ಆಗಿಂದಾಗ್ಗೆ ತಾಳೆ ಆಗಿವೆಯೇ ಎಂದು ಪರಿಶೀಲಿಸುತ್ತಿರಬೇಕು. ಹಾಗೇನಾದರೂ ನಿಯಮಿತ ಅವಧಿಯೊಳಗೆ ತಾಳೆ ಆಗಿರದಿದ್ದಲ್ಲಿ ಅದಕ್ಕೆ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕು.

ಕ್ಯಾಷ್ ವಿಭಾಗದಲ್ಲಿ ಕ್ಯಾಷಿಯರ್‌ಗಳು ಕ್ಯೂಬಿಕಲ್‌ಗಳನ್ನು ಸದಾಕಾಲದಲ್ಲಿಯೂ ಅಂದರೆ ಅವರು ಒಳಗೆ ಇರುವಾಗ ಮತ್ತು ಹೊರಗೆ ಹೋಗುವಾಗ ಭದ್ರಪಡಿಸಿರಬೇಕು.

ಕರೆನ್ಸಿ ನೋಟುಗಳನ್ನು ಸಾರ್ವಜನಿಕರ ಕಣ್ಣಿಗೆ ಕಾಣುವಂತೆ ಜೋಡಿಸಿರಬಾರದು, ಮತ್ತೆ ಯಾವ ಸಂದರ್ಭದಲ್ಲಿಯೂ ಕ್ಯಾಷಿಯರನ ಮನಸ್ಸು ವಿಚಲಿತವಾಗಬಾರದು.

ತುರ್ತು ಸಮಯದಲ್ಲಿ ಅಲಾರಂ ಗಂಟೆ ಒತ್ತುವಂತೆ ಅವಕಾಶ ಕಲ್ಪಿಸಬೇಕು.

ನಿಯಂತ್ರಣ ಪ್ರಾಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳು : ಆಗಿಂದಾಗ್ಗೆ ತಮಗೆ ಸಂಬಂಧಪಟ್ಟ ಶಾಖೆಗಳಿಗೆ ಭೇಟಿಕೊಟ್ಟು ಶಾಖೆಗಳು ಕಾಲಕಾಲಕ್ಕೆ ಕಳುಹಿಸಬೇಕಾಗಿದ್ದ ವರದಿಗಳು ತಪಾಸಣಾ ವರದಿಗಳಿಗೆ ಸಮರ್ಪಕ ಉತ್ತರಗಳು, ದೂರುಗಳಿಗೆ ತಕ್ಕ ಪರಿಹಾರ ಕೊಡಲಾಗಿದೆಯೇ ಈ ವಿಷಯಗಳನ್ನು ಪರಿಶೀಲಿಸುತ್ತಿರಬೇಕು.

ಒಮ್ಮೊಮ್ಮೆ ತುರ್ತು ತನಿಖೆಯನ್ನು ನಡೆಸಬೇಕು. ಮುಖ್ಯವಾದ ಪುಸ್ತಕಗಳನ್ನು ಪರಿಶೀಲಿಸಬೇಕು. ಇದರ ಜೊತೆಗೆ ಈ ಕೆಲವು ಅಂಶಗಳನ್ನು ಪರಿಶೀಲಿಸಬಹುದು : ಒಂದು ಬ್ಯಾಂಕಿನಲ್ಲಿ ಇಂಥ ವಂಚನೆ ಪ್ರಕರಣ ಬೆಳಕಿಗೆ ಬಂದ ತಕ್ಷಣ ಅಂಥ ಮಾಹಿತಿಯನ್ನು ಇತರ ಎಲ್ಲಾ ಬ್ಯಾಂಕುಗಳಿಗೂ ತುರ್ತಾಗಿ ತಿಳಿಸುವುದು :

ಈಗಾಗಲೇ ಬ್ಯಾಂಕಿನಲ್ಲಿರುವ ತಪಾಸಣೆ ಮತ್ತು ಪರಿವೀಕ್ಷಣೆ ಕಾರ್ಯಗಳನ್ನು ಚುರುಕುಗೊಳಿಸುವುದು ಮತ್ತು ಅವುಗಳ ಕಾಲದ ಅಂತರವನ್ನು ಕಡಿಮೆ ಮಾಡುವುದು, ಅಂದರೆ 18 ತಿಂಗಳಿಗೊಮ್ಮೆ ಮಾಡಲಾಗುತ್ತಿರುವ ತಪಾಸಣೆ ಮತ್ತು ಪರಿವೀಕ್ಷಣೆಯನ್ನು 10–12 ತಿಂಗಳಿಗೊಮ್ಮೆ ನಡೆಯುವಂತೆ ಏರ್ಪಾಡು ಮಾಡುವುದು. ಗಣಕ ಯಂತ್ರಗಳನ್ನು ಅಳವಡಿಸಿಕೊಂಡು ತಪಾಸಣೆ ನಡೆಸುವುದು; ಈ ಕ್ರಮಗಳು ಕೇವಲ ಉದಾಹರಣೆಗಳು ಮಾತ್ರ, ಸವಿಸ್ತಾರವಾಗಿ ನಮೂದಿಸಿಲ್ಲ.

ವಂಚನೆ ವಿದೇಶಗಳಲ್ಲಿ

ಇಂತಹ ವಂಚನೆ ಪ್ರಕರಣಗಳು ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ವಿದೇಶದಲ್ಲೂ ಇಂತಹ ಅಥವಾ ಇದಕ್ಕಿಂತ ಹೆಚ್ಚಿನ ಆಧುನಿಕ ರೀತಿಯಲ್ಲಿ ಬ್ಯಾಂಕಿಗೆ ವಂಚನೆ ಮಾಡಿರುವ ಪ್ರಕರಣಗಳನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಅಲ್ಲೂ ಸಹ ಅವುಗಳನ್ನು ತಡೆಗಟ್ಟುವ ಕ್ರಮಗಳನ್ನು, ಹೆಚ್ಚಿನ ಎಚ್ಚರಿಕೆ ಕ್ರಮಗಳನ್ನು ವಹಿಸಿದ್ದಾಗ್ಯೂ ಅಂತಹ ಪ್ರಕರಣಗಳನ್ನು ಪೂರ್ಣವಾಗಿ ತೊಡೆದುಹಾಕಲು ಸಾಧ್ಯವಾಗಿಲ್ಲವೆಂದು ಕಂಡುಬರುತ್ತದೆ. ಇಷ್ಟಾಗಿ, ವಿದೇಶೀ ಬ್ಯಾಂಕುಗಳಲ್ಲಿ ಅತಿ ಹೆಚ್ಚಿನ ಮಟ್ಟದ ಆಧುನೀಕರಣ, ಯಾಂತ್ರೀಕರಣದ ವ್ಯವಸ್ಥೆಯಿದೆ. ಹಾಗಿದ್ದರೂ ಸಹ ಕಂಪ್ಯೂಟರ್‌ಗಳ ಮುಖಾಂತರವೇ ವಂಚನೆ ಮಾಡಿರುವ ಮತ್ತು ಮಾಡುತ್ತಿರುವ ಪ್ರಕರಣಗಳು ಗಮನಕ್ಕೆ ಬಂದಿವೆ. ಹೀಗೆ ಮಾಡಿರುವ ಒಂದೊಂದು ವಂಚನೆಯ ಮೊತ್ತವೂ ಕೋಟಿಗಟ್ಟಲೆಯಿರುತ್ತವೆ.

ಉಪಸಂಹಾರ

ಇಲ್ಲೂ ಈಚೀಚೆಗೆ ಬ್ಯಾಂಕುಗಳಲ್ಲಿ ಆಧುನೀಕರಣ, ಗಣಕಯಂತ್ರೀಕರಣವನ್ನು ಅಳವಡಿಸಲಾಗಿದೆ. ಇದರಿಂದ ಕೊಂಚ ಮಟ್ಟಿಗೆ ವಂಚನೆ ಪ್ರಕರಣಗಳನ್ನು ತಡೆಹಿಡಿಯುವುದು ಸಾಧ್ಯವೆಂದು ನಂಬಲಾಗಿದೆ. ಆದರೆ ಎಷ್ಟರಮಟ್ಟಿಗೆ ಸಾಧ್ಯವಾಗಿದೆ ಎಂಬುದು ತಿಳಿಯುವುದಿಲ್ಲ.

ಅತಿ ಹೆಚ್ಚಿನ ಬ್ಯಾಂಕ್ ಖಾತೆಗಳನ್ನು ತಡೆಯುವ ಕ್ರಮವಾಗಿ ಈಗಾಗಲೇ ಕೆಲವು ಖಾಸಗೀರಂಗದಬ್ಯಾಂಕುಗಳು ಗ್ರಾಹಕರ ಠೇವಣಿ ಮೊತ್ತದ ಪ್ರಮಾಣವನ್ನು ಹೆಚ್ಚಿಸಿರುವುದನ್ನು ನೋಡುತ್ತಿದ್ದೇವೆ. ಹೀಗೆ ಬೇರೆ ಬ್ಯಾಂಕುಗಳು ಈ ನೀತಿ ಅನುಸರಿಸಿದ ಮಾತ್ರಕ್ಕೆ ಅವ್ಯವಹಾರ ಅಥವಾ ವಂಚನೆಗೆ ಪೂರ್ಣವಾಗಿ ಕಡಿವಾಣ ಹಾಕಲು ಸಾಧ್ಯವೆಂದು ಹೇಳಲಾಗದು. ಈ ರೀತಿ ಮಾಡಿದರೆ ಸಣ್ಣ ಖಾತೆದಾರರಿಗೆ ಬ್ಯಾಂಕುಗಳ ಸೇವೆ ದುರ್ಲಭವಾಗುವುದೊಂದೇ ತತ್‌ಕ್ಷಣದಲ್ಲಿ ಆಗುವ ಪರಿಣಾಮ. ಆದರೆ ಇಂತಹ ವಿಷಯಗಳಲ್ಲಿ ನಿರ್ಧಾರಗಳು ರಿಸರ್ವ್ ಬ್ಯಾಂಕಿಗೆ ಸೇರಿದ್ದಾಗಿರುತ್ತದೆ. ಇತ್ತೀಚಿನ ಬೆಳವಣಿಗೆ ಏನೆಂದರೆ ಎಲ್ಲಾ ಬ್ಯಾಂಕುಗಳಿಗೂ ಅನ್ವಯವಾಗುವಂತೆ ಪ್ರತಿಯೊಬ್ಬ ಹೊಸ ಖಾತೆದಾರನೂ, ಅವನು ಅಕ್ಷರಸ್ಥನಿರಲಿ ಅಥವಾ ಅನಕ್ಷರಸ್ಥನಿರಲಿ, ತಾನು ಖಾತೆ ತೆಗೆಯುವಾಗ ಅವನ ಭಾವಚಿತ್ರವನ್ನು ಕಡ್ಡಾಯವಾಗಿ ನೀಡಬೇಕೆಂಬುದು. ಎಲ್ಲಕ್ಕೂ ಮಿಗಿಲಾಗಿ, ಬ್ಯಾಂಕಿನ ಎಲ್ಲಾ ಸಿಬ್ಬಂದಿವರ್ಗ ಮತ್ತು ಅಧಿಕಾರಿವರ್ಗದವರಿಗೆ ಕಡ್ಡಾಯವಾಗಿ ವಿಶೇಷ ಪ್ರಶಿಕ್ಷಣ ನೀಡಿ, ಈ ಜಾಗ್ರತಿ ಮನೋಭಾವ ಕೇವಲ ಬ್ಯಾಂಕಿನ ಒಂದು ನಿರ್ದಿಷ್ಟ ವಿಭಾಗದ ಕೆಲಸ ಮಾತ್ರ ಆಗಿರದೆ ಅವರುಗಳಿಗೆ ತಾವು ಮಾಡುವ ಪ್ರತಿಯೊಂದು ಕಾರ್ಯದಲ್ಲೂ ಜಾಗೃತ ಮನೋಭಾವ ಉಂಟುಮಾಡುವಂತೆ ಮಾಡಬೇಕು. ಆಂತರಿಕವಾಗಿ ಬ್ಯಾಂಕಿನ ಸಿಬ್ಬಂದಿ/ಅಧಿಕಾರಿಗಳಿಂದ ನಡೆಯುವ ವಂಚನೆ ಪ್ರಕರಣಗಳನ್ನು ತಡೆಯುವ ನಿಟ್ಟಿನಲ್ಲಿ ಕಾರ್ಮಿಕ ಸಂಘಗಳು/ಅಧಿಕಾರಿವರ್ಗದ ಸಂಘ ಸಂಸ್ಥೆಗಳು ತಮ್ಮ ಸದಸ್ಯರಿಗೆಲ್ಲ ಆಗಿಂದಾಗ್ಗೆ ತಿಳಿವಳಿಕೆ ನೀಡಿ, ಸಾಧ್ಯವಾದಷ್ಟು ಸಹಾಯಮಾಡಬೇಕು. ಈ ಕ್ರಮಗಳಿಂದ ವಂಚನೆ ಪ್ರಕರಣಗಳು ಕಡಿಮೆಯಾಗುತ್ತವೆಯೇನೋ ಕಾದು ನೋಡಬೇಕಾಗಿದೆ.

ಆದರೆ ಈಚೀಚೆಗೆ ವಂಚನೆ ಪ್ರಕರಣಗಳು ಹೆಚ್ಚುತ್ತಿರುವುದು ಕಂಡುಬರುತ್ತಿವೆಯೆಂದು ಆಗಲೇ ಹೇಳಿದೆವಷ್ಟೆ. ಹಾಗಾಗಿ 'ವಂಚನೆ' ಪ್ರಕರಣಗಳನ್ನು ಬುಡಸಹಿತ ನಿರ್ಮೂಲ ಮಾಡುವುದಂತೂ ಸಾಧ್ಯವಿಲ್ಲವೆಂದು ಕಾಣುತ್ತದೆ. ಏಕೆಂದರೆ, ಮೊದಲಲ್ಲೇ ವಿವರಿಸಿದಂತೆ ಅದು ಒಬ್ಬ ವ್ಯಕ್ತಿಯ ಒಂದು ವರ್ತನೆಯನ್ನು, ಅವನ ಮನೋಚಾಪಲ್ಯವನ್ನು ಅವಲಂಬಿಸಿರುವುದರಿಂದ ಇಂತಹ ಪ್ರಕರಣಗಳನ್ನು ಪೂರ್ಣವಾಗಿ ತಡೆಗಟ್ಟುವುದಂತೂ ಸಾಧ್ಯವಿಲ್ಲವೆಂದು ಕಾಣುತ್ತದೆ. ಆದರೆ ಮುಖ್ಯವಾಗಿ ಬ್ಯಾಂಕಿನ ಎಲ್ಲರೂ, ಸದಾಕಾಲದಲ್ಲಿಯೂ ಜಾಗರೂಕರಾಗಿದ್ದು, ಸಂಬಂಧಪಟ್ಟ ಎಲ್ಲ ಸಿಬ್ಬಂದಿಗಳು, ಅಧಿಕಾರಿಗಳು ಪ್ರಾಮಾಣಿಕರಾಗಿ ವರ್ತಿಸಿದರೆ ಮಾತ್ರ ಇಂತಹ ವಂಚನೆ ಪ್ರಕರಣಗಳು ಕಡಿಮೆಯಾಗಬಹುದು, ಅಷ್ಟೆ. ★

ವಿಳಾಸ ಬದಲಾವಣೆ

'ಬ್ಯಾಂಕಿಂಗ್ ಪ್ರಪಂಚ'ದ ಆಜೀವ ಚಂದಾದಾರರು ತಮ್ಮ ವಿಳಾಸದಲ್ಲಿ ಆಗುವ ಯಾವುದೇ ಬದಲಾವಣೆಯನ್ನು ಕೂಡಲೇ ದಯವಿಟ್ಟು ತಿಳಿಸಬೇಕು.

ಪ್ರಧಾನ ಕಾರ್ಯದರ್ಶಿ
ಸಮನ್ವಯ ಸಮಿತಿ
ಭಾರತೀಯ ಸ್ಟೇಟ್ ಬ್ಯಾಂಕ್, ಕನ್ನಡ ಸಂಘಗಳು
ಭಾರತೀಯ ಸ್ಟೇಟ್ ಬ್ಯಾಂಕ್
(ಬೆಂಗಳೂರು ನಗರ ಶಾಖೆ)
೨೨ ಜಯಚಾಮರಾಜೇಂದ್ರ ರಸ್ತೆ
ಬೆಂಗಳೂರು ೫೬೦ ೦೦೨

ಬ್ಯಾಂಕ್ ಸಾಲಗಳ ವಸೂಲಾತಿ

ಬಿ. ಎಸ್. ಚಂದ್ರಶೇಖರ

ಭಾರತೀಯ ಸ್ಟೇಟ್ ಬ್ಯಾಂಕ್, ವಲಯ ಕಛೇರಿ, ಬೆಂಗಳೂರು

ಬ್ಯಾಂಕುಗಳ ಸಾಲ ವಸೂಲಾತಿಯದೊಂದು ದೊಡ್ಡ ಸಮಸ್ಯೆ. ವಸೂಲಾತಿಯ ಅಸಮರ್ಪಕತೆಗೆ ಅನೇಕ ಕಾರಣಗಳುಂಟು. ವಸೂಲಾತಿಯ ವಿಧಾನಗಳೂ ಹಲವಾರು. ಯಾವ ಸಂದರ್ಭದಲ್ಲಿ ಯಾವ ಧೋರಣೆ ಅನುಸರಿಸಬೇಕು, ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬುದರ ಪೂರ್ಣ ಅರಿವು ಇರಬೇಕಾದ್ದು ಅಗತ್ಯ.

ಸಾರ್ವಜನಿಕರಿಂದ ಠೇವಣಿಗಳನ್ನು ಪಡೆದು ಅವುಗಳ ಬಹು ಭಾಗವನ್ನು ಸಾಲವಾಗಿ ನೀಡುವುದು ಬ್ಯಾಂಕುಗಳ ಮುಖ್ಯ ಕಲಾಪ, ನೀಡಿದ ಸಾಲಗಳ ಸಮರ್ಪಕ ವಸೂಲಾತಿಯಾದರೆ ಮಾತ್ರ ನಿಧಿಗಳ ಪ್ರವರ್ತನೆಯಾಗಲು ಸಾಧ್ಯ. ನಿಧಿ ಪ್ರವರ್ತನ ಚಕ್ರ ಸ್ಥಗಿತಗೊಂಡರೆ ಬ್ಯಾಂಕುಗಳ ಮೂಲಭೂತ ಚಟುವಟಿಕೆಗೇ ಧಕ್ಕೆಯುಂಟಾಗುತ್ತದೆ.

ಸಾಲಗಳು ಬ್ಯಾಂಕಿನ ಪ್ರಮುಖ ಆಸ್ತಿಗಳು. ಈ ಆಸ್ತಿಗಳ ಗುಣಮಟ್ಟ ಕಡಿಮೆಯಾದರೆ ಬ್ಯಾಂಕಿನ ಹಣಕಾಸು ಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮವುಂಟಾಗುತ್ತದೆ ಎಂಬುದಂತೂ ಸ್ಪಷ್ಟ. ಸಾಲಗಳ ಮೇಲಣ ಬಡ್ಡಿ ಬ್ಯಾಂಕುಗಳ ಪ್ರಮುಖ ಆದಾಯ ಮೂಲ. ಠೇವಣಿಗಳಿಗೆ ನೀಡುವ ಬಡ್ಡಿ ಹಾಗೂ ಸಾಲಗಳಿಗೆ ವಿಧಿಸುವ ಬಡ್ಡಿ ಇವುಗಳ ನಡುವಣ ಅಂತರ ಕಡಿಮೆಯಿರುವುದರಿಂದ, ನೀಡಿದ ಸಾಲಗಳು ಬಡ್ಡಿ ಸಹಿತ ಪೂರ್ಣವಾಗಿ ಮರುಪಾವತಿಯಾಗದಿದ್ದರೆ ಬ್ಯಾಂಕಿನ ಲಾಭಕ್ಕೆ ಪೆಟ್ಟು. ಆದ್ದರಿಂದ ಬ್ಯಾಂಕುಗಳು ಸಾಲ ವಸೂಲಾತಿಯ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾದುದು ಸಹಜ.

ಸಾಲ ವಸೂಲಾತಿಯ ಸ್ಥಿತಿ ತೃಪ್ತಿಕರವಾಗಿದೆಯೆಂದು ಹೇಳುವಂತಿಲ್ಲ. ಶಾಖೆಗಳಲ್ಲಿ ಕರಡು ಸಾಲಗಳ ಮೊತ್ತ ಏರುತ್ತಿದೆ. ನರಸಿಂಹಂ ಸಮಿತಿಯ ಶಿಫಾರಸಿನಂತೆ ಜಾರಿಗೆ ತರಲಾಗಿರುವ 'ಆದಾಯ ಗುರುತಿಸುವಿಕೆ ಮತ್ತು ಆಸ್ತಿ ವರ್ಗೀಕರಣ' ವಿಧಾನದಲ್ಲಿ ಬ್ಯಾಂಕಿನ ಎಲ್ಲ ಸಾಲಗಳನ್ನೂ ಶಿಷ್ಟ ಆಸ್ತಿ, ಅರೆ ಶಿಷ್ಟ ಆಸ್ತಿ, ಅನುಮಾನಾಸ್ಪದ ಆಸ್ತಿ ಹಾಗೂ ನಷ್ಟ ಆಸ್ತಿ ಎಂದು ವಿಂಗಡಿಸಲಾಗುತ್ತಿದೆ. ಇವುಗಳ ಪೈಕಿ ಶಿಷ್ಟ ಆಸ್ತಿಯೊಂದನ್ನು ಬಿಟ್ಟು ಉಳಿದ ಮೂರು ವರ್ಗಗಳಲ್ಲಿ ವಸೂಲಾತಿಗೆ ಒತ್ತು ನೀಡಬೇಕಾಗುತ್ತದೆ. ಶಿಷ್ಟೇತರ ಆಸ್ತಿಗಳ ಮೇಲಿನ ಬಡ್ಡಿಯನ್ನು ಆದಾಯವೆಂದು ತೋರಿಸುವ ಹಾಗಿಲ್ಲ. ಈ ಕಾರಣದಿಂದ ಕಳೆದ ಎರಡು ವರ್ಷಗಳಲ್ಲಿ ಅನೇಕ ಬ್ಯಾಂಕುಗಳು ನಷ್ಟವನ್ನೇ ತೋರಿಸುವಂತಾಗಿದ್ದರೂ ಸಾಲಗಳ ಗುಣಮಟ್ಟವನ್ನೂ, ಸಾಲದ ಅಂಕಿಗಳನ್ನೂ ಕಣ್ಣಿಟ್ಟು ನೋಡುವಂತಾಗಿದೆ. ಶಿಷ್ಟೇತರ ಆಸ್ತಿಗಳಿಗಾಗಿ ಬ್ಯಾಂಕುಗಳು ಗಣನೀಯವಾಗಿ ಉಪಬಂಧ ಮಾಡಬೇಕಾಗಿದೆ. ಸಾಲ ವಸೂಲಾತಿಯತ್ತ ಇನ್ನಷ್ಟು ಹೆಚ್ಚು ಗಮನ ನೀಡುವಂತಾಗಲು ಇದೂ ಒಂದು ಪ್ರಬಲ ಕಾರಣ.

ನೈಸರ್ಗಿಕ ವಿಕೋಪಗಳು, ಬಡತನ, ಕೈಗಾರಿಕಾ ಅಸ್ವಾಸ್ಥ್ಯ ಹಾಗೂ ಸರಕಾರದ ನೀತಿಗಳು—ಇವನ್ನು ಸಾಲ ವಸೂಲಾತಿಯ ಅಸಮರ್ಪಕತೆಗೆ ಮುಖ್ಯಕಾರಣಗಳೆಂದು ಹೆಸರಿಸಬಹುದು. ಮರುಪಾವತಿಯನ್ನು ಸಾಕಷ್ಟು ಪ್ರಭಾವಿಸುವ ಇನ್ನೊಂದು ಸಂಗತಿಯೆಂದರೆ ಸಾಲಗಾರರ ಮನೋಭಾವ. ಇವು ಬಾಹ್ಯ ಕಾರಣಗಳಾದರೆ, ಅಸಮರ್ಪಕ ಸಾಲ ನಿರ್ಧಾರಣೆ ಹಾಗೂ ವಿತರಣೆ ಮತ್ತು ಸಾಲಗಳ ಅನುಸರಣೆಯ ಕೊರತೆ ಆಂತರಿಕ ಕಾರಣಗಳು.

ಇನ್ನು ವಸೂಲಾತಿಯ ಕೆಲವು ತಂತ್ರಗಳನ್ನು ಕುರಿತು ಚರ್ಚಿಸಬಹುದು. ಸಕಾಲಿಕ ಉದರಿ ನೀಡಿಕೆಯಿಂದ ಸಾಲಗಾರರಿಗೆ ತಾವು ತೆಗೆದುಕೊಂಡ ಹಣದ ಪೂರ್ಣ ಪ್ರಯೋಜನ ಲಭಿಸಿ ಅವರ ಮರುಪಾವತಿ ಸಾಮರ್ಥ್ಯ ಹೆಚ್ಚಾಗುತ್ತದೆ. ಸಕಾಲಿಕ ಉದರಿ ಸಿಗದಿದ್ದರೆ ಯೋಜನೆ ಸ್ಥಗಿತವಾಗಬಹುದು. ಉದರಿ ಉಸ್ತುವಾರಿಯ ಕೊರತೆಯ ಬಗ್ಗೆ ಹೇಳಿದಷ್ಟೂ ಇದೆ. ಮಂಜೂರಾತಿಯ ನಂತರ ಭೇಟಿ, ಬ್ಯಾಂಕಿಗೆ ಒತ್ತೆಯಾದ ಆಸ್ತಿಗಳ ವೀಕ್ಷಣೆ, ಖಾತೆಯ ಜಮಾ ನಮೂದುಗಳ ಮೊತ್ತದೊಂದಿಗೆ ಘಟಕದ ಮಾರಾಟ ಅಂಕಿಯ ಹೋಲಿಕೆ, ಶಿಷ್ಟೇತರ ಆಸ್ತಿಗಳನ್ನು ಶೀಘ್ರವಾಗಿ ಗುರುತಿಸುವುದು, ವಕೀಲರಿಂದ ನೋಟೀಸು ಕೊಡಿಸುವುದು, ದಾವೆ ಹೂಡುವುದು, ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮದ (ಠೇವಿಉಖಾನಿ) ಖಾತರಿ ಹಣಕ್ಕೆ ಕ್ಲೇಮು ಸಲ್ಲಿಸುವುದು ಇವೇ ಮುಂತಾದ ಮಾಮೂಲೀ ಕ್ರಮಗಳನ್ನು ಅನುಸರಿಸದಿದ್ದರೆ ವಸೂಲಾತಿ ಸುಧಾರಿಸುವ ಸಾಧ್ಯತೆ ಇಲ್ಲ. ರಫ್ತು ಉದರಿ ಖಾತರಿ ನಿಗಮದ ಕ್ಲೇಮುಗಳನ್ನು ಬ್ಯಾಂಕುಗಳು ಸರಿಯಾಗಿ ಸಲ್ಲಿಸುತ್ತಿಲ್ಲ. ರಫ್ತು ಸಾಲಗಳ ವಸೂಲಾತಿಯ ಸಂದರ್ಭದಲ್ಲಿ ಇದು ಮುಖ್ಯವೆನಿಸುತ್ತದೆ.

ದಾವೆ ಹೂಡಿದ ಖಾತೆಗಳ ನಿರ್ವಹಣೆಗೂ ವಿಶೇಷ ಗಮನ ಸಲ್ಲಬೇಕು. ಬ್ಯಾಂಕಿನ ವಕೀಲರೊಂದಿಗೆ ದಾವೆಗಳ ಸ್ಥಿತಿಯ ಬಗ್ಗೆ ಚರ್ಚೆ, ಶೀಘ್ರ ಇತ್ಯರ್ಥಕ್ಕೆ ಪ್ರಯತ್ನ, ನ್ಯಾಯಾಲಯದಿಂದ

ಮಧ್ಯಂತರ ಆಜ್ಞೆಗಳನ್ನು ತಂದು ಒತ್ತೆಯಾದ ಆಸ್ತಿಗಳ ಜಪ್ತಿ, ವಿಲೇ, ಸ್ಥಿರಾಸ್ತಿಗಳ ಮಾರಾಟಕ್ಕೆ ತಡೆ ತರುವ ಯತ್ನಗಳು ಹೆಚ್ಚು ನಡೆಯುತ್ತಿಲ್ಲ. ಡಿಕ್ರಿಗಳ ಅಮಲ್ಜಾರಿಯೂ ಆಗುತ್ತಿಲ್ಲ.

ಸಾಲಗಾರರೊಡನೆ ಸತತ ಸಂಪರ್ಕ ಬಹುಮುಖ್ಯ. ದಾವೆ ಹೂಡಿದ ಮೇಲೂ ಸಾಲಗಾರರೊಂದಿಗೆ ಸಂಪರ್ಕವಿರಬೇಕು. ಇದರಿಂದ ರಾಜಿ ಮೂಲಕ ಇತ್ಯರ್ಥವಾಗುವ ಸಾಧ್ಯತೆ ಹೆಚ್ಚುತ್ತದೆ. ರಾಜಿ ಇತ್ಯರ್ಥಗಳು ಬ್ಯಾಂಕುಗಳಿಗೆ ಈಚೆಗೆ ಹೆಚ್ಚು ಪ್ರಿಯವೆನಿಸಿವೆ. ಸಾಲಗಾರರಿಗೆ ರಿಯಾಯಿತಿ ದೊರೆತರೂ ಬ್ಯಾಂಕಿಗೂ ಲಾಭವೇ ಆಗುವುದರಿಂದ ರಾಜಿ ನಿರ್ಧಾರಗಳನ್ನು ತ್ವರಿತವಾಗಿ ಕೈಗೊಳ್ಳಲು ನೆರವಾಗುವಂತೆ ಅಧಿಕಾರ ನಿಯೋಜನೆಯಾಗಬೇಕು. ರಾಜಿ ಪ್ರಸ್ತಾಪದ ಕಾಗದಪತ್ರಗಳು ಆಮೆಗತಿಯಲ್ಲಿ ಚಲಿಸುವುದರಿಂದ ಮರುಪಾವತಿ ಮಾಡಲಿಚ್ಛಿಸುವಸಾಲಗಾರರು ಬೇಸತ್ತಿದ್ದಾರೆ. ಬ್ಯಾಂಕಿನ ನಿರ್ಧಾರ ಏನೇ ಇರಲಿ, ಅದನ್ನು ವಿಳಂಬ ಮಾಡದೆ ಸಾಲಗಾರರಿಗೆ ತಿಳಿಸಬೇಕಾದ್ದು ಅಗತ್ಯ.

ವಸೂಲಾತಿ ಸಾಧ್ಯವೇ ಇಲ್ಲದಿರುವೆಡೆಗಳಲ್ಲೂ ಮೊತ್ತಗಳು ಸಾಲ ಖಾತೆಗಳಲ್ಲೇ ವರ್ಷಗಟ್ಟಲೆ ನಿಂತುಬಿಟ್ಟಿರುವುದೂ ಇದೆ. ಸಾಲಗಳನ್ನು ತೊಡೆದುಹಾಕುವುದರಿಂದ ಬ್ಯಾಂಕಿನ ಆಸ್ತಿ-ಹೊಣೆ ತಃಖ್ತೆ ಹೆಚ್ಚು ಅರ್ಥಪೂರ್ಣವಾಗಬಹುದು. ಜತೆಗೆ ವಸೂಲಾಗಬೇಕಾದ ಸಾಲಗಳ ಕಡೆಗೆ ಗಮನ ನೀಡಲು ಅನುಕೂಲವಾಗುತ್ತದೆ;ವಸೂಲಾತಿ ಅಸಾಧ್ಯವೆನಿಸುವ ನೂರಾರು ಸಾಲಖಾತೆಗಳನ್ನು—ಮುಖ್ಯವಾಗಿ ಸರಕಾರಿ ಯೋಜನೆಯಡಿ ನೀಡಿದ ಸಾಲಗಳನ್ನು—ತೊಡೆದು ಹಾಕಲು ಶೀಘ್ರ ಕ್ರಮ ಅಗತ್ಯ.

ಪುನರುಜ್ಜೀವನ—ವಸೂಲಾತಿ ತಂತ್ರ?

ಅಸ್ವಸ್ಥ ಕೈಗಾರಿಕೆಗಳಲ್ಲಿ ಸಾಕಷ್ಟು ಹಣ ಸ್ಥಗಿತವಾಗಿದೆಯೆಂಬುದು ತಿಳಿದ ವಿಷಯ. ಪುನರುಜ್ಜೀವನವನ್ನು ಸಾಲ ವಸೂಲಿಯ ಒಂದು ತಂತ್ರವನ್ನಾಗಿ ಪರಿಗಣಿಸುವುದಾದರೆ ಕೆಲವು ಸಂಗತಿಗಳನ್ನು ತಿಳಿದಿರುವುದು ಒಳ್ಳೆಯದು : ಮಾರ್ಚ್, 92ರ ಅಂತ್ಯದಲ್ಲಿ 2,47,724 ಅಸ್ವಸ್ಥ ಕೈಗಾರಿಕಾ ಘಟಕಗಳಿಂದ ಬ್ಯಾಂಕುಗಳಿಗೆ 11,533.30 ಕೋಟಿ ರೂ. ಬಾಕಿಯಿತ್ತೆಂದು ತಿಳಿದುಬಂದಿದೆ. ಇದು ಬ್ಯಾಂಕುಗಳ ಒಟ್ಟು ಸಾಲದ ಸುಮಾರು ಶೇ. 10ರಷ್ಟು ಭಾಗವಾಗಿದೆ. ಇವುಗಳ ಪೈಕಿ ಶೇ. 99.13ರಷ್ಟು ಸಂಖ್ಯೆಯ ಘಟಕಗಳು ಸಣ್ಣ ಕೈಗಾರಿಕೆಗಳೆಂಬುದು ನಿಜವಾದರೂ ಬ್ಯಾಂಕುಗಳಿಗೆ ಬಾಕಿಯಾಗಿರುವ ಮೊತ್ತದಲ್ಲಿ ದೊಡ್ಡ ಕೈಗಾರಿಕೆಗಳದೇ ಸಿಂಹಪಾಲು. ಅಸ್ವಸ್ಥವಾಗಿರುವ ದೊಡ್ಡ ಕೈಗಾರಿಕೆಗಳಿಂದ 8,432.63 ಕೋಟಿ ರೂ. (ಎಂದರೆ ಒಟ್ಟು ಬಾಕಿಯು ಶೇ. 73.12ರಷ್ಟು) ಬಾಕಿ ಇತ್ತು. ಕೈಗಾರಿಕೆಗಳ ಪುನರುಜ್ಜೀವನ ಕಾರ್ಯಕ್ರಮಗಳ ಸಾಮಾಜಿಕ ಲಾಭದ ಸಂಗತಿ ಏನೇ ಇರಲಿ, ಅದರಿಂದ ಬ್ಯಾಂಕುಗಳಿಗೆ ತಗಲುವ ಖರ್ಚನ್ನೂ ಪುನರುಜ್ಜೀವನ ಕಾರ್ಯಕ್ರಮಗಳ ಪರಿಣಾಮವನ್ನೂ ಗಮನಿಸಿದಾಗ ಬ್ಯಾಂಕುಗಳು ಸಾಕಷ್ಟು ನಷ್ಟ ಹೊಂದುವುದನ್ನು ತಪ್ಪಿಸದೆ ವಿಧಿಯಿಲ್ಲವೆನಿಸುತ್ತದೆ.

ಸಣ್ಣ ಕೈಗಾರಿಕೆಯೊಂದರ ಪುನರುಜ್ಜೀವನಕ್ಕೆ ಹೆಚ್ಚು ಖರ್ಚಾಗಲಾರದಾದರೂ ಅಸ್ವಸ್ಥ ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ಬಲು ಹೆಚ್ಚು ಮತ್ತು ಬಹುತೇಕ ಸಂದರ್ಭಗಳಲ್ಲಿ ಪುನರುಜ್ಜೀವನ ಸಾಧ್ಯವೇ ಆಗುವುದಿಲ್ಲ. ಸಾವಿರಾರು ಕೈಗಾರಿಕಾ ಘಟಕಗಳು ಅಸ್ತಿತ್ವದಲ್ಲಿಲ್ಲ, ಅಥವಾ ಅವುಗಳ ಅಸ್ತಿತ್ವದ ಬಗ್ಗೆ ತಿಳಿದಿಲ್ಲ.

ದೊಡ್ಡ ಕೈಗಾರಿಕೆಗಳ ಪುನರುಜ್ಜೀವನದಲ್ಲಿ ಸವಾಲುಗಳೇ ಅಧಿಕ. ಅಲ್ಲಿ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ರಾಜ್ಯ—ಕೇಂದ್ರ ಸರಕಾರ, ವಿದ್ಯುಚ್ಛಕ್ತಿ ಮಂಡಳಿ, ವಾಣಿಜ್ಯ ತೆರಿಗೆ ವಿಭಾಗ, ನೌಕರರ ಭವಿಷ್ಯನಿಧಿ ಹೀಗೆ ಹಲವು ಸಂಸ್ಥೆಗಳ ಪಾತ್ರವಿರುವುದರಿಂದ ಸಮಸ್ಯೆಗಳು ಕ್ಲಿಷ್ಟವೆನಿಸುತ್ತವೆ. ಬ್ಯಾಂಕು ಪುನರುಜ್ಜೀವನ ಯೋಜನೆ ಸಿದ್ಧಪಡಿಸಿದರೂ ಸಾಲಗಾರರು ಸ್ವಭಾಗವನ್ನು ತರುವುದೂ ದುಸ್ತರವಾಗುತ್ತದೆ. ಅಸ್ವಸ್ಥ ಕೈಗಾರಿಕಾ ಕಂಪನಿಗಳ ಅಧಿನಿಯಮದಡಿ ರಚಿಸಲಾದ ಕೈಗಾರಿಕಾ ಹಣಕಾಸು ಪುನರ್ರಚನಾ ಮಂಡಲಿಯ ಒಂಬತ್ತುವರ್ಷದ ಅನುಭವದಿಂದ ಕೆಲವು ಸಂಗತಿಗಳು ಮನದಟ್ಟಾಗಿವೆ. ದೊಡ್ಡ ಕೈಗಾರಿಕಾ ಘಟಕಗಳಿಗೆ ಮತ್ತಷ್ಟು ಹಣ ನೆರವು ನೀಡಿ ಪುನರುಜ್ಜೀವನಗೊಳಿಸುವುದಕ್ಕಿಂತ ಸ್ವಸ್ಥ ಘಟಕಗಳಲ್ಲಿ ವಿಲೀನಗೊಳಿಸುವುದು ಹೆಚ್ಚು ಪ್ರಾಯೋಗಿಕವೆಂದು ಅನುಭವ ತೋರಿಸಿಕೊಟ್ಟಿದೆ. ಅಸ್ವಸ್ಥ ಕೈಗಾರಿಕಾಘಟಕಗಳನ್ನು ಸ್ವಸ್ಥ ಘಟಕಗಳೊಂದಿಗೆ ಸೇರಿಸುವುದರಿಂದ ವಸೂಲಾತಿಯ ಹಾದಿ ಸುಗಮವಾಗುತ್ತದೆ. ಈಗಿರುವ ಸ್ಥಿತಿಯಲ್ಲಿ ಪುನರುಜ್ಜೀವನ ಕಾರ್ಯಕ್ರಮಗಳ ಯಶಸ್ಸು ಸುಮಾರು ಶೇ. 15ರಷ್ಟು ಮಾತ್ರ.

ಇಷ್ಟಾದರೂ ಪುನರುಜ್ಜೀವನವನ್ನು ಅಸ್ವಸ್ಥ ಕೈಗಾರಿಕಾ ಘಟಕಗಳಿಂದ ಬರಬೇಕಾದ ಬಾಕಿಗಳ ವಸೂಲಿಗೆ ತಂತ್ರವಾಗಿ ಬಳಸಲು ಸಾಧ್ಯವೆಂಬುದನ್ನು ಮರೆಯುವಂತಿಲ್ಲ. ಘಟಕದ ಜೀವಂತಿಕೆಯನ್ನು ಕುರಿತು ನಿರ್ಧರಿಸಿ ಅಗತ್ಯವಾದಷ್ಟು ಮಾತ್ರ ನೆರವು/ರಿಯಾಯಿತಿಗಳನ್ನು ನೀಡಿ ಸಮರ್ಪಕ ಅನುಸರಣದಿಂದ ಸಮಂಜಸವಾದ ಅವಧಿಯೊಳಗೆ ಬಾಕಿ ವಸೂಲಿ ಮಾಡಿಕೊಳ್ಳಲು ಯತ್ನಿಸಬೇಕು.

ಒತ್ತೆಯಾದ ಆಸ್ತಿಗಳ ಜಪ್ತಿ

ಸಾಲ ವಸೂಲಿಗೆ ಬ್ಯಾಂಕುಗಳು ವ್ಯಾಪಕವಾಗಿ ಬಳಸದೆ ಇರುವ ತಂತ್ರಗಳಲ್ಲಿ ಬಹು ಮುಖ್ಯವಾದದ್ದು ಒತ್ತೆಯಾದ ಆಸ್ತಿಗಳ ಜಪ್ತಿ. ಉದ್ದೇಶಪೂರ್ವಕ ಕಟಬಾಕಿಗಳ ಸಂದರ್ಭದಲ್ಲಿ ಸಾಲಗಾರನ ವಾಹನ, ಯಂತ್ರೋಪಕರಣ ಮುಂತಾದ ಆಸ್ತಿಗಳನ್ನು ಜಪ್ತಿ ಮಾಡುವ ಬಗ್ಗೆ ಕೇವಲ ಸೂಚನೆ ಕೊಟ್ಟಾಗಲೂ ವಸೂಲಾತಿ ಉತ್ತಮವಾಗಿರುವ ಉದಾಹರಣೆಗಳಿವೆ. ಆಸ್ತಿಗಳ ಜಪ್ತಿಯಲ್ಲಿ ಬ್ಯಾಂಕುಗಳಿಗೆ ನೆರವಾಗುವ ಖಾಸಗಿ ಅಭಿಕರಣಗಳಿವೆ. ಜಪ್ತಿ ಮಾಡುವಾಗ ಬ್ಯಾಂಕುಗಳು ಎದುರಿಸಬೇಕಾದ ಕೆಲವು ತೊಡಕುಗಳನ್ನು ನಿವಾರಿಸಲು ಈ ಅಭಿಕರಣಗಳು ನೆರವಾಗುತ್ತವೆ. ಜಪ್ತಿ ಮಾಡಿದ ಆಸ್ತಿಗಳನ್ನು ಸುರಕ್ಷಿತವಾಗಿಡಲು ಗೋದಾಮು ಸೌಲಭ್ಯವನ್ನೂ ಜಪ್ತಿ ಅಭಿಕರ್ತರು ಒದಗಿಸಬಹುದು. ಅಭಿಕರ್ತರಿಗೆ ನೀಡುವ ಕಮಿಷನ್ ಹೆಚ್ಚೆನಿಸಬಹುದು. ಆದರೆ ವಸೂಲಾತಿಗೆ

ಅನ್ಯಮಾರ್ಗಗಳಿಲ್ಲದಿರುವುದರಿಂದ ಈ ವೆಚ್ಚದ ಸಂಗತಿ ದೊಡ್ಡದೆನಿಸಬಾರದು. ಈ ಕ್ರಮವನ್ನು ಹೆಚ್ಚಾಗಿ ಬಳಸುವುದು ಬ್ಯಾಂಕುಗಳಿಗೆ ಅಭ್ಯಾಸವಾದರೆ ಸಾಲಗಾರರು ಬ್ಯಾಂಕ್ ಸಾಲದ ಮರುಪಾವತಿ ಮಾಡುವ ದಿಸೆಯಲ್ಲಿ ತೀವ್ರವಾಗಿ ಯೋಚಿಸಿಯಾರು. ಈಗಿರುವ ಸ್ಥಿತಿಯಲ್ಲಿ ಮರುಪಾವತಿ ಮಾಡದಿದ್ದರೆ ಸಾಲಗಾರನಿಗೆ ಯಾವ ತೊಂದರೆಯೂ ಇಲ್ಲ.

ಸಾಲಗಾರರಿಗೆ ಜಫ್ತಿ ನೋಟೀಸು ಕೊಡಬೇಕು. ಜಫ್ತಿ ಮಾಡುವ ಆಸ್ತಿ ಹಾಗೂ ಜಫ್ತಿಯ ದಿನಾಂಕ/ಸಮಯಗಳನ್ನು ನೋಟೀಸಿನಲ್ಲಿ ಸೂಚಿಸಬೇಕಾಗಿಲ್ಲ. ಹಾಗೆ ಮಾಡಿದರೆ ಸಾಲಗಾರ ಮುನ್ನೆಚ್ಚರಿಕೆ ವಹಿಸಿ ಸರಕನ್ನು ಬೇರೆಡೆಗೆ ಸಾಗಿಸಬಹುದು. ಆವರಣಕ್ಕೆ ಬೀಗ ಹಾಕಿ ಜಫ್ತಿ ಅಸಾಧ್ಯವಾಗುವಂತೆ ಮಾಡಬಹುದು ಅಥವಾ ಕೋರ್ಟಿನಿಂದ ತಡೆ ಆದೇಶ ತರಬಹುದು. ಎಲ್ಲ ವ್ಯವಸ್ಥೆಗಳನ್ನೂ ಬ್ಯಾಂಕಿನ ಪರವಾಗಿ ಅಭಿಕರ್ತನೇ ಮಾಡಿದರೂ ಬ್ಯಾಂಕಿನ ಪ್ರತಿನಿಧಿಯಾಗಿ ಕ್ಷೇತ್ರಾಧಿಕಾರಿ ಅಥವಾ ಶಾಖಾ ವ್ಯವಸ್ಥಾಪಕರು ಜಫ್ತಿಯ ಸಂದರ್ಭದಲ್ಲಿ ಹಾಜರಿರಬೇಕು, ಪಂಚನಾಮೆ ಬರೆಸಬೇಕು. ಸರಕು ಅಥವಾ ಯಂತ್ರೋಪಕರಣಗಳನ್ನು ವಶಪಡಿಸಿಕೊಳ್ಳುವ ಕಾರ್ಯದ ಮುನ್ಸೂಚನೆಯನ್ನು ಪೋಲೀಸ್ ಠಾಣೆಗೂ ನೀಡಬೇಕು. ಇಲ್ಲದಿದ್ದರೆ ಬ್ಯಾಂಕು ಅನಗತ್ಯವಾಗಿ ಕ್ರಿಮಿನಲ್ ಅಪಾದನೆಗೆ ಒಳಗಾಗಬಹುದು.

ವಶಪಡಿಸಿಕೊಂಡ ವಸ್ತುಗಳ ಜೋಪಾನವೂ ಮುಖ್ಯ. ಅವುಗಳನ್ನು ವಿಲೇ ಮಾಡುವಲ್ಲಿ ವಿಳಂಬವಾದರೆ ಖರ್ಚುಗಳು ಹೆಚ್ಚಾಗುವುದರಿಂದ ಆದಷ್ಟು ಬೇಗ ವಿಲೇ ಮಾಡಲು ಕ್ರಮ ಕೈಗೊಳ್ಳಬೇಕು. ಹರಾಜು ಮಾಡುವ ಸಂದರ್ಭದಲ್ಲಿ ಸಾಲಗಾರನಿಗೆ ಹರಾಜಿನ ದಿನಾಂಕ ಸಮಯವನ್ನೂ ಸ್ಥಳವನ್ನೂ ಸ್ಪಷ್ಟವಾಗಿ ನಮೂದಿಸಿ ಸೂಚನೆ ಕಳಿಸುವುದು ಒಂದು ಕಾನೂನಿನ ಅಗತ್ಯ. ಹೀಗೆ, ಜಪ್ತಿಯು ಶ್ರಮದಾಯಕ ಕಾರ್ಯವಾದರೂ ವಸೂಲಾತಿಗೆ ಅದೊಂದು ಪರಿಣಾಮಕಾರಿ ತಂತ್ರ. ಮರುಪಾವತಿಯ ಬಗ್ಗೆ ಆಲೋಚನೆಯನ್ನೇ ಮಾಡದಿರುವ ಕುಳಗಳಿಗೆ ಬಿಸಿಮುಟ್ಟಿಸಲು ಇಷ್ಟು ಪರಿಣಾಮಕಾರಿಯಾದ ಬೇರೆ ತಂತ್ರವಿಲ್ಲ. ಈಗ ಜಫ್ತಿ ಕಾರ್ಯಾಚರಣೆಗಳು ಅಪರೂಪವಾಗಿ ಮಾತ್ರ ನಡೆಯುತ್ತದೆ. ಅವು ವ್ಯಾಪಕವಾಗಿ ನಡೆದರೆ ಸಾಲಮರುಪಾವತಿಗೆ ತಕ್ಕ ವಾತಾವರಣ ಮೂಡಬಹುದು. ನಿಯಂತ್ರಣ ಕಚೇರಿಗಳು ಅಭಿಕರ್ತರನ್ನು ಗುರುತಿಸಿ ಅವರ ಶುಲ್ಕಗಳ ಬಗೆಗೆ ಚರ್ಚಿಸಿ ಶಾಖೆಗಳಿಗೆ ಅಗತ್ಯವಾದ ಸೂಚನೆಗಳನ್ನು ನೀಡಬೇಕು. ಇಲ್ಲದಿದ್ದರೆ ಶಾಖಾ ಮಟ್ಟದಲ್ಲಿ ಜಫ್ತಿ ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗುವುದಿಲ್ಲ.

ಸಾಲ ವಸೂಲಾತಿಗೆ ನೆರವಾಗುವ ಎರಡು ಕಾಯ್ದೆಗಳನ್ನು ಬ್ಯಾಂಕುಗಳು ಸರಿಯಾಗಿ ಬಳಸಿಕೊಂಡಿಲ್ಲ ಅಥವಾ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಕರ್ನಾಟಕ ಸರಕಾರೀ ಹಣ ವಸೂಲಾತಿ ಅಧಿನಿಯಮವು ಯಾವುದೇ ಸರಕಾರೀ ಯೋಜನೆಯಡಿ ನೀಡಲಾದ ಸಾಲಗಳ ಮರುಪಾವತಿಗೆ ನೆರವಾಗುತ್ತದೆ. ಇಲ್ಲಿ ಬ್ಯಾಂಕುಗಳಿಗೆ ಬರಬೇಕಾದ ಬಾಕಿಯನ್ನು ಸರಕಾರಕ್ಕೆ ಬರಬೇಕಾದ ಬಾಕಿಯೆಂದು ಪರಿಗಣಿಸಲಾಗುವುದರಿಂದ ಸಾಲಗಳು ಕಾಲಮಿತಿಗೆ ಒಳಪಡುವುದಿಲ್ಲ ಎಂಬುದು ಗಮನಾರ್ಹ. ದಸ್ತೈವಜುಗಳನ್ನು ನವೀಕರಿಸದೆ ಹೋದರೂ ಪ್ರಕರಣವನ್ನು ದಾಖಲು ಮಾಡಿ ಡಿಕ್ರಿ ಪಡೆಯಬಹುದು. ಕರ್ನಾಟಕ ಕೃಷಿ ಉದರಿ ಮತ್ತು ಇತರ ವಿವಿಧ ಉಪಬಂಧಗಳ ಅಧಿನಿಯಮವು ಎಲ್ಲ ರೀತಿಯ ಕೃಷಿ ಸಾಲಗಳಿಗೆ ಅನ್ವಯಿಸುವಂಥದು. ರಾಜ್ಯಸರಕಾರದ ಈ ಎರಡು ಅಧಿನಿಯಮಗಳೇನೋ ಇವೆ. ಆದರೆ ಇವುಗಳನ್ನು ಬಳಸಿಕೊಳ್ಳುವ ದಿಶೆಯಲ್ಲಿ ಬ್ಯಾಂಕುಗಳು ಏನೂ ಕೆಲಸ ಮಾಡಿಲ್ಲ. ಇವಕ್ಕೆ ಪ್ರಚಾರ ಇಲ್ಲದಿರುವುದೂ ಒಂದು ಕೊರತೆಯೇ.

ಈ ಅಧಿನಿಯಮಗಳಡಿ ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರಲ್ಲಿ ಪ್ರಕರಣಗಳನ್ನು ದಾಖಲು ಮಾಡಬೇಕಾಗುತ್ತದೆ. ಅದಕ್ಕಾಗಿ ನಿಗದಿತ ನಮೂನೆಗಳನ್ನು ಪಡೆಯುವುದೂ ಕಷ್ಟ. ಸರಕಾರದ ವತಿಯಿಂದ ಸಾಲಗಾರರಿಗೆ ನೋಟೀಸು ಕೊಡುವುದರಿಂದ ಮೊದಲುಗೊಂಡು ಸರಕಾರಿ ಕಛೇರಿಗಳೇ ಮಾಡಬೇಕಾದ ಅನೇಕ ಕೆಲಸಗಳನ್ನೂ ಬ್ಯಾಂಕುಗಳೇ ಮಾಡಬೇಕಾಗಿದೆ. ನಮೂನೆಗಳ ಮುದ್ರಣ, ಅಂಚೆ ಖರ್ಚು ಮುಂತಾದುವು ಕೂಡ ಬ್ಯಾಂಕುಗಳ ಹೊಣೆಯಾಗಿ ಬಿಟ್ಟಿರುವುದು ವಾಸ್ತವ ಸಂಗತಿ. ಅಂತಿಮಆದೇಶವೇನೋ ಬ್ಯಾಂಕಿನ ಪರವಾಗಿಯೇ ದೊರೆಯುತ್ತದೆ. ಆದರೆ ಅದರಿಂದ ಬ್ಯಾಂಕುಗಳಿಗೆ ಹೆಚ್ಚಿನ ಲಾಭವೇನಿಲ್ಲ. 'ಡಿಕ್ರಿ' ಬಂದರೆ ಹಣ ಬಂದಂತಾಗಲಿಲ್ಲವಷ್ಟೇ? ಇಷ್ಟಾದರೂ ಈ ಕಾನೂನನ್ನು ಬ್ಯಾಂಕುಗಳು ಬಳಸಿಕೊಳ್ಳುವುದಾದರೆ ಎರಡು ಅನುಕೂಲಗಳಿವೆ: (1) ನ್ಯಾಯಾಲಯದಲ್ಲಿ ದಾವೆ ಹೂಡುವುದಕ್ಕೆ ಇನ್ನೂ ಅಧಿಕ ಶ್ರಮ, ಸಮಯ ಅಗತ್ಯವಿರುವುದರಿಂದ ಹೆಚ್ಚಿನ ಸಂಖ್ಯೆಯ ಸಣ್ಣ ಸಾಲಗಳನ್ನು ಕುರಿತು ಒಟ್ಟೊಟ್ಟಿಗೆ ಪ್ರಕರಣಗಳನ್ನು ಇತ್ಯರ್ಥ ಮಾಡಿಸಿಕೊಳ್ಳಬಹುದು. (2) ಕೇಂದ್ರ ಅಥವಾ ರಾಜ್ಯ ಸರಕಾರಿ ಯೋಜನೆಯಡಿ ನೀಡಿದ ಸಾಲಗಳ ವಸೂಲಾತಿಗೆ ಈ ಕಾಯಿದೆಯ ನೆರವು ಪಡೆದು ಪ್ರಕರಣ ದಾಖಲು ಮಾಡುವುದಾದರೆ ಸಾಲಗಳಿಗೆ ಕಾಲಮಿತಿಯ ನಿರ್ಬಂಧ ಇರುವುದಿಲ್ಲ. ಆದರೆ ನ್ಯಾಯಾಲಯಗಳಲ್ಲಿ ಹೀಗಲ್ಲ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ನೀಡಲಾಗಿರುವ ಸಣ್ಣ ಸಾಲಗಳನ್ನು ಗಮನಿಸಿದರೆ ಈ ಅನುಕೂಲತೆಗಳ ಪ್ರಾಮುಖ್ಯ ಅರಿವಾಗುತ್ತದೆ. ಉದರಿ ಖಾತರಿ ನಿಗಮಕ್ಕೆ ಕ್ಲೇಮುಗಳನ್ನು ಸಲ್ಲಿಸಿ ಇತ್ಯರ್ಥಪಡಿಸಿಕೊಳ್ಳಲು ಈ ಸರಕಾರೀ ಡಿಕ್ರಿಗಳು ನೆರವಾಗುತ್ತವೆ.

ಈ ಕಾಯಿದೆಗಳ ಲಾಭ ಪಡೆಯಲು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕವೂ ಯತ್ನಿಸಲು ಈಗ ಅವಕಾಶ ಕಲ್ಪಿಸಲಾಗಿದೆ. ಆದರೆ ಸರಕಾರಿ ಕಚೇರಿಗಳಲ್ಲಿ ಇದಕ್ಕಾಗಿ ಸರಿಯಾದ ಸಿಬ್ಬಂದಿ ಮತ್ತು ಸಲಕರಣೆಯ ವ್ಯವಸ್ಥೆ ಏನೇನೂ ಇಲ್ಲವಾಗಿರುವುದು ಒಂದು ದೊಡ್ಡ ಲೋಪವೆನ್ನದೆ ವಿಧಿಯಿಲ್ಲ. ಸರಕಾರದ ಯೋಜನೆಗಳ ಅನುಷ್ಠಾನದಲ್ಲಿ ಮುಖ್ಯ ಪಾತ್ರವಹಿಸುವ ಬ್ಯಾಂಕುಗಳು ಸರಕಾರದ ಮೇಲೆ ಒತ್ತಡ ಹೇರಿ ಈ ವ್ಯವಸ್ಥೆ ಸ್ವಲ್ಪಮಟ್ಟಿಗಾದರೂ ಕ್ರಿಯಾಶೀಲವಾಗುವಂತೆ ಮಾಡಬೇಕಾದೀತು.

ವಸೂಲಾತಿಗೆ ನ್ಯಾಯಾಧಿಕರಣಗಳು

ಬ್ಯಾಂಕ್ ಸಾಲಗಳ ವಸೂಲಾತಿಯ ವಿಷಯ ಬಂದಾಗ ತಪ್ಪದೆ ಚರ್ಚೆಗೆ ಬರುವ ಬ್ಯಾಂಕ್ ವಸೂಲಾತಿ ನ್ಯಾಯಾಧಿಕರಣಗಳನ್ನು ಇಲ್ಲಿ ಪ್ರಸ್ತಾವಿಸಲೇ ಬೇಕು. ಇಂಥ ನ್ಯಾಯಾಧಿಕರಣಗಳ ಸ್ಥಾಪನೆಯಾಗಬೇಕೆಂಬುದು ಬ್ಯಾಂಕರರ ಅನೇಕ ವರ್ಷಗಳ ಬೇಡಿಕೆ. 93–94ರ ಸಾಲಿನ ಕೇಂದ್ರ ಮುಂಗಡಪತ್ರ ಮಂಡಿಸುವಾಗ ಹಣಕಾಸು ಮಂತ್ರಿಗಳು ನ್ಯಾಯಾಧಿಕರಣಗಳ ಸ್ಥಾಪನೆಯ ಕಾರ್ಯಕ್ರಮವನ್ನು ಘೋಷಿಸಿದರು (ಫೆಬ್ರವರಿ–93). ಒಂದು ವರ್ಷವೇ ಕಳೆದು ಹೋದರೂ ಯಾವ ಪ್ರಗತಿಯೂ ಇಲ್ಲದೆ 'ನ್ಯಾಯಾಧಿಕರಣಗಳೆಲ್ಲಿ ?' ಎಂದು ಪತ್ರಿಕೆಗಳೂ ಬ್ಯಾಂಕುಗಳೂ ಪ್ರಶ್ನಿಸುವಂತಾದ ಮೇಲೆಯೇ ? ಸ್ವಲ್ಪ ಪ್ರಗತಿಯಾದ ಹಾಗೆ ತೋರುತ್ತಿದೆ. ನ್ಯಾಯಾಧಿಕರಣಗಳು ಇನ್ನೂ ಕೆಲಸ ಆರಂಭಿಸಿಲ್ಲವಾದರೂ ಬ್ಯಾಂಕ್ ಸಾಲಗಳ ವಸೂಲಾತಿಗೆ ಸಂಬಂಧಿಸಿದ ಈ ಹೊಸ ಬೆಳವಣಿಗೆಯನ್ನು ಕುರಿತಂತೆ ಕೆಲವು ಅಂಶಗಳನ್ನಿಲ್ಲಿ ಸ್ಥೂಲವಾಗಿ ನೋಡಬಹುದು.

ನ್ಯಾಯಾಧಿಕರಣಗಳ ಕಾರ್ಯಚಟುವಟಿಕೆಗಳು 1993ರಲ್ಲಿ ಲೋಕಸಭೆ ಅಂಗೀಕರಿಸಿದ "ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಬಾಕಿಯಾದ ಸಾಲಗಳ ವಸೂಲಿ ಅಧಿನಿಯಮದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಹತ್ತು ಲಕ್ಷ ರೂಪಾಯಿ ಮತ್ತು ಅದಕ್ಕಿಂತ ಅಧಿಕ ಮೊತ್ತದ ಬ್ಯಾಂಕ್ ಸಾಲಗಳು ಮಾತ್ರ ನ್ಯಾಯಾಧಿಕರಣಗಳ ಕಾರ್ಯವ್ಯಾಪ್ತಿಯಲ್ಲಿ ಬರುತ್ತವೆ. ಇಲ್ಲಿ ದಾವೆ ಹೂಡಲು ಬ್ಯಾಂಕುಗಳು ಮೊದಲು ಹತ್ತು ಲಕ್ಷ ರೂ.ಗೆ 12,000 ರೂ. ಮತ್ತು ಮುಂದಿನ ಪ್ರತಿ 1 ಲಕ್ಷಕ್ಕೆ 1,000 ರೂ ನಂತೆ ಶುಲ್ಕ ಕಟ್ಟಬೇಕಾಗುತ್ತಿದೆ. ಕೋರ್ಟಿನ ಶುಲ್ಕಕ್ಕೆ ಹೋಲಿಸಿದರೆ ಇದು ಕಡಿಮೆ. ವಕೀಲರ ನೇಮಕವೂ ಕಡ್ಡಾಯವಲ್ಲ. ಬ್ಯಾಂಕಿನ ಪರವಾಗಿ ಬ್ಯಾಂಕ್ ಅಧಿಕಾರಿಗಳೇ ವಾದ ಮಂಡಿಸಬಹುದು. ಪ್ರಕರಣಗಳನ್ನು ಅವು ದಾಖಲಾದ ದಿನಾಂಕದಿಂದ ಗರಿಷ್ಠ ಆರು ತಿಂಗಳ ಅವಧಿಯೊಳಗೆ ತೀರ್ಮಾನಿಸಲಾಗುವುದೆಂದು ಸೂಚಿಸಲಾಗಿದೆ. ನ್ಯಾಯಾಧಿಕರಣದ ತೀರ್ಪನ್ನು ಸಾಲಗಾರನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. ಆದರೆ ಹಾಗೆ ಮಾಡುವ ಮೊದಲು ದಾವೆಯ ಮೊತ್ತದ ಒಂದು ಭಾಗವನ್ನು (ಶೇ. 75) ಸಾಲಗಾರರು ನ್ಯಾಯಾಲಯದಲ್ಲಿ ಠೇವಣಿಯಾಗಿ ಇಡಬೇಕಾಗುತ್ತದೆ.

ಸದ್ಯಕ್ಕೆ ಕಲ್ಕತ್ತಾ, ಜೈಪುರ, ದೆಹಲಿ ಈ ಕೇಂದ್ರಗಳಲ್ಲಿ ನ್ಯಾಯಾಧಿಕರಣಗಳನ್ನು ಸ್ಥಾಪಿಸಿ ಅವಕ್ಕೆ ಅಧ್ಯಕ್ಷರನ್ನು ನೇಮಿಸಲಾಗಿದೆ. ಮುಂಬೈನಲ್ಲಿ ಮೇಲ್ಮನವಿ ಅಪೀಲು ನ್ಯಾಯಾಧಿಕರಣ ಮಾತ್ರ ಸ್ಥಾಪಿತವಾಗಿದೆ. ಅದಿನ್ನೂ ಕಾರ್ಯಾಚರಣೆ ಆರಂಭ ಮಾಡಿಲ್ಲ. ಜೈಪುರದಲ್ಲೂ ಕೆಲಸ ಆರಂಭವಾಗಿಲ್ಲ. ದೆಹಲಿಯಲ್ಲಿರುವ ನ್ಯಾಯಾಧಿಕರಣದ ಕಲಾಪಗಳಿಗೆ ದೆಹಲಿ ಹೈಕೋರ್ಟಿನಿಂದ ತಡೆಯಾಜ್ಞೆ ತರಲಾಗಿದೆ. ಈ ತಡೆಯಾಜ್ಞೆ ದೆಹಲಿ ಕೇಂದ್ರಾಡಳಿತ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುವುದೊಂದು ಸಮಾಧಾನದ ಅಂಶ. ಅಹಮದಾಬಾದ್, ಗುವಾಹತಿ, ಜಬ್ಬಲ್‌ಪುರ, ಪಾಟ್ನ, ಬೆಂಗಳೂರು, ಮದರಾಸು ಹಾಗೂ ಮುಂಬೈ—ಈ ಏಳು ಕೇಂದ್ರಗಳಲ್ಲಿಯೂ ನ್ಯಾಯಾಧಿಕರಣಗಳನ್ನು ಸ್ಥಾಪಿಸುವ ಯೋಜನೆ ಇದೆ; ಒಟ್ಟು ಹತ್ತು ಕೇಂದ್ರಗಳು.

ಕೆಲಸ ಆರಂಭಿಸಿರುವ ಕೇಂದ್ರವೆಂದರೆ ಕಲ್ಕತ್ತಾ ಒಂದೇ. ಅಲ್ಲಿ ಈಗಾಗಲೇ ಹಲವು ನೂರು ಪ್ರಕರಣಗಳನ್ನು ದಾಖಲೆ ಮಾಡಿಕೊಳ್ಳಲಾಗಿದೆ. ಸದ್ಯಕ್ಕೆ ನ್ಯಾಯಾಲಯಗಳಲ್ಲಿರುವ ಪ್ರಕರಣಗಳನ್ನು ನ್ಯಾಯಾಧಿಕರಣಗಳಿಗೆ ವರ್ಗಾಯಿಸಬೇಕಾಗಬಹುದು. ಆರಂಭದ ಕೆಲವು ತೊಡಕುಗಳು ಅನಿವಾರ್ಯ. ಆದರೂ ಬ್ಯಾಂಕುಗಳು ಬಹುಕಾಲದಿಂದ ಎದುರು ನೋಡುತ್ತಿರುವ ನ್ಯಾಯಾಧಿಕರಣಗಳು ಕೊನೆಗೂ ಅಸ್ತಿತ್ವಕ್ಕೆ ಬಂದ ಹಾಗಾಗಿರುವುದು ತುಂಬ ಸಂತೋಷದ ವಿಷಯವೆನ್ನಬೇಕು. 10 ಲಕ್ಷ ರೂ.ಗಿಂತ ಸಣ್ಣ ಸಾಲಗಳಿಗೆ ನ್ಯಾಯಾಧಿಕರಣಗಳ ವ್ಯಾಪ್ತಿಯಿಲ್ಲದಿರುವುದು ಹಾಗೂ ಕೇಂದ್ರಗಳ ಸಂಖ್ಯೆ ಸೀಮಿತವಾಗಿರುವುದು ಕೆಲವು ಕೊರತೆಗಳು. ಮುಂದೆ ಕೇಂದ್ರಗಳ ಸಂಖ್ಯೆ ಹೆಚ್ಚಿ ಕನಿಷ್ಠ ಮೊತ್ತದ ಮಿತಿ ಕಡಿಮೆಯಾಗುವುದೆಂದು ಆಶಿಸಬಹುದು. ಬ್ಯಾಂಕ್ ಅಧಿಕಾರಿಗಳೇ ವಾದ ಮಂಡಿಸಲು ಅವಕಾಶವಿದೆಯಾದರೂ ನ್ಯಾಯಾಧಿಕರಣದ ಕಲಾಪಗಳು ಇನ್ನೂ ಪರಿಚಿತವಾಗದಿರುವಾಗ ವಕೀಲರ ನೆರವು ಮುಂದುವರಿಯಬೇಕಾದೀತು. ಬ್ಯಾಂಕುಗಳ ಕಾನೂನು ವಿಭಾಗಗಳನ್ನು ಅಗತ್ಯ ಸಿಬ್ಬಂದಿಯ ನೇಮಕದಿಂದ ಬಲಪಡಿಸಲೂಬಹುದು.

ಬ್ಯಾಂಕುಗಳಿಗೆ ಸಾಲಗಾರರು ಒತ್ತೆಮಾಡದ ಆಸ್ತಿಗಳ ಜಪ್ತಿ, ವರ್ಗಾವಣೆ ಮತ್ತು ವಿಲೇಗೆ ಸಂಬಂಧಿಸಿದಂತೆ ನ್ಯಾಯಾಧಿಕರಣಗಳಿಗೆ ವಿಶೇಷ ಅಧಿಕಾರ ನೀಡಲಾಗಿದೆ. ತೀರ್ಪನ್ನು ಜಾರಿಗೆ ತರದಿರುವ ಸಾಲಗಾರರನ್ನು—ಕಂಪನಿ ಸಾಲಗಳ ಸಂದರ್ಭದಲ್ಲಿ ಅದಕ್ಕೆ ಹೊಣೆಗಾರರಾದ ಪ್ರವರ್ತಕರನ್ನು ಬಂಧಿಸುವಅಧಿಕಾರವೂ ಉಂಟು. ಮುಖ್ಯವಾಗಿ ಪ್ರಕರಣಗಳ ಇತ್ಯರ್ಥಕ್ಕೆ ಆರು ತಿಂಗಳ ಗಡುವು ನಿಗದಿಯಾಗಿರುತ್ತದೆ. ಹೀಗಾಗಿ ತಮ್ಮ ಸಾಲಗಳ ವಸೂಲಾತಿ ಉತ್ತಮವಾಗುವ ಬಗ್ಗೆ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು ವಿಶ್ವಾಸ ತಳೆಯಲು ಆಧಾರವಿದೆ.

ನ್ಯಾಯಾಧಿಕರಣಗಳು ಬಂದಿವೆಯೆಂದು ಬ್ಯಾಂಕರರು ಕೈಕಟ್ಟಿ ಕುಳಿತಿರಲಾರರು. ಸಾಲಮರುಪಾವತಿ ಕುರಿತಂತೆ ಸಾರ್ವಜನಿಕ ಶಿಕ್ಷಣ ನೀಡಿಕೆಯನ್ನೂ ಒಳಗೊಳ್ಳುವ ಸಮರ್ಥ ವಸೂಲಾತಿ ವ್ಯವಸ್ಥೆಯೊಂದನ್ನು ರೂಪಿಸಿ ಅದನ್ನು ಜಾರಿಗೆ ತರಬೇಕಾದ ಅಗತ್ಯ ತೀವ್ರವಾಗಿಯೇ ಇದೆ. ಎಲ್ಲ ನಿಯಂತ್ರಣ ಕಛೇರಿಗಳಲ್ಲೂ ವಸೂಲಾತಿ ವಿಭಾಗಗಳನ್ನು ತೆರೆಯುವುದರ ಜತೆಗೆ ನ್ಯಾಯಾಧಿಕರಣಗಳಿರುವ ಕೇಂದ್ರಗಳಲ್ಲಿ ಪ್ರತ್ಯೇಕ ವಸೂಲಿ ಕಚೇರಿಗಳನ್ನು ಸ್ಥಾಪಿಸುವ ಬಗ್ಗೆ ಬ್ಯಾಂಕುಗಳು ತೀರ್ಮಾನಿಸಬಹುದು. ದೊಡ್ಡ ಕಟಬಾಕಿದಾರರ ಪಟ್ಟಿಯನ್ನು ತಯಾರಿಸಿ ವಿವರವಾದ ಮಾಹಿತಿಯನ್ನು ಎಲ್ಲ ಬ್ಯಾಂಕು, ಹಣಕಾಸು ಸಂಸ್ಥೆಗಳಿಗೆ ಲಭ್ಯವಾಗಿಸಿದರೆ ಕಟಬಾಕಿದಾರರಿಗೆ ಮರುಸಾಲ ನೀಡಿಕೆಯಾದರೂ ತಪ್ಪೀತು. ಸಾಲಮೇಳಗಳನ್ನು ನಡೆಸಿದಷ್ಟೇ ಹುರುಪಿನಿಂದ ವಸೂಲಾತಿ ಮೇಳಗಳ

[24ನೇ ಪುಟ ನೋಡಿ

ಅಭಿರಕ್ಷಣ ಸೇವೆಗಳು

ಜಿ. ಎಸ್. ರವೀಂದ್ರ

ಭಾರತೀಯ ಸ್ಟೇಟ್ ಬ್ಯಾಂಕ್, ವಿದೇಶ ವ್ಯವಹಾರಗಳ ಶಾಖೆ, ಬೆಂಗಳೂರು

ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಬ್ಯಾಂಕುಗಳು ಹೊಸ ಹೊಸ ಮೇವುಗಳನ್ನು ಅರಸಹತ್ತಿವೆ. ಸಾರ್ವಜನಿಕರ ಹೊಸ ಹೊಸ ಅಪೇಕ್ಷೆಗಳನ್ನು ಗುರುತಿಸಿ, ಅವಕ್ಕೆ ಸ್ಪಂದಿಸಿ, ಸಾಂಪ್ರದಾಯಿಕ ಬ್ಯಾಂಕಿಂಗ್ ಚೌಕಟ್ಟಿನಿಂದ ಹೊರಬಂದು ಹೊಸ ಹೊಸ ಸೇವೆಗಳನ್ನು ಆರಂಭಿಸುತ್ತಿವೆ. ಅಭಿರಕ್ಷಣ ಸೇವೆ ಇಂಥವುಗಳಲ್ಲಿ ಒಂದು.

ಅನೇಕ ದಶಕಗಳವರೆಗೆ ಬ್ಯಾಂಕಿಂಗ್ ಎಂಬುದು ಒಂದು ಸೀಮಿತ ವ್ಯವಹಾರವನ್ನು ನೋಡಿಕೊಳ್ಳುವ ಹಣಕಾಸು ಸಂಸ್ಥೆಯಾಗಿತ್ತು. ಠೇವಣಿ ಸಂಗ್ರಹಿಸುವುದು ಹಾಗೂ ಸಾಲ ಕೊಡುವುದು ಈ ವ್ಯವಹಾರದ ಒಂದು ಮುಖ್ಯ ಅಂಗವಾಗಿತ್ತು. ಈ ಚಟುವಟಿಕೆಯಲ್ಲಿನ ಬಡ್ಡಿ ದರದಲ್ಲಿನ ವ್ಯತ್ಯಾಸವೇ ಬ್ಯಾಂಕಿನ ಲಾಭಕ್ಕೆ ಪ್ರಧಾನ ಕೊಡುಗೆಯಾಗಿತ್ತು. ಬ್ಯಾಂಕುಗಳ ರಾಷ್ಟ್ರೀಕರಣದ ನಂತರ ಸಾಮಾಜಿಕ ಹೊಣೆಗಾರಿಕೆ ಹೆಚ್ಚಾಗಿ ಬ್ಯಾಂಕುಗಳ ಮುಖ್ಯ ಚಟುವಟಿಕೆಯಾಗಿದ್ದ ಸಾಲ ನೀಡಿಕೆಯಲ್ಲಿ ಸ್ವಾತಂತ್ರ್ಯ ಕಡಿಮೆಯಾಗಿ ಅದು ಬ್ಯಾಂಕುಗಳ ಲಾಭಪ್ರದತೆಯ ಮೇಲೂ ಪರಿಣಾಮ ಬೀರತೊಡಗಿತು. ಹಾಗಾಗಿ ಬ್ಯಾಂಕುಗಳು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ನೂತನ ಮಾರ್ಗಗಳತ್ತ ಹೋಗಬೇಕಾದ್ದು ಅನಿವಾರ್ಯವಾಯಿತು. ಇದಕ್ಕೆ ಪೂರಕವಾಗುವಂತೆ ಹೊರಗಿನ ಆರ್ಥಿಕ ಚಟುವಟಿಕೆಗಳೂ, ಅಂತರರಾಷ್ಟ್ರೀಯ ವ್ಯವಹಾರಗಳೂ ನಾನಾ ರೀತಿಯಲ್ಲಿ ವಿಸ್ತರಿಸತೊಡಗಿದ್ದವು. ಈ ಬದಲಾವಣೆಗಳು ಆರ್ಥಿಕ ವ್ಯವಹಾರಗಳಲ್ಲಿ ತೊಡಗಿರುವ ಸಂಸ್ಥೆಗಳ/ವ್ಯಕ್ತಿಗಳ ಬ್ಯಾಂಕಿಂಗ್ ಅಗತ್ಯಗಳಲ್ಲೂ ಹೊಸದನ್ನು ಅಪೇಕ್ಷಿಸಿದುವು. ಸೇವೆಯನ್ನೆ ತನ್ನ ಕಾರ್ಯಕ್ಷೇತ್ರದಲ್ಲಿ ಮೂಲಮಂತ್ರವನ್ನಾಗಿಸಿಕೊಂಡಿದ್ದ ಬ್ಯಾಂಕುಗಳು ಇಂತಹ ಹೊಸ ಅಪೇಕ್ಷೆಗಳನ್ನು ಗುರುತಿಸಿ ಅವುಗಳಿಗೆ ಸ್ಪಂದಿಸಿ ತಮ್ಮ ಸಾಂಪ್ರದಾಯಿಕ ಬ್ಯಾಂಕಿಂಗ್ ಚೌಕಟ್ಟಿನಿಂದ ಹೊರಬಂದು ಹೊಸ ಹೊಸ ಸೇವೆಗಳನ್ನು ಆರಂಭಿಸುವಂತಾದ್ದು ಹೊಸ ರೀತಿಯ ಬ್ಯಾಂಕಿಂಗ್ ಪರಿಕಲ್ಪನೆಗೆ ಮೂಡಿಬಂದ ಪ್ರಾರಂಭದ ಹೆಜ್ಜೆಗಳು. ಇವುಗಳೇ ಪ್ರಾಯಶಃ ಇನ್ನು ಮುಂದೆ ಬ್ಯಾಂಕಿಂಗ್ ಬದುಕಿ ಉಳಿಯುವ ಹೆಜ್ಜೆಗಳಾಗಿವೆ. ಋಣಪ್ರತಿಭೂತಿಕರಣ, ಋಣಾಭಿಕರಣ ಮುಂತಾದ ಹೊಸ ಸೇವೆಗಳು ಬ್ಯಾಂಕಿಂಗ್‌ನ ಬದಲಾದ ದೃಷ್ಟಿಕೋನಕ್ಕೆ ಇತ್ತೀಚಿನ ಉದಾಹರಣೆಗಳಾಗಿವೆ. ಅಂತಹ ಹೊಸ ಸೇವೆಗಳ ಸಾಲಿಗೆ ತೀರಾ ಇತ್ತೀಚೆಗೆ ಸೇರ್ಪಡೆಯಾಗಿರುವ ಮತ್ತೊಂದು ಹೊಸ ಸೇವೆಯ 'ಅಭಿರಕ್ಷಣ ಸೇವೆಗಳು.'

ಹಿನ್ನೆಲೆ

ಭಾರತದಲ್ಲಿ ಇತ್ತೀಚೆಗೆ ಕೈಗೊಂಡ ಆರ್ಥಿಕ ನೀತಿಯ ಪರಿಣಾಮವಾಗಿ ಇಲ್ಲಿಯ ಬಂಡವಾಳ ಮಾರುಕಟ್ಟೆ ವ್ಯವಹಾರ—

1 ದಿನಂಪ್ರತಿ ನಡೆಯುವ ವ್ಯವಹಾರಗಳ ಸಂಖ್ಯೆಯಲ್ಲಿ ;

2 ದಿನಂಪ್ರತಿ ನಡೆಯುವ ವ್ಯವಹಾರಗಳ ಮೊತ್ತದಲ್ಲಿ ;

ಗಣನೀಯ ಪ್ರಮಾಣದಲ್ಲಿ ಏರಿದೆ. ಬಾಂಬೆ ಸ್ಟಾಕ್ ವಿನಿಮಯ ಕೇಂದ್ರ ಬಂಡವಾಳ ಮಾರುಕಟ್ಟೆಯ ಕೇಂದ್ರ. ಈ ಕೇಂದ್ರವೊಂದರಲ್ಲೇ ದ್ವಿತೀಯ ಮಾರುಕಟ್ಟೆ ವ್ಯವಹಾರಗಳ ಮಟ್ಟ 4000 ಪಾಯಿಂಟುಗಳ ಗಡಿಯನ್ನು ದಾಟಿರುವುದು ಈ ವ್ಯವಹಾರಗಳ ಗಾತ್ರದ ಪರಿಮಾಣವನ್ನು ಸೂಚಿಸುತ್ತದೆ. ಇದೊಂದೇ ವಿನಿಮಯ ಕೇಂದ್ರದಲ್ಲಿನ ವಾರ್ಷಿಕ ವ್ಯವಹಾರಗಳ ಮೊತ್ತ 1980–81ರಲ್ಲಿ ರೂ. 2476 ಕೋಟಿ ಇದ್ದದ್ದು 1991–92ರ ಹರ್ಷದ್ ಮೆಹ್ತಾ ಕಾಲದಲ್ಲಿ ರೂ. 71,700 ಕೋಟಿಗೆ ಏರಿತು. ಇನ್ನು 1991-92ರ ಲಭ್ಯ ಅಂಕಿ ಅಂಶಗಳು ರೂ. 45,6000 ಕೋಟಿಯನ್ನು ಸೂಚಿಸಿದೆ. ಹೊಸ ಬಂಡವಾಳ ಪತ್ರಗಳನ್ನು ನೀಡುವ, ತನ್ಮೂಲಕ ಬಂಡವಾಳ ವ್ಯವಹಾರಕ್ಕಿಳಿಯುವ ಕಂಪನಿಗಳೂ ಕೂಡ ಪ್ರಾಥಮಿಕ ಮಾರುಕಟ್ಟೆಯಿಂದ ಸುಮಾರು 150 ಕೋಟಿ ರೂ.ಗಳನ್ನು ಸಂಗ್ರಹಿಸಿದ್ದು ಈ ವರ್ಷದ ಸಾಲಿನಲ್ಲಿ ಅಂದಾಜು ರೂ. 36000 ಕೋಟಿಗಳನ್ನು ಸಂಗ್ರಹಿಸುವ ನಿರೀಕ್ಷೆ ಇದೆ. ಅಲ್ಲದೆ ಈ ಮಾರುಕಟ್ಟೆಗೆ ಪ್ರವೇಶಿಸುವ ಕಂಪನಿಗಳ ಸಂಖ್ಯೆಯೂ ಕೂಡ 100ರಿಂದ 200ಕ್ಕೂ ಹೆಚ್ಚು ಇದ್ದು ಇತ್ತೀಚಿನ ದಿನಗಳಲ್ಲಿ ಆರ್ಥಿಕ ಉದಾರೀಕರಣ ನೀತಿಯಿಂದಾಗಿ ವಿದೇಶಿ ಸಾಂಸ್ಥಿಕ ವಿನಿಯೋಜನ ಬಂಡವಾಳ ಹೂಡಿಕೆಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳುತ್ತಿದೆ. ಈ ಸಂಸ್ಥೆಗಳ ಹೂಡಿಕೆಗಳು ಈಗಾಗಲೆ ರೂ. 500 ಕೋಟಿ ಮಟ್ಟವನ್ನೂ ದಾಟಿದೆ ಎಂದರೆ ಇಂತಹ ಸಂಸ್ಥೆಗಳ ಪ್ರಭಾವ ಬಂಡವಾಳ ಮಾರುಕಟ್ಟೆಯಲ್ಲಿ ಎಷ್ಟರಮಟ್ಟಿಗೆ ಇದೆ ಎಂದು ಊಹಿಸಿಕೊಳ್ಳಬಹುದು. ಮುಂಬರುವ ವರ್ಷಗಳಲ್ಲಿ ಇದು ಇನ್ನೂ ಹೆಚ್ಚಾಗುವ ಸಾಧ್ಯತೆ

ಗಳಿವೆ ಎಂದು ಸ್ವತಃ ವಿತ್ತಮಂತ್ರಿಗಳೇ ಹೇಳಿಕೆ ನೀಡಿದ್ದಾರಾದ್ದರಿಂದ ಬಂಡವಾಳ ಮಾರುಕಟ್ಟೆ ನಮ್ಮ ಅರ್ಥವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿ ಬೆಳೆಯುವುದರಲ್ಲಿ ಸಂಶಯವಿಲ್ಲ. ಅರ್ಥವ್ಯವಸ್ಥೆಯ ಮತ್ತೊಂದು ಭಾಗವಾಗಿರುವ ಬ್ಯಾಂಕಿಂಗ್ ಇಂತಹ ಸಂದರ್ಭದಲ್ಲಿ ಯಾವ ಪಾತ್ರವನ್ನು ವಹಿಸಬೇಕು ? ಬಹಳ ಮುಖ್ಯವಾಗಿ ಬಂಡವಾಳ ಮಾರುಕಟ್ಟೆಯಲ್ಲಿನ ಬೆಳವಣಿಗೆಯ ಸದವಕಾಶವನ್ನು ತನ್ನ ಬೆಳವಣಿಗೆಗೂ ಬಳಸಿಕೊಳ್ಳಬೇಕು. ಹಾಗಾಗಿಯೆ ಬ್ಯಾಂಕುಗಳು ಒಂದು ಹೊಸ ಸೇವೆಯನ್ನು ನೀಡುವಂತಾದ್ದು. ಈ ಸೇವೆಯೆ 'ಅಭಿರಕ್ಷಣ ಸೇವೆಗಳು.'

ಅಭಿರಕ್ಷಣ ಸೇವೆ ಎಂದರೇನು ?

ಯಾವುದೇ ಒಂದು ಸಂಸ್ಥೆ ಮೇಲೆ ತಿಳಿಸಿದಂತಹ ಬಂಡವಾಳ ಮಾರುಕಟ್ಟೆಯಲ್ಲಿ ಪಾಲ್ಗೊಂಡು ತನ್ನ ಗ್ರಾಹಕನ ಪರವಾಗಿ ಬಂಡವಾಳ ಪತ್ರಗಳನ್ನು ಕೊಳ್ಳುವ, ಮಾರುವ, ವರ್ಗಾಯಿಸುವ ನೋಂದಾಯಿಸುವ ಹಾಗೂ ಅವುಗಳನ್ನು ತನ್ನ ಅಭಿರಕ್ಷೆಯಲ್ಲಿಟ್ಟುಕೊಂಡು ಸಂರಕ್ಷಿಸುವ ಸೇವೆಯೆ ಅಭಿರಕ್ಷಣ ಸೇವೆ. ಈ ಸೇವೆಯನ್ನು ನೀಡುವ ಸಂಸ್ಥೆಗಳೇ 'ಅಭಿರಕ್ಷಕ'ರುಗಳು.

ಅಭಿರಕ್ಷಣ ಸೇವೆ ಎಂಬುದು ಎರಡು ಹಂತಗಳಲ್ಲಿ ತನ್ನ ಗ್ರಾಹಕನಿಗೆ ನೀಡುವ ಸೇವೆಯಾಗಿರುತ್ತದೆ :

1 ಮುಖ್ಯವಾಗಿ ಬಂಡವಾಳ ಪತ್ರಗಳನ್ನು ಗುರುತಿಸಿಕೊಂಡು ಅವುಗಳನ್ನು ಕೊಳ್ಳುವ, ವರ್ಗಾಯಿಸುವ, ನೋಂದಾಯಿಸುವ ಕಾರ್ಯವನ್ನು ಪೂರ್ಣಗೊಳಿಸುವುದು, ನ್ಯಾಸಧಾರಿ ಸೇವೆ, ಡಿವಿಡೆಂಡ್ ಪಾವತಿ ಬಗ್ಗೆ ನಿಗಾವಹಿಸಿ ಅದನ್ನು ಕಾರ್ಯಗತಗೊಳಿಸುವುದು, ಹಕ್ಕಿನ ಹಾಗೂ ವಿಶೇಷ ಲಾಭಾಂಶ ನೀಡಿಕೆ ಜವಾಬ್ದಾರಿಯನ್ನು ನಿರ್ವಹಿಸುವುದು.

2 ಇನ್ನೊಂದು ಹಂತದ ಸೇವೆಯಲ್ಲಿ ಹೂಡಿಕೆಯ ವಿಶ್ಲೇಷಣೆ ನಡೆಸುವುದು, ಖಾತೆಗಳ ನಿರ್ವಹಣೆ ಬಗ್ಗೆ ವರದಿ, ಷೇರುಗಳ ಮೌಲ್ಯನಿರ್ಣಯದ ಬಗ್ಗೆ ತೀರ್ಮಾನಿಸುವುದು, ಕಂಪನಿ ಮೀಟಿಂಗ್‌ಗಳಲ್ಲಿ ಭಾಗಿಯಾಗುವುದು ಹಾಗೂ ಪ್ರತಿನಿಧಿಯಾಗಿ ಪ್ರತಿನಿಧಿ ಓಟುಗಳನ್ನು ಚಲಾಯಿಸುವುದು ಮತ್ತು ಜೊತೆಯಾಧಾರದ ಮೇಲೆ ಸ್ವಾಕು ಸಾಲಗಳನ್ನು ನೀಡುವುದು.

ಭಾರತದಲ್ಲಿ ಈವರೆಗೆ ಇಂತಹ ಸೇವೆಗಳೆಲ್ಲವನ್ನೂ ನೀಡುವ ಹಾಗೆ ಯಾವುದೇ ವಾಣಿಜ್ಯ ಬ್ಯಾಂಕುಗಳು ಕಾರ್ಯಪ್ರವೃತ್ತವಾಗಿರಲಿಲ್ಲ. ಎಲ್ಲೊ ಕೆಲವು ಸೇವೆಗಳನ್ನು ಮಾತ್ರ ಸೀಮಿತವಾಗಿ ನೀಡುತ್ತಿತ್ತು. ಭಾರತೀಯ ಸ್ಟೇಟ್ ಬ್ಯಾಂಕು ಈಗ ಈ ಕ್ಷೇತ್ರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅಭಿರಕ್ಷಣ ಸೇವೆಗಾಗಿಯೆ ಪ್ರತ್ಯೇಕ ಶಾಖೆಯನ್ನೇ ತೆರೆದು ಹೊಸ ಹೆಜ್ಜೆಯನ್ನಿಟ್ಟಿದೆ. ವಿದೇಶಿ ಬ್ಯಾಂಕುಗಳಲ್ಲಿ ಸಿಟಿ ಬ್ಯಾಂಕ್, ಹಾಂಗ್‌ಕಾಂಗ್ ಬ್ಯಾಂಕ್, ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕುಗಳು ಈ ಸೇವೆಯಲ್ಲಿ ಬಹಳ ಹಿಂದೆಯೆ ಕಾರ್ಯಪ್ರವೃತ್ತವಾಗಿರುವ ಬ್ಯಾಂಕುಗಳು. ಬ್ಯಾಂಕಲ್ಲದೆ ಬೇರೆ ಸಂಸ್ಥೆಯಾಗಿ ಈ ನಿಟ್ಟಿನಲ್ಲಿ ತನ್ನ ಸೇವೆಯನ್ನು ನೀಡುತ್ತಿರುವ ಮತ್ತೊಂದು ಭಾರತೀಯ ಸಂಸ್ಥೆ ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯ.

ನಮ್ಮ ಬ್ಯಾಂಕುಗಳಲ್ಲಿ ಈಗ ಕೈಗೆತ್ತಿಕೊಂಡಿರುವ ಗಣಕೀಕರಣ ಈ ನೂತನ ಸೇವೆಯ ಮೊದಲ ಹಂತದಲ್ಲಿ ಬಹಳ ಪ್ರಯೋಜನಕಾರಿಯಾಗುವುದು. ಎರಡನೇ ಹಂತದ ಸೇವೆ ಮಾತ್ರ ಸೂಕ್ಷ್ಮವಾದ ವಿವೇಚನಾಶಕ್ತಿಯನ್ನು ಒಳಗೊಂಡಿರುತ್ತದೆ. ಇಲ್ಲಿ ಚಿಂತನೆಯೆ ಪ್ರಧಾನವಾದದ್ದು. ಈ ಎರಡರ ಹದವಾದ ಮಿಶ್ರಣ ಮಾತ್ರ ಸಂತೃಪ್ತ ಸೇವೆಯನ್ನು ನೀಡಬಹುದಷ್ಟೆ ಅಲ್ಲ, ಅದರಿಂದ ಒಳ್ಳೆಯ ಲಾಭವನ್ನು ಗಳಿಸಬಹುದು. ಗ್ರಾಹಕರ ವಿಶ್ವಾಸವನ್ನು ಗಳಿಸಬಹುದು.

ತೊಡಕುಗಳು

ಅಭಿರಕ್ಷಣ ಸೇವೆಯನ್ನು ಭಾರತೀಯ ಬ್ಯಾಂಕುಗಳು ಹೆಚ್ಚಾಗಿ ಪ್ರವರ್ತಿಸದಿರಲು ಇರಬಹುದಾದ ತೊಡಕುಗಳೆಂದರೆ :

1 ಅಮೆರಿಕಾದ ಬಂಡವಾಳ ಪತ್ರಗಳ ವಿನಿಮಯ ಇಲಾಖೆ ಬಂಡವಾಳ ಹೂಡಿಕೆಯನ್ನು, ಅದರಲ್ಲೂ ಅಲ್ಲಿನ ಒಂದು ಸಂಸ್ಥೆ ವಿದೇಶದಲ್ಲಿ ಬಂಡವಾಳ ಹೂಡಿಕೆಯನ್ನು ನಿಯಂತ್ರಿಸುವ ಒಂದು ಇಲಾಖೆ. ವಿದೇಶಿ ಬಂಡವಾಳ ಹೂಡಿಕೆ ಸಂಸ್ಥೆಗಳು (ಅಮೆರಿಕಾ ಮೂಲದ ಇಂತಹ ಸಂಸ್ಥೆಗಳೇ ಇಲ್ಲಿನ ಹೆಚ್ಚು ಹೂಡಿಕೆ ಸಂಸ್ಥೆಗಳು) ಭಾರತದಲ್ಲಿ ಬ್ಯಾಂಕೊಂದನ್ನು ತನ್ನ ಅಭಿರಕ್ಷಕನನ್ನಾಗಿ ಗೊತ್ತು ಮಾಡಿಕೊಳ್ಳಲು ಇಚ್ಛೆಪಟ್ಟರೆ ಅಂತಹ ಬ್ಯಾಂಕಿನ ಬಂಡವಾಳ ಕನಿಷ್ಠ ರೂ. 600 ಕೋಟಿಗಳಷ್ಟಾದರೂ ಇರಬೇಕು ಎಂಬ ನಿಯಮವನ್ನು ಮಾಡಿದೆ. ಭಾರತದ ಬಹುತೇಕ ಬ್ಯಾಂಕುಗಳ ಬಂಡವಾಳ ಇಷ್ಟು ಇಲ್ಲವಾದ್ದರಿಂದ ಅವುಗಳು ಈ ಸೇವೆಯನ್ನು ಒದಗಿಸಲು ಅಸಹಾಯಕವಾಗಿವೆ.

2 ಪ್ರತಿ ಬಂಡವಾಳ ಪತ್ರಗಳ ವರ್ಗಾವಣೆಯೂ ಕಾಗದ ಪತ್ರಗಳ ಮುಖಾಂತರವೇ ಮಾಡಬೇಕಾಗಿರುವುದು ಇಲ್ಲಿನ ನಿಯಮವಾಗಿದ್ದು ಪ್ರತಿಯೊಂದು ಅಂತಹ ವರ್ಗಾವಣೆಯೂ ಸ್ಟಾಂಪು ಶುಲ್ಕವನ್ನು ಕಾನೂನಿನ ರೀತ್ಯ ಅಪೇಕ್ಷಿಸುತ್ತಾದ್ದರಿಂದ ಸ್ಟಾಂಪುಗಳನ್ನು ಕಾಗದಪತ್ರದ ಮೇಲೆ ಹಚ್ಚಬೇಕು. ಈ ಸಂಬಂಧವಾಗಿ ಧಾರಕನ ಸಹಿ ಪರೀಕ್ಷೆಗಳನ್ನು ಅನೇಕ ಪರೀಕ್ಷಾ ವಿಧಾನಗಳ ಮುಖಾಂತರ ಮಾಡಬೇಕಾಗುತ್ತದೆ. ಬಂಡವಾಳ ಪತ್ರಗಳ ವರ್ಗಾವಣೆ ಸಂಖ್ಯೆಯನ್ನು ಲೆಕ್ಕಿಸಿದಾಗ ಈ ಕೆಲಸ ಕಷ್ಟಕರವಾಗಿ ಕಂಡುಬರುತ್ತದೆ. ಪ್ರತಿ ಷೇರಿನ ಮೌಲ್ಯವು ರೂ. 10 ಅಥವಾ ರೂ. 100ರಲ್ಲಿ ಹೆಚ್ಚಾಗಿರುತ್ತದೆ. ಕೋಟಿಗಟ್ಟಲೆ ವ್ಯವಹಾರದಲ್ಲಿ ಅದೆಷ್ಟು ಷೇರು ಸರ್ಟಿಫಿಕೆಟ್ಟುಗಳಾಗುತ್ತದೆ ಎಂದು ಊಹಿಸಿ ನೋಡಿ. ಒಪ್ಪಿಕೊಂಡಿರುವ ನಿಯಮಗಳಿಗನುಸಾರವಾಗಿ ಎಲ್ಲವನ್ನೂ ಮಾಡುವುದಾದರೆ ಷೇರು ವರ್ಗಾವಣೆ ಕಾರ್ಯ ತಿಂಗಳುಗಟ್ಟಲೆ ಆಗುತ್ತದೆ.

3 ವಿದೇಶಿ ಬಂಡವಾಳ ಮಾರುಕಟ್ಟೆಗಳಲ್ಲಿ ಷೇರು ವರ್ಗಾವಣೆ ಕಾರ್ಯ ಬಹುತೇಕ ತಕ್ಷಣವೆ ಅಥವಾ ಗರಿಷ್ಠ ಒಂದು ವಾರದ ಮಿತಿಯೊಳಗೆ ಆಗಿಬಿಡುತ್ತದೆ. ಈ ರೀತಿಯ ತ್ವರಿತಗತಿಯ

ಸೇವೆಯಿಂದಾಗಿ ಷೇರಿನ ದ್ರವತ್ವ ಪ್ರಮಾಣದ ಮೇಲೆ ಕನಿಷ್ಠ ಪರಿಣಾಮವುಂಟಾಗುತ್ತದೆ. ನಮ್ಮಲ್ಲಿನ ಕಾಲಾವಧಿಯನ್ನು ಗಮನಿಸಿದಾಗ ಷೇರು ಮೌಲ್ಯದ ಮೇಲೆ, ಅದರ ದ್ರವತ್ವದ ಮೇಲೆ ಭಾರಿ ಪರಿಣಾಮವೇ ಆಗುತ್ತದೆ ಹಾಗೂ ಇಲ್ಲಿ ನಷ್ಟಸಂಭಾವ್ಯತೆ ಹೆಚ್ಚು. ತ್ವರಿತಗತಿಯ ಸೇವೆ ನೀಡುವ ಅಸಮರ್ಥಬ್ಯಾಂಕುಗಳು ಈ ಸೇವೆಯಲ್ಲಿ ಪಾಲ್ಗೊಳ್ಳಲು ಅಸಾಧ್ಯವಾಗಿದೆ.

4 ಈ ಸೇವೆಯನ್ನು ನೀಡಲು ಬ್ಯಾಂಕುಗಳು ಹಣ ತೊಡಗಿಸಿ, ತಂತ್ರಜ್ಞಾನವನ್ನು ಬಳಸಿ, ಸಿಬ್ಬಂದಿಗಳನ್ನು ತರಬೇತಿಗೊಳಿಸಿ ಕಾರ್ಯಪ್ರವೃತ್ತರಾದರೂ ಪ್ರಾರಂಭದಲ್ಲಿ ದೊರಕುವ ಪ್ರತಿಫಲ ಅತ್ಯಲ್ಪದ್ದಾಗಿರುತ್ತದೆ.

5 ಷೇರುಗಳ ವರ್ಗಾವಣೆ, ನೋಂದಾವಣೆ, ಇತ್ಯಾದಿ ವ್ಯವಹಾರಗಳಿಗೆ ಇರುವ ಅನೇಕ ಭಾರತೀಯ ನಿಯಮಗಳ ತೊಡಕುಗಳು, ಈ ಸಂಬಂಧವಾಗಿ ಭರಿಸಬೇಕಾಗಿರುವ ವೆಚ್ಚಗಳು ಬ್ಯಾಂಕುಗಳು ಈ ಸೇವೆಯತ್ತ ಗಮನ ಹರಿಸಲು ಹಿಂದೇಟು ಹಾಕುವಂತೆ ಮಾಡಿದೆ.

ಈಗಿನ ಪರಿಸ್ಥಿತಿ

ಆರ್ಥಿಕ ಉದಾರೀಕರಣದಿಂದಾಗಿ ಇವತ್ತಿನ ಸ್ಥಿತಿಗತಿಗಳೇ ಬೇರೆಯಾಗಿವೆ. ಬ್ಯಾಂಕಿಂಗ್ ಕ್ಷೇತ್ರದಲ್ಲೂ ಬಹಳಷ್ಟು ಸುಧಾರಣೆಗಳಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಅವುಗಳು ಕಾರ್ಯ ನಿರ್ವಹಿಸುವಂತಾಗಿದೆ. ನರಸಿಂಹಂ ಸಮಿತಿಯ ಶಿಫಾರಸ್ಸುಗಳನ್ನು ಒಪ್ಪಿಕೊಂಡಿರುವ ಫಲವಾಗಿ ತಮ್ಮ ಬಂಡವಾಳವನ್ನು ಬ್ಯಾಂಕುಗಳು ಹೆಚ್ಚಿಸಿಕೊಂಡಿವೆ. ಬಂಡವಾಳ ಹೂಡಿಕೆಗೆ ಮುಕ್ತ ವಾತಾವರಣವನ್ನು ಆರ್ಥಿಕ ಉದಾರಿಕರಣನೀತಿಯಲ್ಲಿ ಕಲ್ಪಿಸಲಾಗಿದೆ. ಆದ್ದರಿಂದ ಭಾರತೀಯ ಬ್ಯಾಂಕುಗಳನ್ನು ವಿದೇಶಿ ಬಂಡವಾಳ ಹೂಡಿಕೆ ಸಂಸ್ಥೆಗಳು ಇಂದು ಆಶ್ರಯಿಸಬಹುದಾಗಿದೆ. ಕಾರ್ಮಿಕ ಸಂಘಟನೆಗಳೊಡನೆ ಒಪ್ಪಂದ ಮಾಡಿಕೊಂಡಿರುವುದರಿಂದ ಗಣಕ ತಂತ್ರಜ್ಞಾನವನ್ನೂ ಭಾರತೀಯ ಬ್ಯಾಂಕುಗಳು ಬಳಸಿಕೊಳ್ಳಬಹುದಾಗಿದೆ. ಹಾಗಾಗಿ ತ್ವರಿತಗತಿಯ ಸೇವೆಯನ್ನೂ ಬ್ಯಾಂಕುಗಳು ನೀಡುವಷ್ಟು ಸಮರ್ಥವಾಗಿವೆ. ಕಾನೂನಿನ ಸಂಬಂಧವಾಗಿ ಉಂಟಾಗಬಹುದಾದ ತೊಡಕುಗಳನ್ನು ನಿವಾರಿಸಿ ಗಣಕೀಕೃತ ಕಾಗದರಹಿತ ವ್ಯವಹಾರಗಳನ್ನು ಭಾಗಶಃ ಒಪ್ಪಿಕೊಳ್ಳಲಾಗಿದೆ. ಈ ದಿಸೆಯಲ್ಲಿ ನೆರವಾಗಲು ರಾಷ್ಟ್ರೀಯ ಸ್ಟಾಕ್ ವಿನಿಮಯ ಕೇಂದ್ರವನ್ನೂ ತೆರೆಯಲಾಗಿದೆ. ಕಂಪನಿಗಳು, ಅಭಿರಕ್ಷಕರುಗಳು, ಗ್ರಾಹಕರ ನಡುವೆ ನೇರ ಸಂಪರ್ಕವನ್ನಿಟ್ಟುಕೊಂಡು ಕೂಡಲೆ ಬಂಡವಾಳ ಹೂಡಿಕೆಯ ಬಗ್ಗೆ, ಅವುಗಳ ವರ್ಗಾವಣೆಯ ಬಗ್ಗೆ ತ್ವರಿತವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಬಹುದಾಗಿದೆ. ಈ ಎಲ್ಲವೂ ಬ್ಯಾಂಕುಗಳು ಅಭಿರಕ್ಷಣ ಸೇವೆಯನ್ನು ನೀಡಲು ವರಗಳೆಂದೇ ಹೇಳಬಹುದು. ಕೆನರಾ ಬ್ಯಾಂಕು ಗಣಕಗಳ ತಂತ್ರಜ್ಞಾನಕ್ಕೆ ಹೊಸ ಏರ್ಪಾಟನ್ನು ಮಾಡಿಕೊಂಡು ತನ್ಮೂಲಕ ಅಭಿರಕ್ಷಣ ಸೇವೆಯನ್ನು ಪರಸ್ಪರ ನಿಧಿ ಸಂಸ್ಥೆಗಳಿಗೆ ನೀಡುತ್ತಿದೆ. ಭಾರತೀಯ ಬ್ಯಾಂಕುಗಳು ಕ್ರಮೇಣ ಇದರಲ್ಲಿ ಪಳಗಿ ಮಾರುಕಟ್ಟೆಯ ವಿದ್ಯಮಾನಗಳನ್ನು ತನ್ನ ಅನುಕೂಲಕ್ಕೆ ಬಳಸುವಂತಾದಲ್ಲಿ ಅದರ ಲಾಭಗಳಿಕೆ ಹೆಚ್ಚುವುದರಲ್ಲಿ ಸಂಶಯವಿಲ್ಲ. ★

ಬ್ಯಾಂಕ್ ಸಾಲಗಳ ವಸೂಲಾತಿ

21ನೇ ಪುಟದಿಂದ ಮುಂದುವರಿದುದು

ಪ್ರಯೋಗಗಳನ್ನು ನಡೆಸಿ ಪರಿಣಾಮವನ್ನು ನೋಡುವ ಯತ್ನ ಮಾಡಬಹುದು. ಉದ್ದೇಶಪೂರ್ವಕ ಕಟಬಾಕಿದಾರರ ವಿರುದ್ಧ ಸಿವಿಲ್ ಮೊಕದ್ದಮೆಗಳನ್ನು ಇತ್ಯರ್ಥಗೊಳಿಸಿಕೊಂಡ ಮೇಲೆ ಅವರ ಬಂಧನಕ್ಕೆ ಕ್ರಮ ಕೈಗೊಳ್ಳಬೇಕೆಂಬ ವಾದವೂ ಇದೆ. ಆದರೆ ಆ ಸಂದರ್ಭದಲ್ಲಿ ಸಾಲಗಾರರ ಬಂದೀಖಾನೆಯ ಖರ್ಚುಗಳನ್ನು ಬ್ಯಾಂಕುಗಳೇ ಭರಿಸಬೇಕಾಗುತ್ತದೆ. ಆದ್ದರಿಂದ ಸಾಲ ವಸೂಲಾತಿ ಮಾಡಲು ಇದನ್ನು ಕೇವಲ ಬೆದರಿಕೆ ಕ್ರಮವನ್ನಾಗಿ ಮಾತ್ರ ಬಳಸಬಹುದು. ಭಾರಿ ಕಟಬಾಕಿದಾರರು ಚುನಾವಣೆಗಳಿಗೆ ಸ್ಪರ್ಧಿಸುವುದನ್ನು ನಿಷೇಧಿಸುವ ಕ್ರಮ ಸ್ವಾಗತಾರ್ಹವಾದೀತು. ಕಟಬಾಕಿದಾರರ ಪಟ್ಟಿಯನ್ನು ತಯಾರಿಸಿ ಸಲ್ಲಿಸುವಂತೆ ಈಗಾಗಲೇ ರಿಸರ್ವ್ ಬ್ಯಾಂಕು ಸುತ್ತೋಲೆ ಕಳಿಸಿದೆ. ಮುಂದಿನ ಕ್ರಮಗಳನ್ನು ಕಾದು ನೋಡಬೇಕಾಗಿದೆ. ಹೀಗೆ ಬ್ಯಾಂಕುಗಳ ಆಂತರಿಕ ವಸೂಲಾತಿ ವ್ಯವಸ್ಥೆಯನ್ನು ಬಲಗೊಳಿಸುವುದರ ಜತೆಗೆ ರಾಜಕೀಯ ಇಚ್ಛಾಶಕ್ತಿಯಿಂದ ರೂಪಿಸಬೇಕಾದ ಕೆಲವು ನೀತಿಗಳಿಂದ ಸಾಲಗಳ ವಸೂಲಾತಿಗೆ ತಕ್ಕ ವಾತಾವರಣದ ನಿರ್ಮಾಣವಾಗಬೇಕು. ★

ನಮ್ಮ ಹೆಮ್ಮೆಯ ನಾಡು—ಕರ್ನಾಟಕ

ಎರಡು ಸಾವಿರ ವರ್ಷಗಳ ಭವ್ಯ ಇತಿಹಾಸ, ಪರಂಪರೆಯ ಪುಣ್ಯಭೂಮಿ ಕರ್ನಾಟಕ. ಇದು ವಿವಿಧ ಮತ ಧರ್ಮಗಳ ಸಂಗಮ; ಉದಾತ್ತ ದಾರ್ಶನಿಕರ ಮತ್ತು ಮಹಾನ್ ಸಾಹಿತಿಗಳ ನೆಲೆವೀಡು. ವಿವಿಧ ರಾಜ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ಒಂದೇ ಆಡಳಿತಕ್ಕೆ ಒಳಪಟ್ಟ ಅಪೂರ್ವದಿನ ಕನ್ನಡ ರಾಜ್ಯೋತ್ಸವ ದಿನ. ರಾಷ್ಟ್ರದ ಸರ್ವತೋಮುಖ ಪ್ರಗತಿಗೆ ಕರ್ನಾಟಕದ ಕೊಡುಗೆ ಗಣನೀಯ. ರಾಷ್ಟ್ರ ನಿರ್ಮಾಣದ ಮಹತ್ಕಾರ್ಯವನ್ನು ಮುಂದುವರಿಸುವುದು ನಮ್ಮೆಲ್ಲರ ಪರಮ ಕರ್ತವ್ಯ.

ದಾರ್ಶನಿಕರು, ಸಮಾಜ ಸುಧಾರಕರು, ಸಾಹಿತಿಗಳು, ವಿಜ್ಞಾನಿಗಳು, ಕರ್ನಾಟಕವನ್ನು ಶ್ರೀಮಂತಗೊಳಿಸಿದ್ದಾರೆ.

''ಮಾನವ ಜಾತಿ ತಾನೊಂದೆ ವಲಂ''

—ಪಂಪ

''ಸರ್ವಜ್ಞನೆಂಬುವನು ಗರ್ವದಿಂದಾದವನೆ ?
ಸರ್ವರೊಳೊಂದೊಂದು ನುಡಿಗಲಿತು
ವಿದ್ಯೆಯಾ ಪರ್ವತವೆ ಆದ ಸರ್ವಜ್ಞ.''

—ಸರ್ವಜ್ಞ

''ಒಂದೇ ಕರ್ನಾಟಕ ಒಂದೇ,
ಇಂದೆ, ಹಿಂದೆ, ಮುಂದೆ,
ಒಂದೇ ಕರ್ನಾಟಕ ಒಂದೇ.''

—ದ. ರಾ. ಬೇಂದ್ರೆ

''ಎಲ್ಲರೂ ದೇಶಾಭಿಮಾನದಿಂದ, ಸೇವಾಪ್ರೇಮದಿಂದ,
ಕರ್ನಾಟಕ ಸಂಸ್ಕೃತಿ ಭಾಷೆಗಳ ಸದಭಿಮಾನದಿಂದ
ಪ್ರೇರಿತರಾದರೆ; ಅವರು ಹೆಚ್ಚು ಹೆಚ್ಚು
ಸುಖಿಗಳಾಗುವರು.''

—ಸರ್. ಎಂ. ವಿಶ್ವೇಶ್ವರಯ್ಯ

''ಬರಿಯ ಚದರ ಮೈಲಿಗಳಲ್ತು ಕರ್ನಾಟಕದ
ದೇಶ ವಿಸ್ತೀರ್ಣಂ ನೆನೆ, ನೆನೆ,
ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ
ಮರೆಯದಿರು ಚದರ ಸಂವತ್ಸರದ ಶತಮಾನಗಳ ಕಾಲ
ವಿಸ್ತೀರ್ಣಮಂ ಪ್ರಾಣಮಯ ಭಾವಮಯ
ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ''

—ಕುವೆಂಪು

''ಈಸಬೇಕು ಇದ್ದು ಜೈಸಬೇಕು.''

—ಪುರಂದರದಾಸರು

''ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯ.''

—ಕನಕದಾಸರು

''ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ''

—ಬಸವಣ್ಣ

''ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ
ಬಾಯೊಲ್ಸಾಕಿದ್ರೂನೆ
ಮೂಗ್ನಲ್ ಕನ್ನಡ ಪದವಾಡ್ತೀನಿ
ನನ್ ಮನಸ್ನ ನೀ ಕಾಣೆ.''

—ಜಿ. ಪಿ. ರಾಜರತ್ನಂ

''ಕರ್ನಾಟಕತ್ವವೆಂದರೆ ಕೇವಲ ದೇಶಾಭಿಮಾನವಲ್ಲ,
ಕೇವಲ ಭಾಷಾಭಿಮಾನವಲ್ಲ. ಇವೆಲ್ಲವುಗಳನ್ನು ಮೀರಿದ,
ಇವೆಲ್ಲವುಗಳನ್ನು ಒಳಗೊಂಡ ಪರಿಶುದ್ಧ ಭಾವನೆ.''

—ಆಲೂರ ವೆಂಕಟರಾಯರು

''ಹಸಿರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ.''

—ಚನ್ನವೀರ ಕಣವಿ

—"ಕರ್ನಾಟಕ ವಾರ್ತೆ"

R. N. 36702/83

mysore electronics industries

Manufacturers of

Large size Digital Clocks, Bank Token Announcer System

No. 67, 3rd Cross, 22nd Main, Raghavendra Lay-Out
PADMANABHANAGAR, BANGALORE-560070 *Phone:* **601306**

QUARTZ DIGITAL CLOCKS TOKEN ANNOUNCER SYSTEM
SCORE BOARDS

DIGITAL CLOCKS (Digit Size: 50 mm/100 mm/200 mm/300 mm

*** Accurate and Reliable * Bright uniform bar display * Wide Viewing Angle * Excellent Readability * Built in battery back-up * Housed in beautiful and attractive Cabinets**

TOKEN ANNOUNCER SYSTEM (Male/Female/Dual Voice)

The MEI Token Announcer System for the bank Cash counters in the bank provides more gentle and decent announcement for the customer waiting for his turn. This electronic device is comfortable for the cashier to operate.


SCORE BOARDS

Useful in games played Indoor Stadia like Volley Ball / Basket Ball / Table Tennis / Billiards / Snooker and etc.

DIGITAL CLOCK



TOKEN ANNOUNCER



Our Satisfied Customers:

SBI / SBM / CORPORATION BANK / SYNDICATE BANK / UCO BANK / CO-OPERATIVE BANKS / HMT / BHEL / ISRO / TELECOM / etc.

Our Other Products:

DIGITAL TIMER AND MOVING INFORMATION DISPLAY SYSTEM

PRINTED BY G. H. KRISHNAMURTHY, MYSORE PRINTING AND PUBLISHING HOUSE, CLOCK TOWER SQUARE, MYSORE-1